ಸಂಪುಟ: 04 ಸಂಚಿಕೆ: 202 ಪುಟಗಳು: 08 ಶುಕ್ರವಾರ 04 ಅಕ್ಟೋಬರ್ 2024
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5


# ಉದಯ ವಾಹಿನಿ

UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಕ್ರೌರ್ಯಕ್ಕೆ ಕ್ರೌರ್ಯವೇ ಉತ್ತರ ಎನ್ನುವವರು ನಿಶ್ಚಿತವಾಗಿಯೂ ಬೌದ್ಧಿಕ ದಾರಿದ್ರ್ಯವನ್ನು ಅನುಭವಿಸುತ್ತಿರುತ್ತಾರೆ. ಅದು ವಿಷವರ್ತುಲದ ಆರಂಭವಷ್ಟೆ.

## ದಸರಾ ದರ್ಬಾರ್ ಸಿದ್ದು ಸರ್ಕಾರ್

**ರಾಜ್ಯದಲ್ಲಿ ದೇವರಾಜ ಅರಸು ಬಿಟ್ಟರೆ 5 ವರ್ಷ ಸಿಎಂ ಆಗಿದ್ದು ನಾನೇ, ಮುಂದಿನ 5 ವರ್ಷಗಳಲ್ಲೂ ಕೂಡ ನಾನೇ ಸಿಎಂ, ಈಗಲೂ ಎಷ್ಟೇ ತೊಡಕು ಬಂದರೂ ತಾಯಿ ಚಾಮುಂಡೇಶ್ವರಿಯ ಆಶೀರ್ವಾದ ನನಗೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಿಳಿಸಿದರು.**



**● ದಸರಾ ವೇದಿಕೆಯಲ್ಲೇ ಸಿದ್ದರಾಮಯ್ಯಗೆ ಜಿಟಿ ದೇವೇಗೌಡ ಬೆಂಬಲ ● ರಾಜೀನಾಮೆ ಕೇಳಿದ ಬಿಜೆಪಿ-ಜೆಡಿಎಸ್‌ಗೆ ● ನನಗೆ ಚಾಮುಂಡೇಶ್ವರಿಯ ಆಶೀರ್ವಾದ ಇದೆ ● ಐದು ವರ್ಷ ನಾನೇ ಸಿಎಂ : ಸಿದ್ದರಾಮಯ್ಯ**



• **ಉದಯವಾಹಿನಿ, ಮೈಸೂರು**

ಜಿ.ಟಿ.ದೇವೇಗೌಡ, ನೀನೇ ಒಂದು ಸಲ ಸೋಲಿಸಿಬಿಟ್ಟೇ. ನಾನು ಮಂತ್ರಿಯಾಗಿ 40 ವರ್ಷಗಳಾಯಿತು. ನಾನು ಯಾವ ತಪ್ಪೂ ಮಾಡಿಲ್ಲ. ಮಾಡಿದ್ದರೆ ಸುದೀರ್ಘ ರಾಜಕೀಯದಲ್ಲಿ ಇರುತ್ತಿರಲಿಲ್ಲ. ನಾವು ಜಿ.ಟಿ.ದೇವೇಗೌಡರು ಒಂದೇ ತಾಲ್ಲೂಕಿನವರು. ಜಿ.ಟಿ .ದೇವೇಗೌಡ ಸತ್ಯಕ್ಕೆ ಜಯ ಸಿಗಬೇಕು ಎಂದಿರುವುದು ನನಗೆ ಮತ್ತಷ್ಟು ಬಲ ತಂದಿದೆ ಎಂದರು. ನಾನು ಡಿಕೆ ಇಬ್ಬರೂ ಒಟ್ಟಿಗೆ ಬೆಟ್ಟಕ್ಕೆ ಬಂದು ಚಾಮುಂಡಿ ತಾಯಿಯ ಪೂಜೆ ಮಾಡಿ 5 ಗ್ಯಾರಂಟಿಗೆ ಶಕ್ತಿ ಕೊಡಮ ಎಂದು ಕೇಳಿಕೊಂಡಿದ್ದೆವು. ಅಧಿಕಾರಕ್ಕೆ ಬಂದ 8 ತಿಂಗಳಲ್ಲಿ ಎಲ್ಲಾ ಗ್ಯಾರಂಟಿ ಜಾರಿ ಮಾಡಿದ್ದೇವೆ. ಇದು ಚಾಮುಂಡಿಯ ಆಶೀರ್ವಾದ ಎಂದು ಹೇಳಿದರು. ದೇವರ ಹಾಗೂ ಜನರ ಆಶೀರ್ವಾದ ಇರುವವರೆಗೂ ನನ್ನನ್ನು ಯಾರಿಂದಲೂ ಏನು ಮಾಡಲು ಸಾಧ್ಯವಿಲ್ಲ. ಏನಪ್ಪಾ ಜಿಟಿ, ನೀನೇ ನನ್ನ ಒಂದು ಬಾರಿ ಸೋಲಿಸಿದ್ದೆ ಎಂದು ನಗೆ ಚಾಟಿಕೆ ಹಾರಿಸಿದರು.

1. ಐದು ವರ್ಷ ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಅವರು ಭವಿಷ್ಯ
2. ಸಿಎಂ ಸಿದ್ದರಾಮಯ್ಯ ಅವರನ್ನು ಹಾಡಿ ಹೊಗಳಿದ ಜಮೀರ್ ಯಾವತ್ತಿದ್ರೂ ನಮ್ಮ ಟಗರು ಟಗರೇ ಎಂದು ಭರ್ಜರಿ ಬ್ಯಾಟಿಂಗ್
3. ಸಿದ್ದರಾಮಯ್ಯ ಅವರ ವರ್ಚಸ್ಸು ಕುಗ್ಗಿಸಲು ವಿರೋಧ ಪಕ್ಷಗಳು ಮುಡಾ ಹಗರಣ ಆರೋಪವನ್ನು ಮಾಡುತ್ತಿವೆ ಎಂದು ಅವರು ವಾಗ್ದಾಳಿ

ಒಟ್ಟು 9 ಚುನಾವಣೆ ಗೆದ್ದಿದ್ದೇನೆ. 40 ವರ್ಷ ಮಂತ್ರಿಯೇ ಆಗಿದ್ದೇನೆ. ಚಾಮುಂಡಿ ಕೃಪೆಯಿಂದ ಇಲ್ಲಿವರೆಗೂ ತಪ್ಪು ಮಾಡಿಲ್ಲ. ತಪ್ಪು ಮಾಡಿದರೆ ಇಷ್ಟು ವರ್ಷ ದೀರ್ಘ ರಾಜಕಾರಣ ಮಾಡಲು ಆಗುತ್ತಿರಲಿಲ್ಲ. ನಾನು ಜಿ.ಟಿ.ದೇವೇಗೌಡರು ಒಂದೇ ತಾಲ್ಲೂಕಿನವರು, ಒಟ್ಟಿಗೆ ರಾಜಕಾರಣ ಮಾಡಿದ್ದೇವೆ?, ಸತ್ಯಕ್ಕೆ ಜಯ ಸಿಕ್ಕೇ ಸಿಗುತ್ತದೆ. ಹಾಗಾಗಿ ಜಿ.ಟಿ.ದೇವೇಗೌಡರಿಗೆ ಧನ್ಯವಾದ ಹೇಳುತ್ತೇನೆ ಎಂದು ತಿಳಿಸಿದರು.

ಮುಂದಿನ ಐದು ವರ್ಷ ನೂರಕ್ಕೆ ನೂರು ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ. ನಮ್ಮ ಟಗರು ಮುಖದ ಮೇಲೆ ಏನಾದರೂ ಭಯ ಕಾಣ್ತಿದ್ಯಾ...? ಯಾವತ್ತಿದ್ರೂ ನಮ್ಮ ಟಗರು ಟಗರೇ. ಹೀಗಂತ ಸಿಎಂ ಸಿದ್ದರಾಮಯ್ಯ ಪರವಾಗಿ ಸಚಿವ ಜಮೀರ್ ಅಹ್ಮದ್ ಖಾನ್ ಭರ್ಜರಿ ಬ್ಯಾಟಿಂಗ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ದಸರಾ ವೇದಿಕೆಯಲ್ಲಿ ಸಿಎಂ ಸಿದ್ದರಾಮಯ್ಯ ಪರವಾಗಿ ಜೆಡಿಎಸ್ ಶಾಸಕ ಜಿಟಿ ದೇವೇಗೌಡ ಬ್ಯಾಟಿಂಗ್ ವಿಚಾರವಾಗಿ ಮಾತನಾಡಿದ ಅವರು, ಜಿ ಟಿ ದೇವೇಗೌಡರಿಗೆ ಮುಡಾದ ಬಗ್ಗೆ ಸತ್ಯ ಗೊತ್ತಿದೆ. ಸಿಎಂ ಸಿದ್ದರಾಮಯ್ಯ ತಪ್ಪೇನಿಲ್ಲ ಮುಡಾದಲ್ಲಿ. ಈ ನಿಟ್ಟಿನಲ್ಲಿ ಸತ್ಯ ಹೇಳಿದಕ್ಕೆ ಜಿಟಿ ದೇವೇಗೌಡರಿಗೆ ನಾನು ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಇದೇ ವಿಚಾರವಾಗಿ ಬಿಜೆಪಿ ಶಾಸಕರಾದ ಎಸ್‌ಟಿ ಸೋಮಶೇಖರ್ ಕೂಡಾ ಮಾತನಾಡಿದ್ದಾರೆ. ಕೇವಲ ಸಿಎಂ ಪತ್ನಿಗೆ ಮಾತ್ರ ಮುಡಾ ಸೈಟ್ ಕೊಟ್ಟಿಲ್ಲ. 120 ಸೈಟ್ ಕೊಟ್ಟಿದ್ದಾರೆ ಎಂದಿದ್ದಾರೆ. ಬಿಜೆಪಿ ಕಾಲದಲ್ಲೇ ಸೈಟ್ ಕೊಟ್ಟಿರೋದು ಎಂದಿದ್ದಾರೆ ಎಂದು ಜಮೀರ್ ತಿಳಿಸಿದರು.

ಆದರೆ ಸಿಎಂ ಸಿದ್ದರಾಮಯ್ಯ ಅವರ ನೇರ ಪಾತ್ರ ಇಲ್ಲ. ಸಿದ್ದರಾಮಯ್ಯ ಹೆಸರಲ್ಲಿ ಸೈಟ್ ಇಲ್ಲ. ಸಿದ್ದರಾಮಯ್ಯ ಅವರ ಪತ್ನಿಗೆ ಅವರ ಸಹೋದರ ಈ ಜಮೀನನ್ನು ಕೊಟ್ಟಿರೋದು. ಹಾಗಾಗಿ ಸಿಎಂ ರಾಜೀನಾಮೆ ಅಗತ್ಯ ಇಲ್ಲ.ಸಿಎಂ ವರ್ಚಸ್ಸು ಸಹಿಸೋಕಾಗದೆ ಕೆಳಗಿಳಿಸೋಕೆ ಹೊರಟಿದ್ದಾರೆ ಎಂದು ಆರೋಪಿಸಿದರು. ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಮೇಲೆ ಭೂ ಹಗರಣಕ್ಕೆ ಸಂಬಂಧಿಸಿದಂತೆ ನೇರವಾದ ಆರೋಪಗಳು ಇವೆ. 38 ಗುಂಟೆ ಜಮೀನು ವಾಪಸ್ ಕೊಟ್ಟಿದ್ದಾರೆ. ಹೀಗಾಗಿ ಅವರು ರಾಜೀನಾಮೆ ಕೊಡಬೇಕು. ಎಫ್ ಐ ಆರ್ ಆದ ಕೂಡಲೇ ರಾಜೀನಾಮೆ ಕೊಡಬೇಕು ಅಂತಾರಲ್ಲ. ಜೆಡಿಎಸ್ ಬಿಜೆಪಿಯವರು ರಾಜೀನಾಮೆ ಕೊಡಬೇಕು ಎಂದು ಜಿಟಿ ದೇವೇಗೌಡ ಹೇಳಿದ್ದಾರೆ ಎಂದರು.

**ಒಟ್ಟು 9 ಚುನಾವಣೆ ಗೆದ್ದಿದ್ದೇನೆ**

### ಪತ್ನಿಗೆ ನುಡಿನಮನ

ತಮ್ಮ ದಿವಂಗತ ಪತ್ನಿ ಕಮಲಾ ಹಂಪನಾ ಅವರನ್ನು ನೆನೆದು ಹಂಪಾ ನಾಗರಾಜಯ್ಯ ಅವರು ಭಾವುಕರಾದರು. 88 ವರ್ಷದ ಸುದೀರ್ಘ ಜೀವನದ ನೆನಪು ಮಾಡಿಕೊಂಡ ಅವರು, 71 ವರ್ಷದ ಸ್ನೇಹದ ಸುಖ ನೀಡಿದೆ, 63 ವರ್ಷ ಮಡದಿಯಾಗಿ ಜೊತೆಯಾಗಿದ್ದೆ, ಆರು ವರ್ಷಗಳ ಕಾಲ ಸಹಪಾಠಿಯಾಗಿದ್ದೆ, ನಿನ್ನ ದಿವ್ಯ ನೆನಪಿಗೆ ಈ ಗೌರವ ಸಮರ್ಪಣೆ ಎಂದು ಭಾವುಕರಾಗಿ ನುಡಿನಮನ ಸಲ್ಲಿಸಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಸಚಿವ ಡಾ ಎಚ್ ಸಿ ಮಹದೇವಪ್ಪ, ಶಾಸಕ ಜಿಟಿ ದೇವೇಗೌಡ ಸೇರಿದಂತೆ ಹಲವು ಗಣ್ಯರು ಇದ್ದರು.

### ಸಿದ್ದರಾಮಯ್ಯ ಪರ ಜಿ.ಟಿ ದೇವೇಗೌಡ ಭರ್ಜರಿ ಬ್ಯಾಟಿಂಗ್!

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಆಗ್ರಹಿಸುತ್ತಿದ್ದರೆ, ಜೆಡಿಎಸ್ ಶಾಸಕ ಜಿಟಿ ದೇವೇಗೌಡ ಅವರು ಸಿದ್ದರಾಮಯ್ಯ ಪರವಾಗಿ ಅಚ್ಚರಿಯ ಹೇಳಿಕೆ ನೀಡಿದ್ದಾರೆ. ಮೈಸೂರು ದಸರಾ ವೇದಿಕೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಪರವಾಗಿ ಭರ್ಜರಿಯಾಗಿಯೇ ಬ್ಯಾಟಿಂಗ್ ಮಾಡಿದ್ದಾರೆ.



ಮೈಸೂರು ದಸರಾ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಪರವಾಗಿ ಬ್ಯಾಟಿಂಗ್ ಮಾಡಿದರು. ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಏಕೆ ರಾಜೀನಾಮೆ ನೀಡಬೇಕು ಎಂದು ಪ್ರಶ್ನಿಸಿದರು. ಹಾಗಾದರೆ ಎಚ್‌ಡಿ ಕುಮಾರಸ್ವಾಮಿ ರಾಜೀನಾಮೆ ಕೊಡ್ತಾರಾ? ಎಂದು ಜೆಡಿಎಸ್ ನಾಯಕರ ವಿರುದ್ಧನೇ ಹರಿಹಾಯ್ದರು. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ಅವರ ರಾಜೀನಾಮೆಗೆ ಒತ್ತಾಯ ಹೆಚ್ಚಾಗುತ್ತಿದೆ. ಅದರಲ್ಲೂ ಮಾಜಿ ಸಿಎಂ ಮತ್ತು ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ. ಮತ್ತೊಂದು ಕಡೆಯಲ್ಲಿ ಬಿಜೆಪಿ ನಾಯಕರು ಸಿದ್ದರಾಮಯ್ಯ ರಾಜೀನಾಮೆ ಬೇಡಿಕೆ ಇಟ್ಟಿದ್ದಾರೆ.

### ವಿಪಕ್ಷಗಳಿಗೆ ಪರೋಕ್ಷ ಟಾಂಗ್

ವಿಪಕ್ಷಗಳಿಗೂ ಅವರು ಪರೋಕ್ಷವಾಗಿ ಟಾಂಗ್ ನೀಡಿದರು. ಸರ್ಕಾರ ಅಸ್ಥಿರ ಮಾಡಬೇಡಿ ಎಂಬ ಕಿವಿಮಾತು ಹೇಳಿದರು. ಸರ್ಕಾರಗಳನ್ನು ಉರುಳಿಸುವ ದುರಾಲೋಚನೆ ಬರದಂತೆ ತಡೆಯಬೇಕು. ಚುನಾಯಿತ ಸರ್ಕಾರಗಳನ್ನು ಉಳಿಸುವ ಚಿಂತನೆ ಆಗಬೇಕು. ಲೋಕಾಂಬಿಕೆಯೂ ಅಂತಹ ಚಿಂತನೆ ಮೂಡಿಸಲಿ. ಕೆಡಹುವುದು ಸುಲಭ, ಕಟ್ಟುವುದು ಕಷ್ಟ.ಮೊದಲೇ ದೊಡ್ಡ ಹೊರೆಗಳಿಂದ ಶ್ರೀಸಾಮಾನ್ಯರು ಬಳಲಿ ಬಸವಳಿದಿದ್ದಾರೆ. ಪುನಃ ನಡೆಯುವ ಚುನಾವಣೆಗಳು ದೊಡ್ಡ ಹೊರೆಯಾಗಲಿವೆ. ಜನರಿಗೆ ಇನ್ನಷ್ಟು ಭಾರ ಹೇರಿದರೆ ಕುಸಿದುಬಿಡುತ್ತಾನೆ. ಯಾವ ಪಕ್ಷವೂ ಅಧಿಕಾರದಲ್ಲಿ ಶಾಶ್ವತವಾಗಿ ಇರಲು ಸಾಧ್ಯವಿಲ್ಲ. 'ಚಕ್ರಾರ ಪಂಕ್ತಿರಿವ ಗಚ್ಛತಿ ಭಾಗ್ಯ ಪಂಕ್ತಿಃ' ಸೋತ ಪಕ್ಷವು ಮತ್ತೆ ಅಧಿಕಾರಕ್ಕೆ ಬರಬಹುದು. ಜನಮನವನ್ನು ತಮ್ಮ ಪರವಾಗಿ ಒಲಿಸಿಕೊಳ್ಳಲು ಐದು ವರ್ಷ ಸಜ್ಜಾಗಬಹುದು ಎಂದು ಅಭಿಪ್ರಾಯಪಟ್ಟರು.

## ಜನರ ಆಶೋತ್ತರಗಳಿಗೆ ಅಧಿಕಾರಿ ಸ್ಪಂದಿಸಿ: ಸಚಿವ ಮಧು ಬಂಗಾರಪ್ಪ

• **ಉದಯವಾಹಿನಿ, ಶಿವಮೊಗ್ಗ**

ಸೌಲಭ್ಯ ಅರಸಿ ಕಚೇರಿಗೆ ಆಗಮಿಸುವ ಗ್ರಾಮೀಣ ಮತ್ತು ನಗರ ಪ್ರದೇಶದ ಸಾರ್ವಜನಿಕರಿಗೆ ಅಧಿಕಾರಿಗಳು ಸಕಾಲದಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಧು ಎಸ್ ಬಂಗಾರಪ್ಪ ಅವರು ಹೇಳಿದರು. ಅವರು ಇಂದು ಸಾಗರ ಸಮೀಪದ ತಾಳಗುಪ್ಪದಲ್ಲಿ ಏರ್ಪಡಿಸಲಾಗಿದ್ದ ಜನಸ್ಪಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಸಮಾನ ದೃಷ್ಟಿಕೋನದಿಂದ ಗಮನಿಸುವುದಾಗಿ ತಿಳಿಸಿದ ಅವರು ತಾಳಗುಪ್ಪ ಹಾಗೂ ಸುತ್ತಮುತ್ತಲ ಗ್ರಾಮೀಣ ಪ್ರದೇಶಗಳ ಜನರ ಅಹವಾಲುಗಳನ್ನು ಆಲಿಸಿ, ಅವರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ತಿಳಿಸಿದರು. ಜನರ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರ ಬದ್ಧವಾಗಿದ್ದು, ಜನರು ಆತಂಕಪಡುವ ಅಗತ್ಯವಿಲ್ಲ. ಜನರ ಆಶೋತ್ತರಗಳಿಗೆ ಪೂರಕವಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುತ್ತಿದೆ ಎಂದರು.

## ಜಿಟಿಡಿ ಸತ್ಯ ಹೇಳಿದ್ದಾರೆ, ಅಶೋಕ್ ಬಗ್ಗೆ ಬಿಜೆಪಿ ನಾಯಕರು ಉತ್ತರಿಸಲಿ

• **ಉದಯವಾಹಿನಿ, ಬೆಂಗಳೂರು**

ಮುಡಾ ಪ್ರಕರಣ ಕ್ಕೆ ಸಂಬಂಧಿಸಿದಂತೆ ಜಿ.ಟಿ. ದೇವೇಗೌಡರು ಸತ್ಯ ಹೇಳಿದ್ದಾರೆ. ಇದನ್ನೇ ನಾವು ಮೊದಲಿನಿಂದ ಹೇಳಿಕೊಂಡು ಬಂದಿದ್ದೇವೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಡಾ ಪ್ರಕರಣ ದಲ್ಲಿ ಸಿದ್ದರಾಮಯ್ಯ ಅವರ ಪಾತ್ರ ಇಲ್ಲ, ಹೀಗಾಗಿ ಅವರು ರಾಜೀನಾಮೆ ಕೊಡುವ ಅಗತ್ಯ ಇಲ್ಲ ಎಂದು. ಮೊದಲ ದಿನದಿಂದ ನಾವು ಹೇಳುತತ್ತಲೇ ಇದ್ದೇವೆ. ಇದೀಗ ಜಿಟಿ ದೇವೇಗೌಡ, ಎಸ್ ಟಿ ಸೋಮಶೇಖರ್ ಹೇಳುತ್ತಿದ್ದಾರೆ. ಯಾವುದೇ ಕಾರಣ ಕ್ಕೂ ಸಿದ್ದರಾಮಯ್ಯ ರಾಜೀನಾಮೆ ಕೊಡುವುದಿಲ್ಲ. ಇವರೇ ಐದು ವರ್ಷಮುಖ್ಯಮಂತ್ರಿ ಯಾಗಿರಲಿದ್ದಾರೆ ಎಂದು ಹೇಳಿದರು.

## ರಾಜ್ಯಾಧ್ಯಕ್ಷರನ್ನು ಪ್ರಶ್ನಿಸುವುದು ಹೈಕಮಾಂಡನ್ನೇ ಪ್ರಶ್ನಿಸಿದಂತೆ!

• **ಉದಯವಾಹಿನಿ, ಬೆಂಗಳೂರು**

ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಬಿವೈ ವಿಜಯೇಂದ್ರ ಆಪ್ತರು ಮುಗಿಬಿದ್ದಿದ್ದಾರೆ. ವಿಜಯೇಂದ್ರ ನಾಯಕತ್ವದ ವಿರುದ್ಧ ಪ್ರಶ್ನೆ ಮಾಡುತ್ತಿದ್ದ ಯತ್ನಾಳ್ ಹಾಗೂ ಟೀಂಗೆ ಹಿರಿಯ ಬಿಜೆಪಿ ಮುಖಂಡ ಹರತಾಳು ಹಾಲಪ್ಪ ತಿರುಗೇಟು ನೀಡಿದ್ದಾರೆ. ರಾಜ್ಯಾಧ್ಯಕ್ಷರನ್ನು ಪ್ರಶ್ನಿಸುವುದು ಹೈಕಮಾಂಡ್ ಪ್ರಶ್ನೆ ಮಾಡಿದಂತೆ ಎಂದು ಹಾಲಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಿಜೆಪಿಯ ಹಿರಿಯರಾದ ಬಸನಗೌಡ ಪಾಟೀಲ್ ಯತ್ನಾಳ್ ಅವರು ನಮ್ಮ ರಾಜ್ಯಾಧ್ಯಕ್ಷ ವಿಜಯೇಂದ್ರರ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಅನಗತ್ಯವಾಗಿ ಚರ್ಚೆಗಳನ್ನು ಮಾಡುತ್ತಿದ್ದಾರೆ. ಅವರಿಗೆ ಅನುಭವ ಇಲ್ಲ; ಚಿಕ್ಕವರು ಎಂದೆಲ್ಲ ಮಾತನಾಡುತ್ತಾರೆ ಎಂದು ಟೀಕಿಸಿದರು. ಯಡಿಯೂರಪ್ಪ ಅವರ ಮಗ ಎಂಬ ಕಾರಣಕ್ಕೆ ಒಪ್ಪುವುದಿಲ್ಲ ಎನ್ನುತ್ತಾರೆ. ಯತ್ನಾಳ್‌ರಲ್ಲೇ ಒಂದಷ್ಟು ಗೊಂದಲಗಳಿವೆ. ವಿಜಯೇಂದ್ರರನ್ನು ರಾಜ್ಯದ ಅಧ್ಯಕ್ಷರನ್ನಾಗಿ ಮಾಡುವ ಸಂದರ್ಭದಲ್ಲಿ ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ, ನರೇಂದ್ರ ಮೋದಿಯವರ ಸಲಹೆ ಪಡೆದು ನೇಮಕ ಮಾಡಿದ್ದಾರೆ ಎಂದು ವಿವರಿಸಿದರು.

## ಕಾಂಗ್ರೇಸ್ ಹೈಕಮಾಂಡ್ ಹಲ್ಲು ಇಲ್ಲದ ಹೈಕಮಾಂಡ್

• **ಉದಯವಾಹಿನಿ, ಕಲಬುರಗಿ**

'ಕಾಂಗ್ರೆಸ್ ಹೈಕಮಾಂಡ್ ಹಲ್ಲು ಇಲ್ಲದ ಹೈಕಮಾಂಡ್ ಆಗಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಪಡೆಯಲು ಆಗುತ್ತಿಲ್ಲ' ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಎನ್.ರವಿಕುಮಾರ್ ಟೀಕಿಸಿದರು. 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂಸತ್ತಿನಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಉದ್ದುದ್ದ ಭಾಷಣ ಮಾಡುತ್ತಾರೆ. ಬಿಜೆಪಿಯಲ್ಲಿ ಏನಾದರು ಸಣ್ಣ-ಪುಟ್ಟ ಬೆಳವಣಿಗೆ ನಡೆದರೆ ರಾಜೀನಾಮೆ ಕೇಳುತ್ತಾರೆ. ಅವರದ್ದೇ ಪಕ್ಷದ ಸಿದ್ದರಾಮಯ್ಯ ಅವರು ದೊಡ್ಡ ಹಗರಣದಲ್ಲಿ ಸಿಲುಕಿದ್ದಾರೆ. ನ್ಯಾಯಾಲಯ ಕೂಡ ತನಿಖೆಗೆ ಆದೇಶಿಸಿದೆ. ನೈತಿಕತೆ ಇದ್ದರೆ ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಪಡೆಯಲಿ' ಎಂದರು. ಸಿದ್ದರಾಮಯ್ಯ ಅವರು ನ್ಯಾಯಾಲಯಕ್ಕಿಂತ ಆತ್ಮಸಾಕ್ಷಿ ದೊಡ್ಡದು ಎನ್ನುತ್ತಾರೆ. ಹಾಗಿದ್ದರೆ ನ್ಯಾಯಾಲಯ ಕೊಟ್ಟ ತೀರ್ಪು ತಪ್ಪಾ? ನ್ಯಾಯಾಲಯದ ತೀರ್ಪಿಗೆ ಗೌರವ ಕೊಡುವುದಿಲ್ಲವಾ? ಸಿದ್ದರಾಮಯ್ಯ ಅವರು ಆತ್ಮಸಾಕ್ಷಿ ಎನ್ನುವ ಮೂಲಕ ನ್ಯಾಯಾಲಯ ಮತ್ತು ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ. ಆತ್ಮ ಸಂವೇದನೆ, ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ಇದ್ದರೆ ಮೊದಲು ರಾಜೀನಾಮೆ ಕೊಡಿ' ಎಂದು ಹೇಳಿದರು.

## ಬಿಜೆಪಿಯ ನಾಯಕರು ಮೊದಲು ರಾಜೀನಾಮೆ ನೀಡಲಿ

• **ಉದಯವಾಹಿನಿ, ಬೆಂಗಳೂರು**

ನೈತಿಕತೆಯ ಪಾಠ ಮಾಡಿದ ಬಿಜೆಪಿಯ ನಾಯಕರು ಮೊದಲು ತಮ ತಪ್ಪುಗಳಿಗಾಗಿ ರಾಜೀನಾಮೆ ನೀಡಲಿ. ನಂತರ ಬೇರೆಯವರ ಬಗ್ಗೆ ಮಾತನಾಡಲಿ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ತಿರುಗೇಟು ನೀಡಿದ್ದಾರೆ.

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯನವರ ರಾಜೀನಾಮೆ ಕೇಳುವ ವಿರೋಧಪಕ್ಷದ ನಾಯಕ ಆರ್.ಅಶೋಕ್ ರವರ ಭೂಹಗರಣದ ಬಗ್ಗೆ ನಿನ್ನೆ ದಾಖಲಾತಿ ಕೇಳಿದ ಹಗರಣವನ್ನು ಬಯಲು ಮಾಡಿದ್ದೇವೆ. ಈವರೆಗೂ ನೈತಿಕತೆಯ ಪಾಠ ಮಾಡುತ್ತಿದ್ದ ಆರ್.ಅಶೋಕ್ ಮೊದಲು ತಮ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದರು.




ನಂತರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ರಾಜೀನಾಮೆ ಕೊಡಬೇಕಾಗುತ್ತದೆ. ಆಮೇಲೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸರದಿ ಬರುತ್ತದೆ. ಹೀಗೆ ಬಿಜೆಪಿಯಲ್ಲಿ ರಾಜೀನಾಮೆಯ ಸರಣಿ ಮುಂದುವರೆದರೆ ನಂತರ ಕೆ.ಎಸ್.ಈಶ್ವರಪ್ಪ ಹೇಳಿದಂತೆ ಬಿಜೆಪಿ ಸ್ವಚ್ಛವಾಗಲಿದೆ ಎಂದು ಹೇಳಿದರು.

ಜಾರಿ ನಿರ್ದೇಶನಾಲಯವೇ ನೀಡಿರುವ ಅಂಕಿ ಅಂಶಗಳನ್ನು ನೋಡಿದರೆ ಅದು ಎಷ್ಟು ದುರುಪಯೋಗವಾಗುತ್ತಿದೆ ಎಂದು ಸ್ಪಷ್ಟವಾಗುತ್ತದೆ. 5,297 ಪ್ರಕರಣಗಳು ದಾಖಲಾಗಿದ್ದು, ಶಿಕ್ಷೆಯಾಗಿರುವುದು ಕೇವಲ 40 ಕ್ಕೆ ಮಾತ್ರ. 4 ಪ್ರಕರಣಗಳು ಸಕ್ರಿಯವಾಗಿವೆ. ಮನಿಲ್ಯಾಂಡ್ರಿಂಗ್ ಕಾಯ್ದೆಯನ್ನು ರಾಜಕೀಯವಾಗಿ ದುರ್ಬಳಕೆ ಮಾಡಿಕೊಳ್ಳ ಲಾಗುತ್ತಿದೆ. ಕೇಂದ್ರ ಗೃಹಸಚಿವ ಅಮಿತ್ ಷಾ ನೀಡಿರುವ ಮಾಹಿತಿಯೇ ಇದನ್ನು ಸ್ಪಷ್ಟಪಡಿಸಿದೆ ಎಂದರು.

## ಮಾನನಷ್ಟ ಮೊಕದ್ದಮೆ ಹೂಡುತ್ತೇವೆ: ರಂಜಿತ್

• **ಉದಯವಾಹಿನಿ, ಬೆಂಗಳೂರು**



ವೀರ ಸಾವರ್ಕರ್ ಗೋಮಾಂಸ ತಿನ್ನುತ್ತಿದ್ದರು ಎಂಬ ದಿನೇಶ್ ಗುಂಡೂರಾವ್ ಅವರ ಹೇಳಿಕೆ ಇದೀಗ ವ್ಯಾಪಕ ಟೀಕೆಗೆ ಗುರಿಯಾಗಿದ್ದು, ಸ್ವತಃ ಸಾವರ್ಕರ್ ಮೊಮ್ಮಗ ರಂಜಿತ್ ಸಾವರ್ಕರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾವರ್ಕರ್ ಚಿತ್ಪಾವನ ಬ್ರಾಹ್ಮಣರಾಗಿದ್ದರೂ ಅವರು ಗೋಮಾಂಸ ಸೇವಿಸುತ್ತಿದ್ದರು ಎಂದು ಹೇಳಿಕೆ ನೀಡಿದ್ದರು. ಅವರ ಈ ಹೇಳಿಕೆ ವ್ಯಾಪಕ ಟೀಕೆ ಮತ್ತು ಚರ್ಚೆಗೆ ಗ್ರಾಸವಾಗಿದೆ. ಇನ್ನು ದಿನೇಶ್ ಗುಂಡೂರಾವ್ ಅವರ ಹೇಳಿಕೆ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ಸಾವರ್ಕರ್ ಅವರ ಮೊಮ್ಮಗ ರಂಜಿತ್ ಸಾವರ್ಕರ್ ಅವರು, 'ಸಾವರ್ಕರ್ ಅವರ ಮಾನಹಾನಿ ಮಾಡುವುದು ಕಾಂಗ್ರೆಸ್ ತಂತ್ರವಾಗಿದೆ. ಅದರಲ್ಲೂ ವಿಶೇಷವಾಗಿ ಚುನಾವಣೆಗಳ ಹೊಸ್ತಿಲಲ್ಲಿ ಚುನಾವಣೆಯಲ್ಲಿ ಗೆಲ್ಲಲು ಕಾಂಗ್ರೆಸ್ ಹಿಂದೂ ಸಮಾಜವನ್ನು ವಿವಿಧ ಜಾತಿಗಳಾಗಿ ವಿಭಜಿಸಲು ಬಯಸುತ್ತದೆ.

> ಕಾಂಗ್ರೆಸ್ ಈಗ ತನ್ನ ನಿಜವಾದ ಮುಖವನ್ನು ತೋರಿಸುತ್ತಿದ್ದು, ಇದು ಬ್ರಿಟಿಷರ ಒಡೆದು ಆಳುವ ನೀತಿಯಾಗಿದೆ. ರಾಹುಲ್ ಗಾಂಧಿ ಇದನ್ನು ಮಾಡುತ್ತಿದ್ದರು ಮತ್ತು ಈಗ ಅವರ ನಾಯಕರು ಹೇಳಿಕೆಗಳನ್ನು ನೀಡುತ್ತಿದ್ದಾರೆ. ವೀರ್ ಸಾವರ್ಕರ್ ಅವರು ಗೋಮಾಂಸ ಸೇವಿಸುತ್ತಿದ್ದರು ಎಂಬ ಹೇಳಿಕೆಗಳು ಸುಳ್ಳು.
> -ರಂಜಿತ್ ಸಾವರ್ಕರ್

# ನಾನು ರಾಜೀನಾಮೆ ನೀಡಲು ಸಿದ್ಧ, ಸಿಎಂ ಸಿದ್ದರಾಮಯ್ಯ, ಇಡೀ ಸಚಿವ ಸಂಪುಟ ನೀಡುತ್ತಾ?

**ಇದೇ ಕಾಂಗ್ರೇಸ್‌ನ ಕೇಂದ್ರ ಸರ್ಕಾರ ಅಂದು ನೇಮಿಸಿದ್ದ ರಾಜ್ಯಪಾಲರು ಮತ್ತು ಘನ ನ್ಯಾಯಾಲಯ ನಾನು ತಪ್ಪಿತಸ್ಥ ಅಲ್ಲ ಎಂದು ಅಭಿಪ್ರಾಯ**

• **ಉದಯವಾಹಿನಿ, ಬೆಂಗಳೂರು**

ನನ್ನನ್ನು ಭೂ ಕಬಳಿಕೆದಾರ ಎಂದು ಕರೆದಿರುವ ಕಾಂಗ್ರೆಸ್‌ನ ನಾಲ್ಕು ಸಚಿವರು ನೈತಿಕತೆಯ ಪ್ರಶ್ನೆ ಎತ್ತಿದ್ದಾರೆ. ಆದರೆ ಇದೇ ಕಾಂಗ್ರೆಸ್‌ನ ಕೇಂದ್ರ ಸರ್ಕಾರ ಅಂದು ನೇಮಿಸಿದ್ದ ರಾಜ್ಯಪಾಲರು ಮತ್ತು ಘನ ನ್ಯಾಯಾಲಯ ನಾನು ತಪ್ಪಿತಸ್ಥ ಅಲ್ಲ ಎಂದು ಅಭಿಪ್ರಾಯಪಟ್ಟಿದೆ.

ಆದರೂ ಕಾಂಗ್ರೆಸ್ ಪಕ್ಷ ನ್ಯಾಯಾಲಯಕ್ಕಿಂತ ದೊಡ್ಡದಾಗಲು ಯತ್ನಿಸಿ ತೀರ್ಪು ನೀಡಲು ಮುಂದಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು. ತಮ್ಮ ಮೇಲಿನ ಆರೋಪ ಕುರಿತು ಆರ್.ಅಶೋಕ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿದರು.

ಕಾಂಗ್ರೆಸ್ ಸರ್ಕಾರದ ನಾಲ್ವರು ಸಚಿವರು ನನ್ನ ಬಗ್ಗೆ ಕಳಂಕ ಸೃಷ್ಟಿಸಲು ಹಳೆಯ ಪ್ರಕರಣದ ಬಗ್ಗೆ ಮಾತನಾಡಿದ್ದಾರೆ. ಇದರಲ್ಲಿ ನೈತಿಕತೆಯ ಪ್ರಶ್ನೆ ಎತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಡಾ ಹಗರಣದಲ್ಲಿ ಅರಿಶಿನ-ಕುಂಕುಮದ ಮೂಲಕ ಭೂಮಿ ಬಂದಿದೆ. ಆದರೆ ನಾನು ಹಣ ಕೊಟ್ಟು ಭೂಮಿ ಖರೀದಿ ಮಾಡಿದ್ದೇನೆ. ಈ ಪ್ರಕರಣದ ಬಗ್ಗೆ ಆರೋಪ ಬಂದಾಗ ರಾಜ್ಯದಲ್ಲಿ ಕಾಂಗ್ರೆಸ್‌ನ ಕೇಂದ್ರ ಸರ್ಕಾರವೇ ನೇಮಿಸಿದ ರಾಜ್ಯಪಾಲ ಹಂಸರಾಜ್ ಭಾರಧ್ವಾಜ್ ಇದ್ದರು. ಅವರು ಕೂಡ ಈ ಪ್ರಕರಣವನ್ನು ತನಿಖೆಗೆ ವಹಿಸಿಲ್ಲ. ಅಷ್ಟೇ ಅಲ್ಲದೆ ನ್ಯಾಯಾಲಯ ಕೂಡ ಇದರ ವಿರುದ್ಧ ತನಿಖೆ ಮಾಡಿಸಲು ಮುಂದಾಗಲಿಲ್ಲ. ರಾಜ್ಯಪಾಲರು ಹಾಗೂ ನ್ಯಾಯಾಲಯವೇ ನಾನು ತಪ್ಪಿತಸ್ಥ ಅಲ್ಲ ಎಂದು ಅಭಿಪ್ರಾಯಪಟ್ಟರೆ, ಕಾಂಗ್ರೆಸ್ ಪಕ್ಷ ಮಾತ್ರ ಇದರಲ್ಲಿ ತೀರ್ಪು ನೀಡಲು ಮುಂದಾಗಿದೆ. ಅಂದರೆ ಕಾಂಗ್ರೆಸ್ ಪಕ್ಷ ತನ್ನನ್ನು ನ್ಯಾಯಾಲಯಕ್ಕಿಂತ ದೊಡ್ಡದು ಎಂದುಕೊಂಡಿದೆ ಎಂದು ವ್ಯಂಗ್ಯವಾಡಿದರು.



**ಕಳಂಕ ಸೃಷ್ಟಿಸಲು ಹಳೆಯ ಪ್ರಕರಣ**

> ನನಗೆ ಕಳಂಕ ತರಲು ಮಾಡುತ್ತಿರುವ ಷಡ್ಯಂತ್ರ ಸರಿಯಲ್ಲ. ನಾನು ಎಲ್ಲೂ ವೈಯಕ್ತಿಕ ಟೀಕೆ ಮಾಡುವುದಿಲ್ಲ. ನೀವೇನೋ ರಾಜಕಾರಣ ಮಾಡುತ್ತೀರ, ಮನೆಯವರನ್ನು ಯಾಕೆ ತರುತ್ತೀರ ಎಂದು ಸಿದ್ದರಾಮಯ್ಯನವರ ಪತ್ನಿ ಹೇಳಿದ್ದರು. ನನಗೆ ಅದರ ಬಗ್ಗೆ ಸಹಮತವಿದೆ. ಆದ್ದರಿಂದ ನಾನು ಯಾವುದೇ ಸಚಿವರ ಕುಟುಂಬದ ವೈಯಕ್ತಿಕ ವಿಚಾರಕ್ಕೆ ಹೋಗುವುದಿಲ್ಲ. ವಿರೋಧ ಪಕ್ಷದಲ್ಲಿರುವುದರಿಂದ ನನ್ನ ಕರ್ತವ್ಯ ಮಾತ್ರ ಮಾಡುತ್ತಿದ್ದೇನೆ
> -ಆರ್. ಅಶೋಕ್, ಪ್ರತಿಪಕ್ಷ ನಾಯಕ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಡಾ ಹಗರಣ ತನಿಖೆಯಾಗಬೇಕಾದ ಪ್ರಕರಣ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ತೀರ್ಪು ಬಂದ ಬಳಿಕ ಮುಖ್ಯಮಂತ್ರಿಯವರು ಭಯಗೊಂಡು ನಿವೇಶನಗಳನ್ನು ಹಿಂದಿರುಗಿಸಿದ್ದಾರೆ. ಆದರ ನಾನು ಕೋರ್ಟ್ ಆದೇಶ ಬರುವ ಮುನ್ನವೇ ನಿವೇಶನ ಹಿಂದಿರುಗಿಸಿದ್ದೆ. ಕೋರ್ಟ್‌ನಲ್ಲಿ ನಾನು ಆಪಾದಿತ ಎಂದು ಹೇಳಿರಲಿಲ್ಲ. ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಕೂಡ ನನ್ನನ್ನು ಆರೋಪ ಮುಕ್ತ ಮಾಡಲಾಗಿದೆ. ಆದರೆ ಸಿಎಂ ಸಿದ್ದರಾಮಯ್ಯ ಇನ್ನೂ ಆರೋಪ ಮುಕ್ತವಾಗಿಲ್ಲ. ಈ ದೇಶದಲ್ಲಿ ಕೋರ್ಟ್ ದೊಡ್ಡದೋ, ಕಾಂಗ್ರೆಸ್ ದೊಡ್ಡದೋ ಎಂದು ಪ್ರಶ್ನೆ ಮಾಡಿದರು. ಕಾಂಗ್ರೆಸ್ ಪಕ್ಷ ಕೋರ್ಟ್‌ಗಿಂತ ದೊಡ್ಡದಲ್ಲ. ಗೌರವಾನ್ವಿತ ಸಚಿವರಾದ ಕೃಷ್ಣ ಬೈರೇಗೌಡರ ಕೋಲಾರದ ಆಸ್ತಿಗಳೆಲ್ಲವೂ ಕುಟುಂಬದಿಂದ ಅವರಿಗೆ ಬಂದಿದೆ. ಅದೇ ರೀತಿ ಮುನಿವೆಂಕಟಪ್ಪ ಅವರು ವಿಲ್ ತಯಾರಿಸಿ ಅವರ ಮಕ್ಕಳಿಗೆ ಆಸ್ತಿ ಕೊಟ್ಟಿದ್ದಾರೆ. ಆ ಕುಟುಂಬದಲ್ಲಿ ಸುಮಾರು 20 ಜನರಿದ್ದು, ನನ್ನ ಹೆಸರಿಗೆ ನೋಂದಣಿಯಾದಾಗ ಆ 20 ಜನರು ಕೂಡ ಸಹಿ ಹಾಕಿದ್ದಾರೆ. ಇದು ಹೇಗೆ ಬೇನಾಮಿಯಾಗುತ್ತದೆ? ಎಂದು ಪ್ರಶ್ನಿಸಿದರು.

### ನಾಲ್ಕು ಸಚಿವರು ಸಿದ್ದರಾಮಯ್ಯನವರಿಗಾಗಿ ರಾಜೀನಾಮೆ ನೀಡಲಿ

ನಾನು 24 ಗಂಟೆ ಗಡುವು ನೀಡುತ್ತೇನೆ. ನೈತಿಕತೆಯ ಆಧಾರದಲ್ಲಿ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಲಿ. ಸಚಿವ ಸಂಪುಟದ ಎಲ್ಲಾ ಸಚಿವರು ಮುಖ್ಯಮಂತ್ರಿಗಾಗಿ ಪ್ರಾಣಕ್ಕೆ ಪ್ರಾಣ ಕೊಡುತ್ತೇವೆ, ಬಂಡೆಯಂತೆ ನಿಂತಿದ್ದೇವೆ ಎಂದು ಹೇಳಿದ್ದಾರೆ. ಆಂಜನೇಯ ಎದೆ ಬಗೆದು ಶ್ರೀರಾಮನನ್ನು ತೋರಿಸಿದಂತೆ ನಮ್ಮ ಎದೆಯಲ್ಲೂ ಸಿದ್ದರಾಮಯ್ಯ ಇದ್ದಾರೆ ಎಂಬಂತೆ ಈ ಸಚಿವರು ಹೇಳಿದ್ದಾರೆ. ಈಗ ಎಲ್ಲಾ ಸಚಿವರಿಗೆ ರಾಜೀನಾಮೆ ಕೊಡುವ ಅವಕಾಶವಿದೆ. ಮೊದಲು ಈ ನಾಲ್ಕು ಸಚಿವರು ಸಿದ್ದರಾಮಯ್ಯನವರಿಗಾಗಿ ರಾಜೀನಾಮೆ ನೀಡಲಿ. ಈ ಮೂಲಕ ಅವರ ಎದೆಯಲ್ಲಿ ಸಿದ್ದರಾಮಯ್ಯ ಇದ್ದಾರೆಯೇ? ಡಿ.ಕೆ.ಶಿವಕುಮಾರ್ ಅಥವಾ ಮಲ್ಲಿಕಾರ್ಜುನ ಖರ್ಗೆ ಇದ್ದಾರೆಯೇ ಎಂದು ಗೊತ್ತಾಗಲಿ. ಅವರೆಲ್ಲರೂ ರಾಜೀನಾಮೆ ನೀಡುವುದಾದರೆ ನಾನು ಕೂಡ ರಾಜೀನಾಮೆ ನೀಡುತ್ತೇನೆ ಎಂದರು.

**ಈ ದಿನದ ದರ** | ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,756/Gram24ct ₹7,110/Gram22ct | ಬೆಳ್ಳಿ: ₹95.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

# ನೀಚ ಮನಸ್ಥಿತಿಗೇಕೆ ಜಾತಿ ಧರ್ಮದ ಹೊಣೆ?

ಜಾತಿಯ ತಳಿ, ಧರ್ಮವಂತ ಎನ್ನುತ್ತೇವೆ. ಜಾತಿಗೆ ಧರ್ಮಕ್ಕೆ ಗೌರವವಿದೆ. ಜಾತಿ ಧರ್ಮ ವಸ್ತುವಲ್ಲ, ಅದು ಅನೇಕ ವಸ್ತು ವ್ಯಕ್ತಿಗಳಲ್ಲಿನ ಏಕಪ್ರಕಾರದ ಗುಣಧರ್ಮ. ವ್ಯಕ್ತಿ ಉತ್ತಮ ಗುಣಮಟ್ಟ ಕಾಯ್ದುಕೊಂಡಲ್ಲಿ ಜಾತಿಗೆ ಧರ್ಮಕ್ಕೆ ಶ್ರೇಯಸ್ಸು. ಆದರೆ ನೆನಪಿರಲಿ ವ್ಯಕ್ತಿ ಕಳಂಕಿತನಾದರೆ ಆ ಕಳಂಕವನ್ನು ಜಾತಿಗೆ ಧರ್ಮಕ್ಕೆ ಅಂಟಿಸಬಾರದು. ಯಾವುದೇ ಜಾತಿ ಧರ್ಮ ಕಳಂಕತನವನ್ನು ಪ್ರಚೋದಿಸದು. ಸಂಸ್ಕಾರ ಹೊಂದದಿರುವುದು, ಉನ್ನತಿಗೇರದಿರುವುದು ವ್ಯಕ್ತಿಯ ದೌರ್ಬಲ್ಯ. ಕೊಲ್ಲಾಪುರದ ಸುನಿಲ್ ತಾಯಿಯನ್ನು ಸಾಯಿಸಿ ಅವಳ ಮಾಂಸ ಬೇಯಿಸಿ ತಿಂದ. ಈಗ ಅವನಿಗೆ ಗಲ್ಲು. ಆತ ಹಿಂದೂ ಎಂಬ ಕಾರಣಕ್ಕೆ ಈ ಘಟನೆಯಿಂದ ಹಿಂದುಧರ್ಮವನ್ನು ನಿಂದಿಸುವುದೇ? ಇಂಥದ್ದನ್ನು ಮಾಡಲು ಹಿಂದುಧರ್ಮ ಅಥವಾ ಇನ್ನಾವುದೇ ಧರ್ಮ ಹೇಳುವುದೇ? ಮಧ್ಯಪ್ರದೇಶದ ಕಟಿಯಾನಾ ಟೋಲಾದಲ್ಲಿ ಮೃತಪಟ್ಟ ರಾಮಸ್ವರೂಪ ಬರ್ಮನ್ ನ ಅಂತ್ಯಕ್ರಿಯೆಗೆ ತಾಯಿ ಕರೆದರೂ ಮಗ ಬರಲಿಲ್ಲ. ಮನೆ ಮಾರಿ ಹಣ ನೀಡಿದರೆ ಬರುವೆ ಎಂದ. ಎಲ್ಲವನ್ನೂ ಮಾಡಿದ ತಾಯಿಯೇ ಚಿತೆಗೆ ಕೊಳ್ಳಿ ಇಟ್ಟಳು. ಈ ಘಟನೆಗೆ ಜಾಲತಾಣದಲ್ಲಿ ಇಂಡಿಯನ್ ಹೆಸರಿನ ನಕಲಿ ವ್ಯಕ್ತಿ ಹೀಗೆ ಪ್ರತಿಕ್ರಿಯಿಸಿದ: ನೋಡಿ ಹಿಂದುಧರ್ಮದಲ್ಲಿ ಇದೆಲ್ಲ ನೋಡಲಿಕ್ಕೆ ಸಿಗುತ್ತೆ. ಎಂತಾ ಗಲೀಜು ಹಿಂದುಧರ್ಮ ನೋಡಿ, ಥೂ ನಿಮ್ಮ ಹಿಂದುಧರ್ಮಕ್ಕೆ ಬೆಂಕಿ ಹಾಕಾ ಹಿರೇಕೆರೂರಿನ ಚಿಕ್ಕೇರೂರಲ್ಲಿ ಸಲ್ಮಾ ಕಾಮದಾಹಕ್ಕಾಗಿ ಪ್ರಿಯಕರ ಜಾಫರ್ ಜೊತೆ ಸೇರಿ ಗಂಡ ಸಾದಿಕ್ ನ ಕೊಂದಳು. ಇಂಡಿಯನ್ ಈಗ ಇಸ್ಲಾಂ ಧರ್ಮಕ್ಕೆ ಬೆಂಕಿ ಹಾಕುವನೇ! ಜನ ಪ್ರಜ್ಞಾವಂತರಾಗಲಿ.

## ಲೈಂಗಿಕ ಕಿರುಕುಳ ಕೇಸಲ್ಲಿ 'ಜಾನಿ ಮಾಸ್ಟರ್'ಗೆ ತಾತ್ಕಾಲಿಕ ರಿಲೀಫ್

• ಉದಯವಾಹಿನಿ ಬೆಂಗಳೂರು

ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಪೊಲೀಸರಿಂದ ಬಂಧನಕ್ಕೆ ಒಳಗಾಗಿ ಜೈಲುಪಾಲಾಗಿದ್ದಂತ ಜಾನಿ ಮಾಸ್ಟರ್ ಅವರಿಗೆ ಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ. ಐದು ದಿನಗಳ ಕಾಲ ಅವರಿಗೆ ಜಾಮೀನು ಮಂಜೂರು ಮಾಡಲಾಗಿದೆ. ತಮಿಳಿನ ತಿರುಚಿತ್ರಬಲಂ ಸಿನಿಮಾದ ಕೋರಿಯೋಗ್ರಫಿಗಾಗಿ ಜಾನಿ ಮಾಸ್ಟರ್ ಅವರಿಗೆ ರಾಷ್ಟ್ರ ಪ್ರಶಸ್ತಿ ಬಂದಿತ್ತು. ಈ ರಾಷ್ಟ್ರಪ್ರಶಸ್ತಿ ಸಮಾರಂಭ ಅಕ್ಟೋಬರ್.6ರಿಂದ 10ರವರೆಗೆ ನಡೆಯಲಿದೆ. ಈ ಹಿನ್ನಲೆಯಲ್ಲಿ ಸಮಾರಂಭದಲ್ಲಿ ಭಾಗಿಯಾಗಲು ಜಾನಿ ಮಾಸ್ಟರ್ ಗೆ ಕೋರ್ಟ್ ಜಾಮೀನು ಮಂಜೂರು ಮಾಡಲಾಗಿದೆ. ಅಂದಹಾಗೇ ಮಹಿಳೆಯೊಬ್ಬರು ಜಾನಿ ಮಾಸ್ಟರ್ ವಿರುದ್ಧ ಲೈಂಗಿಕ ಕಿರುಕುಳ ದೂರು ನೀಡಿದ್ದರು. ಈ ದೂರು ಆಧರಿಸಿ ಪೊಲೀಸರು ಕೇಸ್ ದಾಖಲಿಸಿದ್ದರು.

## ಬೆಂಗಳೂರಿನ ಪೀಣ್ಯದಲ್ಲಿ ಮತ್ತೆ ಮೂವರು ಪಾಕಿಸ್ತಾನಿ ಪ್ರಜೆಗಳ ಬಂಧನ!

• ಉದಯವಾಹಿನಿ ರಾಮನಗರ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಜಿಗಣಿಯಲ್ಲಿ ಪಾಕಿಸ್ತಾನ ಪ್ರಜೆಗಳ ಜೊತೆಗೆ ವಿದೇಶಿ ಪ್ರಜೆಗಳ ಬಂಧನವಾಗಿತ್ತು. ಇದೀಗ ಇಂದು ಮತ್ತೆ ಪೀಣ್ಯದಲ್ಲಿ ಮೂವರು ಪಾಕಿಸ್ತಾನಿ ಪ್ರಜೆಗಳನ್ನು ಪೊಲೀಸರು ಅರೆಸ್ಟ್ ಮಾಡಿದ್ದಾರೆ. ಹೌದು ಬೆಂಗಳೂರಿನ ಪೀಣ್ಯದಲ್ಲಿ ಅಕ್ರಮವಾಗಿ ವಾಸವಿದ್ದ ಪಾಕಿಸ್ತಾನದ ಕುಟುಂಬವನ್ನು ಪೊಲೀಸರು ಪತ್ತೆಹಚ್ಚಿದ್ದು, ಮೂವರನ್ನು ಬಂಧಿಸಿದ್ದಾರೆ. ಇದರೊಂದಿಗೆ, ಕಳೆದ ಮೂರ್ನಾಲ್ಕು ದಿನಗಳ ಅವಧಿಯಲ್ಲಿ ಐದಕ್ಕೂ ಹೆಚ್ಚು ಮಂದಿ ಪಾಕಿಸ್ತಾನ ಪ್ರಜೆಗಳನ್ನು ಬಂಧಿಸಿದಂತಾಗಿದೆ. ಹಿಂದೂ ಹೆಸರುಗಳನ್ನಿಟ್ಟುಕೊಂಡು ದಾವಣಗೆರೆಯಲ್ಲಿ ವಾಸವಿದ್ದ ಪಾಕಿಸ್ತಾನಿ ಪ್ರಜೆಗಳನ್ನು ನಿನ್ನೆ ತಾನೇ ಬಂಧಿಸಿದ್ದರು. ಇನ್ನು ಬಂಧಿತ ಪಾಕಿಸ್ತಾನ ಪ್ರಜೆಗಳನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಸ್ಫೋಟಕ ಮಾಹಿತಿ ಒಂದು ಹೊರಬಿದ್ದಿದ್ದು, ಪಾಕಿಸ್ತಾನದಿಂದ 15ಕ್ಕೂ ಹೆಚ್ಚು ಜನ ಭಾರತಕ್ಕೆ ಅಕ್ರಮವಾಗಿ ನುಸುಳಿ ಬಂದಿರುವುದು ಗೊತ್ತಾಗಿದೆ. ಹದಿನೈದಕ್ಕೂ ಅಧಿಕ ಮಂದಿ ಮೆಹದಿ ಫೌಂಡೇಷನ್ ಸೇರಿದ್ದರು. ಇವರೆಲ್ಲ ಯೂನಸ್ ಅಲ್ಗೋರ್ ಧರ್ಮ ಗುರುಗಳ ಪರ ಪ್ರಚಾರಕ್ಕಾಗಿ ಆಗಮಿಸಿದ್ದಾರೆ ಎನ್ನಲಾಗಿದೆ.

## ನನಗೆ 'ಇಡಿ'ಯಿಂದ ಯಾವುದೇ ನೋಟಿಸ್ ಬಂದಿಲ್ಲ: ಸಚಿವ ಭೈರತಿ

• ಉದಯವಾಹಿನಿ ಬೆಂಗಳೂರು

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಚಿವ ಭೈರತಿ ಸುರೇಶ್ ಗೆ ಇಡಿ ನೋಟಿಸ್ ನೀಡಲಾಗಿದೆ ಎಂಬ ವಿಚಾರಕ್ಕೆ ಸಚಿವ ಭೈರತಿ ಸುರೇಶ್ ಪ್ರತಿಕ್ರಿಯೆ ನೀಡಿದ್ದು, ನನಗೆ ಇಡಿ ಆಗಲಿ ಇನ್ಯಾವುದೇ ತನಿಖಾ ಸಂಸ್ಥೆಯಿಂದ ನೋಟಿಸ್ ಬಂದಿಲ್ಲ ಎಂದು ಬೆಂಗಳೂರಿನಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸ್ಪಷ್ಟನೆ ನೀಡಿದರು. ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಯಾಕೆ ನೋಟಿಸ್ ಬಂದಿದೆ ಅಂತ ಸುಳ್ಳು ಸುದ್ದಿ ಹರಡಿಸುತ್ತಿರಾ? ನಾನೇನು ಅಂತ ಪಾಪ ಮಾಡಿದೀನಿ ನನಗೆ ಗೊತ್ತಾಗ್ತಿಲ್ಲ ಈ ರೀತಿ ಸುಳ್ಳು ಸುದ್ದಿ ಹರಡಿಸಬಾರದು. ಸುಮ್ಮನೆ ನನ್ನನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಮನೆಗೆ ನೋಟಿಸ್ ಅಂಟಿಸೋಕೆ ಅದೇನೋ ಪೋಸ್ಟ್ ಆಫೀಸಾ? ಮನೆಯಿಂದ ನೇರವಾಗಿ ಇಲ್ಲಿಗೆ ಬಂದಿದ್ದೇನೆ ಈ ರೀತಿ ಒಬ್ಬ ವ್ಯಕ್ತಿಯ ತೇಜೋವಧೆ ಮಾಡಬಾರದು ಎಂದು ಮಾಧ್ಯಮಗಳಿಗೆ ಖಾರವಾಗಿ ಉತ್ತರ ನೀಡಿದರು ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದರು.

# ಕಾಂಗ್ರೆಸ್ಸಿನವರು ಕೇವಲ ಅಲ್ಪಸಂಖ್ಯಾತರ ಓಲೈಕೆ ಮಾಡುವ ಉದ್ದೇಶ

## ದೇಶದಲ್ಲಿ ಹಿಂದೂ– ಮುಸ್ಲಿಂ ಪ್ರತ್ಯೇಕವಾಗಿಸುವ ಪ್ರಯತ್ನ ಎಂದ ಬಿಜೆಪಿ ಪ್ರಭಾವಿ ನಾಯಕ

• ಉದಯವಾಹಿನಿ, ಬೆಂಗಳೂರು


ಕಾಂಗ್ರೆಸ್‌ನವರಿಗೆ ವೀರ ಸಾವರ್ಕರ್ ಅವರನ್ನು ಬೈಯ್ಯದೇ ಇದ್ದರೆ ಸಮಾಧಾನವೇ ಆಗಲ್ಲ ಅನಿಸುತ್ತೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಜಗದೀಶ ಶೆಟ್ಟರ್ ಹೇಳಿದ್ದಾರೆ. ವೀರ ಸಾವರ್ಕರ್ ಬಗ್ಗೆ ಸಚಿವ ದಿನೇಶ ಗುಂಡೂರಾವ್ ವಿವಾದಾತ್ಮಕ ಹೇಳಿಕೆಗೆ ಟಾಂಗ್ ನೀಡಿದ್ದಾರೆ.

**ವೀರ ಸಾವರ್ಕರ್ ಬಗ್ಗೆ ಕೈ ಕೀಳು ಮಾತು**

ವೀರ ಸಾವರ್ಕರ್ ಅವರು ಬ್ರಿಟಿಷರ ವಿರುದ್ಧ ದಿಟ್ಟ ಹೋರಾಟ ಮಾಡಿದವರು. ಅವರು ಪ್ರಬಲ ಹಿಂದುತ್ವವಾದಿಯಾಗಿದ್ದರು. ಅವರಿಗೆ ವಿಧಿಸಿದ್ದ ಶಿಕ್ಷೆ ಸೋ ಕಾಲ್ಡ್ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟಗಾರರಿಗೂ ನೀಡಿಲ್ಲ ಎಂದಿದ್ದಾರೆ.

ಕಾಂಗ್ರೆಸ್ಸಿನವರು ಕೇವಲ ಅಲ್ಪಸಂಖ್ಯಾತರ ಓಲೈಕೆ ಮಾಡುವ ಉದ್ದೇಶದಿಂದ ವೀರ ಸಾವರ್ಕರ್ ಬಗ್ಗೆ ಕೀಳಾಗಿ ಮಾತನಾಡುತ್ತಿದ್ದಾರೆ. ಈ ಕಾಂಗ್ರೆಸ್‌ನವರು ಟೀಕೆ ಮಾಡುವುದರಿಂದ ಅಲ್ಪಸಂಖ್ಯಾತರ ಮತ ಬರುತ್ತವೆ ಎನ್ನುವುದು ಇವರ ನಿರೀಕ್ಷೆ. ಈ ರೀತಿ ಪದೇ ಪದೇ ಸಾವರ್ಕರ್ ಬಗ್ಗೆ ಕೀಳುಮಟ್ಟದಲ್ಲಿ ಮಾತನಾಡುವುದು ಅಕ್ಷಮ್ಯ ಅಪರಾಧ. ನಾನು ಕಾಂಗ್ರೆಸ್‌ನವರ ವರ್ತನೆಯನ್ನು ಖಂಡಿಸುತ್ತೇನೆ. ಕಾಂಗ್ರೆಸ್ಸಿನವರು ಇದೇ ರೀತಿ ಮಾತನಾಡುತ್ತಾ ಹೋದರೆ ಮುಂದಿನ ದಿನಗಳಲ್ಲಿ ಜನರೇ ಆಕ್ರೋಶಿತರಾಗಲಿದ್ದಾರೆ. ನಿಮ್ಮನ್ನ ಎಲ್ಲಿ (ಕಾಂಗ್ರೆಸ್) ಮುಗಿಸಬೇಕೋ ಅಲ್ಲಿ ಮುಗಿಸುತ್ತಾರೆ ಎಚ್ಚರಿಸಿದ್ದಾರೆ.

ದೇಶಾದ್ಯಂತ ಹಿಂದೂ– ಮುಸ್ಲಿಮರನ್ನು ದೂರ ಮಾಡಿ, ಮುಸ್ಲಿಮರನ್ನು ಪ್ರತ್ಯೇಕವಾಗಿಡುವ ಪ್ರಯತ್ನಗಳಾಗುತ್ತಿದೆ. ಇದನ್ನು ಮುಸ್ಲಿಮರು ಅರ್ಥ ಮಾಡಿಕೊಳ್ಳಬೇಕು. ಈ ರೀತಿಯಾದರೆ ಮುಸ್ಲಿಂ ಸಮುದಾಯಕ್ಕೆ ಅನ್ಯಾಯ ಆಗುತ್ತದೆ. ಇದರಿಂದ ಏನೂ ಉದ್ಧಾರ ಆಗಲ್ಲ ಹಾನಿ ಆಗುವುದು ಮುಸ್ಲಿಂರಿಗೆ ಎಂಬುದನ್ನು ಅರ್ಥಮಾಡಿಕೊಳ್ಳಲಿ. ನಾನು ಯಾವತ್ತೂ ಬಿಜೆಪಿಯಲ್ಲಿ ಉಸಿರುಗಟ್ಟುವ ವಾತಾವರಣ ಇದೆ ಅಂತ ಎಲ್ಲೂ ಹೇಳಿಲ್ಲಾ.



> ಬಿಜೆಪಿ ಪಕ್ಷ ಕೆಲವರ ಹಿಡಿತದಲ್ಲಿದೆ, ಪಕ್ಷದಲ್ಲಿ ಉಸಿರುಗಟ್ಟುವ ವಾತಾವರಣ ಇದೆ ಎಂದು ಆರೋಪಿಸಿದ್ದರು. ಈಗ ನಾನೇನು ಹೇಳಿಯೇ ಇಲ್ಲ. ಅದನ್ನು ಮಾಧ್ಯಮಗಳೇ ಕ್ರಿಯೆಟ್ ಮಾಡಿದ್ದವು. ನಾನು ಯಾಕೆ ಧ್ವನಿ ಗೂಡಿಸಬೇಕು, ನಾನು ಈ ಬಗ್ಗೆ ಏನೂ ಪ್ರತಿಕ್ರಿಯೆ ನೀಡಲ್ಲ. ರಾಜಕೀಯ ಪಕ್ಷದಲ್ಲಿ ಎಲ್ಲವೂ ನೂರಕ್ಕೆ ನೂರರಷ್ಟು ಸರಿ ಇರಲ್ಲ. ಎಲ್ಲಾ ಪಾರ್ಟಿಯಲ್ಲಿಯೂ ಒಂದಿಷ್ಟು ಅಸಮಾಧಾನ ಇದ್ದೇ ಇರುತ್ತದೆ ಎಲ್ಲವೂ ಪರಿಪೂರ್ಣವಾಗಿರಲ್ಲ
> -ಜಗದೀಶ್ ಶೆಟ್ಟರ್, ಸಂಸದ

**ತಮ್ಮ ಪಕ್ಷದ ಬಗ್ಗೆ ಕಾಂಗ್ರೆಸ್ ಶಾಸಕರಿಗೇ ಜಿಗುಪ್ಸೆ**


ನಿಮ್ಮಲ್ಲಿ ಸಿಎಂ ಸ್ಥಾನಕ್ಕೆ ಎಷ್ಟು ಪೈಪೋಟಿ ಇದೆ ಅದನ್ನು ನೋಡಿಕೊಳ್ಳಿ, ಹೊರಗೆ ಸಿದ್ದರಾಮಯ್ಯರಿಗೆ ಬೆಂಬಲ ಅಂತಾರೆ. ಆದರೆ, ಒಳಗೊಳಗೆ ಪ್ರತ್ಯೇಕ ಸಭೆ, ಯಾರು ಮುಖ್ಯ ಮಂತ್ರಿಯಾಗಬೇಕು, ಯಾವ ಶಾಸಕರು ಯಾರ ಜೊತೆಗೆ ಇದ್ದಾರೆ ಅನ್ನೊ ಚರ್ಚೆ ನಡೆಯುತ್ತಿದೆ. ತಮ್ಮ ಪಕ್ಷದ ಬಗ್ಗೆ ಕಾಂಗ್ರೆಸ್ ಶಾಸಕರು ಸಾಕಷ್ಟು ಅಸಮಾಧಾನಗೊಂಡಿದ್ದಾರೆ ಎಂದು ಇದರಿಂದಲೇ ತಿಳಿಯುತ್ತೆ. ತಮ್ಮ ಪಕ್ಷದ ಬಗ್ಗೆ ಕಾಂಗ್ರೆಸ್ ಶಾಸಕರಿಗೇ ಜಿಗುಪ್ಸೆ ಆಗಿದೆ. ರಸ್ತೆಗುಂಡಿ ಮುಚ್ಚುವುದಕ್ಕೂ ಸಹ ರಾಜ್ಯ ಸರ್ಕಾರದಲ್ಲಿ ಹಣ ಇಲ್ಲ. ನಿಮ್ಮ ಮನೆ ಮೊದಲು ನೀವು ಸರಿ ಮಾಡಿಕೊಳ್ಳಿ ಎಂದರು.

**ಬಿಜೆಪಿ ಬಗ್ಗೆ ಕಾಂಗ್ರೆಸ್‌ಗೆ ಏಕೆ ಚಿಂತೆ:** ಬಿಜೆಪಿಯ ಒಳಗೆ ಏನು ನಡೆಯುತ್ತಿದೆ ಎನ್ನುವುದನ್ನು ಕಾಂಗ್ರೆಸ್ ಚಿಂತಿಸುವುದು ಬೇಡ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ವಿಚಾರ, ಅದು ಪಕ್ಷಕ್ಕೆ ಬಿಟ್ಟ ವಿಚಾರವಾಗಿದೆ. ಬಿಜೆಪಿಯ ಒಳಗೆ ಏನಾಗ್ತಿದೆ ಎಂದು ಕಾಂಗ್ರೆಸ್ ವಿಚಾರ ಮಾಡುವುದು ಬೇಡ. ಇನ್ನು ಸಂಸದ ಜಗದೀಶ್ ಶೆಟ್ಟರ್ ಅವರು ನಾನು ಆ ರೀತಿ ಮಾತನಾಡಿಯೇ ಇಲ್ಲ ಎಂದು ಉಲ್ಟಾ ಹೊಡೆದಿರುವುದು ಸಹ ನಡೆದಿದೆ. ಬಿಜೆಪಿ ಬಿಟ್ಟು ಕಾಂಗ್ರೆಸ್ ಪಕ್ಷವನ್ನು ಸೇರುವ ಸಂದರ್ಭದಲ್ಲಿ ಅವರು ಬಿಜೆಪಿ ನಾಯಕರ ವಿರುದ್ಧ ಮಾತನಾಡಿದ್ದರು.

# ಸ್ವಚ್ಛತಾ ಅಭಿಯಾನ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ

• ಉದಯವಾಹಿನಿ, ಬೆಂಗಳೂರು

ನಗರದಾದ್ಯಂತ ಸ್ವಚ್ಛತಾ ಅಭಿಯಾನ ಕೈಗೊಂಡು ಪರಿಣಾಮಕಾರಿಯಾಗಿ ಸ್ವಚ್ಛತಾ ಕಾರ್ಯ ನಡೆಸಲು ಮುಖ್ಯ ಆಯುಕ್ತರಾದ ಶ್ರೀ ತುಷಾರ್ ಗಿರಿ ನಾಥ್ ರವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಇಂದು ವರ್ಚ್ಯುವಲ್ ಕಾನ್ಫರೆನ್ಸ್ ಮೂಲಕ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪಾಲಿಕೆ ವ್ಯಾಪ್ತಿಯ ಎಲ್ಲಾ ವಲಯಗಳಲ್ಲಿಯೂ ಸ್ವಚ್ಛತಾ ಅಭಿಯಾನವನ್ನು ಕೈಗೊಂಡು ಪರಿಣಾಮಕಾರಿಯಾಗಿ ಸ್ವಚ್ಛತಾ ಕಾರ್ಯವನ್ನು ಮಾಡಬೇಕೆಂದು ಸೂಚಿಸಿದರು. ನಗರದ ರಸ್ತೆ ಬದಿ ಕಸ ಬಿಸಾಡುವುದನ್ನು ತಡೆಯಬೇಕು. ರಸ್ತೆ ಬದಿ ಕಸ ಬಿಸಾಡದೆ ಮನೆಗಳ ಬಳಿ ಬರುವ ಆಟೋಟಿಪ್ಪರ್ ಗಳಿಗೆ ಹಸಿ ಕಸ ಹಾಗೂ ಒಣ ಕಸವನ್ನು ಬೇರ್ಪಡಿಸಿ ನೀಡುವ ಕುರಿತು ನಾಗರೀಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕೆಂದು ಸೂಚಿಸಿದರು.

**ಶೂನ್ಯ ತ್ಯಾಜ್ಯ ಕಛೇರಿ ಮಾಡಿ**

ಬಿಬಿಎಂಪಿ ಒಡೆತನ ಎಲ್ಲಾ ಕಛೇರಿಗಳಲ್ಲಿ ಶೂನ್ಯ ತ್ಯಾಜ್ಯ ಅಭಿಯಾನವನ್ನು ಹಮ್ಮಿಕೊಂಡು, ಕಛೇರಿ ಆವರಣದಲ್ಲಿ ಸ್ವಚ್ಛತೆ ಕಾಪಾಡಿ ತ್ಯಾಜ್ಯ ಮುಕ್ತ ಆವರಣವನ್ನಾಗಿ ಮಾಡಬೇಕು. ಈ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಂಡು ಕೂಡಲೆ ಅದನ್ನು ಜಾರಿಗೆ ತರಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಎಲ್ಲಾ ವಲಯ ಆಯುಕ್ತರು, ಜಂಟಿ ಆಯುಕ್ತರು, ಪ್ರಧಾನ ಅಭಿಯಂತರರು, ಮುಖ್ಯ ಅಭಿಯಂತರರು ಸೇರಿದಂತೆ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

**ಸ್ವಚ್ಛತೆಯ ಕುರಿತು ಜಾಗೃತಿ:** ನಗರದಲ್ಲಿ ಹಸಿ ಕಸ, ಒಣ ಕಸ ಬೇರ್ಪಡಿಸುವುದು, ರಸ್ತೆ ಬದಿ ಕಸ ಬಿಸಾಡದಿರುವುದು ಸೇರಿದಂತೆ ಸ್ವಚ್ಛತಾ ಕಾರ್ಯಕ್ಕೆ ಸಂಬಂಧಿಸಿದಂತೆ ಲಿಂಕ್ ವರ್ಕರ್ಸ್‌ಗಳು ಮನೆ ಮನೆ ಭೇಟಿ ನೀಡಿ ನಾಗರೀಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕೆಂದು ಸೂಚನೆ ನೀಡಿದರು.

# ಲೋಕಾಯುಕ್ತ ಪೊಲೀಸರ ಕೆಟ್ಟ ತನಿಖೆ ಆರೋಪಿಗಳು ಖುಲಾಸೆ

• ಉದಯವಾಹಿನಿ, ಬೆಂಗಳೂರು




ಲೋಕಾಯುಕ್ತ ವಿಶೇಷ ನ್ಯಾಯಾಲಯವು ಹಲವಾರು ಪ್ರಕರಣಗಳಲ್ಲಿ ಕೆಟ್ಟ ರೀತಿಯಲ್ಲಿ ತನಿಖೆ ನಡೆಸಿ ಆರೋಪಿಗಳನ್ನು ಖುಲಾಸೆಗೊಳಿಸಿದೆ. ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಅಧಿಕಾರಿಗಳು ಪ್ರಮುಖ ಪ್ರಕರಣಗಳಲ್ಲಿ 'ಬಿ' (ಮುಚ್ಚುವಿಕೆ) ರಿಪೋರ್ಟ್ ಸಲ್ಲಿಸುವಷ್ಟು ದಿಟ್ಟತನ ತೋರಿದ್ದಾರೆ ಎಂದು ಭ್ರಷ್ಟಾಚಾರ ತಡೆ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶ ಕೆ.ಎಂ. ರಾಧಾಕೃಷ್ಣ ಅಭಿಪ್ರಾಯ ಪಟ್ಟಿದ್ದಾರೆ.

ಪ್ರಮುಖ ಆರೋಪಿಗಳು ಮತ್ತು ಪ್ರಭಾವಿ ಅಧಿಕಾರಿಗಳ ಪರವಾಗಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳು ವಿರುದ್ಧ ನೇರ ಆರೋಪ ಮತ್ತು ಆರೋಪ ಕೇಳಿ ಬಂದಿರುವ ಅಧಿಕಾರಿಗಳ ಪ್ರಕರಣಗಳನ್ನು ಲೋಕಾಯುಕ್ತ ಪೊಲೀಸರು ನಿರ್ಲಕ್ಷಿಸುತ್ತಿದ್ದಾರೆ ಎಂದು ನ್ಯಾಯಾಲಯ ಹೇಳಿದೆ. ಅವರು ಉದ್ದೇಶಪೂರ್ವಕವಾಗಿ ಆಪಾದಿತ ಅಧಿಕಾರಿಗಳಿಗೆ ಸಹಾಯ ಮಾಡಲು ಮತ್ತು ಕೇವಲ ಹೆಸರಿಗಾಗಿ ಮಾತ್ರ ಆರೋಪಪಟ್ಟಿ ಸಲ್ಲಿಸುತ್ತಾರೆ. ಅಧೀನ ಅಧಿಕಾರಿಗಳಿಗೆ ಸಹಾಯ ಮಾಡಲು ಸಮರ್ಥರಲ್ಲದ ಅಧಿಕಾರಿಗಳಿಂದ ಪ್ರಾಸಿಕ್ಯೂಷನ್ ಮಂಜೂರಾತಿ ಆದೇಶಗಳನ್ನು ಪಡೆಯುತ್ತಿದ್ದಾರೆ ಎಂದು ನುಡಿದಿದ್ದಾರೆ.

# ಮುಡಾ ಸೈಟ್ ವಿಚಾರ : ಯತೀಂದ್ರ ಕೂಡ ಪಾಲುದಾರ

• ಉದಯವಾಹಿನಿ, ಬೆಂಗಳೂರು

ಈಗಾಗಲೇ ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಸಂಕಷ್ಟ ಎದುರಿಸುತ್ತಿದ್ದು, ಸ್ನೇಹಮಯಿ ಕೃಷ್ಣ ಅವರು ಇಡಿಗೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಇಡಿ ಅಧಿಕಾರಿಗಳು ಎಫ್ ಐಆರ್ ದಾಖಲಿಸಿಕೊಂಡಿದ್ದಾರೆ. ಬಳಿಕ ಇತ್ತೀಚಿಗೆ ಸಿಎಂ ಪತ್ನಿ ಪಾರ್ವತಿಯವರು ಮುಡಾದ 14 ಸೈಟ್ ಗಳನ್ನು ವಾಪಾಸ್ ನೀಡಿದ್ದರು.

ಈ ವಿಚಾರವಾಗಿ ಇದರಲ್ಲಿ ಯತಿಂದ್ರ ಸಿದ್ದರಾಮಯ್ಯ ಅವರು ಪಾಲುದಾರರಾಗಿದ್ದಾರೆ ಎಂದು ದೂರುದಾರ ಪ್ರದೀಪ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.



**ದೂರುದಾರ ಪ್ರದೀಪ್ ಸ್ಫೋಟಕ ಹೇಳಿಕೆ**

ಹೌದು ದೂರುದಾರ ಪ್ರದೀಪ್ ಎನ್ನುವವರು ಮುಡಾ ಹಗರಣಕ್ಕೆ ಸಂಬಂಧಪಟ್ಟಂತೆ ಸಾಕ್ಷಿ ನಾಶಪಡಿಸುವ ಸಾಧ್ಯತೆ ಇದೆ ಎಂದು ಆರೋಪಿಸಲಾಗಿದೆ. ಹಾಗಾಗಿ ಸಿಎಂ ಸಿದ್ದರಾಮಯ್ಯ ವಿರುದ್ಧ ಇಡಿ ಅಧಿಕಾರಿಗಳಿಗೆ ಮತ್ತೊಂದು ಮನವಿ ನೀಡಿದ್ದಾರೆ. ಹಾಗಾಗಿ ತನಿಖೆ ನಡೆಸುವಂತೆ ಇಡಿಗೆ ದೂರುದಾರ ಪ್ರದೀಪ್ ಮನವಿ ಮಾಡಿದ್ದಾರೆ. ಮುಡಾದ 14 ಸೈಟ್ ಸಂಬಂಧ ತನಿಖೆಗೆ ದೂರುದಾರ ಮನವಿ ಮಾಡಿದ್ದಾರೆ.ಸಿಎಂ ಸಿದ್ದರಾಮಯ್ಯ ಪುತ್ರ ಯತೀಂದ್ರ ಕೂಡ ಇದರಲ್ಲಿ ಪಾಲುದಾರರಾಗಿದ್ದಾರೆ.ಸೈಟ್ ವಾಪಸ್ ಪಡೆಯುವ ಮೂಲಕ ಸಾಕ್ಷ್ಯ ನಾಶ ಮಾಡುವ ಪ್ರಯತ್ನ ಮಾಡಲಾಗಿದೆ ಎಂದು ಇಡಿ ಅಧಿಕಾರಿಗಳಿಗೆ ದೂರುದಾರ ಪ್ರದೀಪ್ ಕುಮಾರ್ ಮನವಿ ಮಾಡಿಕೊಂಡಿದ್ದಾರೆ.

**ಅಧಿಕಾರಿಗಳನ್ನು ಬಳಸಿಕೊಂಡು ಸಾಕ್ಷಿಗಳನ್ನು ನಾಶ**

14 ಸೈಟ್‌ಗಳ ಸಂಬಂಧ ಸಿಎಂ ವಿರುದ್ಧ ಸಾಕ್ಷಿ ನಾಶದ ಆರೋಪದ ಹಿನ್ನೆಲೆಯಲ್ಲಿ ಇದೀಗ ತನಿಖೆ ನಡೆಸುವಂತೆ ಪ್ರದೀಪ್ ಕುಮಾರ್ ಇಡಿಗೆ ಮನವಿ ಮಾಡಿದ್ದಾರೆ. ಯತೀಂದ್ರ ಸಿದ್ದರಾಮಯ್ಯ ಕೂಡ ಇದರಲ್ಲಿ ಪಾಲುದಾರರಾಗಿದ್ದಾರೆ. ಅಲ್ಲದೆ ಸೈಟ್ ವಾಪಸ್ ಪಡೆಯುವ ಮೂಲಕ ಸಾಕ್ಷ್ಯ ನಾಶ ಆಗಿದೆ. ಮುಡಾ ಅಧಿಕಾರಿಗಳನ್ನು ಬಳಸಿಕೊಂಡು ಸಾಕ್ಷಿಗಳನ್ನು ನಾಶ ಮಾಡಲಾಗುತ್ತಿದೆ. ಹಾಗಾಗಿ ಸಾಕ್ಷ ನಾಶ ಪ್ರಕರಣ ದಾಖಲು ಮಾಡಬೇಕೆಂದು ಇಡಿಗೆ ಮನವಿ ಸಲ್ಲಿಸಲಾಗಿದೆ.

# ಯುವತಿಗೆ ವಾಚ್ಯ ಶಬ್ದಗಳಿಂದ ನಿಂದಿಸಿದ ಆಟೋ ಚಾಲಕ!



• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಹೆಚ್ಚಿದಂತೆಯೇ ರೋಡ್ ರೇಜ್ ಪ್ರಕರಣಗಳೂ ಕೂಡ ಹೆಚ್ಚಾಗುತ್ತಿದ್ದು, ಯುವತಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ ಆಟೋ ಚಾಲಕನ ವಿಡಿಯೋ ವೈರಲ್ ಆಗುತ್ತಿದೆ. ಹೌದು.. ನಗರದಲ್ಲಿ ಆಗಿಂದಾಗ್ಗೆ ಆಟೋ ಚಾಲಕರು ಮತ್ತು ಪ್ರಯಾಣಿಕರ ನಡುವಿನ ಕಿರಿಕ್ ನಡೆಯುತ್ತಿರುತ್ತದೆ. ಈ ಪಟ್ಟಿಗೆ ಇದೀಗ ಮತ್ತೊಂದು ಪ್ರಕರಣ ಹೊಸ ಸೇರ್ಪಡೆಯಾಗಿದ್ದು, ಆಟೋ ಚಾಲಕನೋರ್ವ ಯುವತಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಘಟನೆ ವರದಿಯಾಗಿದೆ.

**ಆಟೋ ಚಾಲಕನ ವರ್ತನೆಯನ್ನು ಯುವತಿ ವಿಡಿಯೋ ಮಾಡಿಕೊಂಡು ನಗರ ಪೊಲೀಸರಿಗೆ ಎಕ್ಸ್ ಖಾತೆಯಲ್ಲಿ ಟ್ಯಾಗ್ ಮಾಡಿ ಪೋಸ್ಟ್ ಮಾಡಿದ್ದಾರೆ.**

ಯುವತಿಯೊಬ್ಬಳು ಸಿಲ್ಕ್ ಬೋರ್ಡ್ ಪ್ರಯಾಣಿಸಲು ಆಟೋ ಚಾಲಕನೊಬ್ಬನನ್ನು ವಿಚಾರಿಸಿದ್ದು, ಈ ವೇಳೆ ಆತ ದುಬಾರಿ ಹಣ ಕೇಳಿದ್ದಾನೆ. ಇದಕ್ಕೆ ಯುವತಿ ಹೆಚ್ಚಿನ ಬಾಡಿಗೆ ಕೊಡುವುದಿಲ್ಲ ಎಂದು ಹೇಳಿದ್ದು, ಈ ವೇಳೆ ಚಾಲಕ ಯುವತಿಯೊಂದಿಗೆ ಜಗಳಕ್ಕೇ ಇಳಿದಿದ್ದಾನೆ. ಮಹಿಳಾ ಪ್ರಯಾಣಿಕರೊಬ್ಬರು ಆಟೋ ಹತ್ತುವಾಗಲೇ ಚಾಲಕ ಹೆಚ್ಚಿನ ಹಣ ಕೇಳಿದ್ದಾನೆ. ಆಕೆ 150 ರೂ. ಕೊಡುವುದಾಗಿ ಹೇಳಿದಾಗ ಕೋಪಗೊಂಡ ಚಾಲಕ ಆಕೆ ಮೇಲೆ ರೇಗಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ ಸಿಲ್ಕ್ ಬೋರ್ಡ್ ಇಲ್ಲೇ ಪಕ್ಕದಲ್ಲಿ ಇದ್ಯಾ ಎಂದು ಆಕ್ರೋಶಭರಿತನಾಗಿ ಹೇಳಿದ್ದಾನೆ. ಅಲ್ಲದೆ ಹಣ ಕೊಡೋ ಯೋಗ್ಯತೆ ಇಲ್ಲ ಎಂದು ಛೇಡಿಸಿದ್ದಾನೆ.

## ಕೆಪಿಟಿಸಿಎಲ್ ಹಾಗೂ ಜಲಮಂಡಳಿಯಿಂದ ತುರ್ತು ರಿಪೇರಿ ಪಂಪಿಂಗ್ ಸ್ಟೇಷನ್‌ಗಳಿಗೆ ವಿದ್ಯುತ್ ಸಂಪರ್ಕ ಮರುಸ್ಥಾಪನೆ

• ಉದಯವಾಹಿನಿ, ಬೆಂಗಳೂರು

ನಿನ್ನೆ ರಾತ್ರಿ ಭಾರಿ ಮಳೆ ಹಾಗೂ ಸಿಡಿಲಿನ ಹೊಡೆತದಿಂದ ಹಾರೋಹಳ್ಳಿ ಹಾಗೂ ಟಿ.ಕೆ ಹಳ್ಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ಉಂಟಾಗಿದ್ದ ತಾಂತ್ರಿಕ ಸಮಸ್ಯೆಯನ್ನು ದುರಸ್ತಿಗೊಳಿಸಲಾಗಿದ್ದು, ವಿದ್ಯುತ್ ಸಂಪರ್ಕದಲ್ಲಾಗಿದ್ದ ವ್ಯತ್ಯಯವನ್ನು ಸರಿಪಡಿಸಲಾಗಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷರಾದ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆಯನ್ನು ನೀಡಿರುವ ಅವರು, ನಿನ್ನೆ ರಾತ್ರಿ ಈ ಪಂಪಿಂಗ್ ಸ್ಟೇಷನ್‌ಗಳಿಗೆ ವಿದ್ಯುತ್ ಸಂಪರ್ಕ ನೀಡುತ್ತಿದ್ದ ಲೈನ್‌ಗಳಿಗೆ ಸಿಡಿಲು ಬಡಿದು, ಟ್ರಾನ್ಸ್‌ಫಾರ್ಮರ್‌ಗಳಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿತ್ತು. ನಿನ್ನೆ ರಾತ್ರಿ 11 ಗಂಟೆಯ ಸುಮಾರಿಗೆ ಆದ ಈ ಅವಘಡದಿಂದಾಗಿ ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಪ್ರಮುಖ ಪಂಪಿಂಗ್ ಸ್ಟೇಷನ್ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯ ಉಂಟಾಗಿತ್ತು. ಇದರಿಂದ ನೀರು ಪಂಪಿಂಗ್ ಸ್ಥಗಿತಗೊಂಡಿತ್ತು. ಕೆಪಿಟಿಸಿಎಲ್ ಹಾಗೂ ಬೆಂಗಳೂರು ಜಲಮಂಡಳಿ ಸಿಬ್ಬಂದಿಗಳು ಸಮನ್ವಯದಿಂದ ರಾತ್ರಿ, ಮಳೆಯಲ್ಲೇ ತುರ್ತು ರಿಪೇರಿ ಕಾಮಗಾರಿಯನ್ನು ಕೈಗೊಳ್ಳುವ ಮೂಲಕ ತಾಂತ್ರಿಕ ಸಮಸ್ಯೆಯನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಿದ್ಯುತ್ ವ್ಯತ್ಯಯದಿಂದ ಸುಮಾರು 10 ಗಂಟೆಗಳ ಕಾಲ ಪಂಪಿಂಗ್ ಸ್ಥಗಿತಗೊಂಡಿತ್ತು. ಇದೀಗ ನೀರು ಪಂಪಿಂಗ್ ಪ್ರಕ್ರಿಯೆಯನ್ನು ಚಾಲನೆಗೊಳಿಸಲಾಗಿದೆ. ಈ 10 ಗಂಟೆಗಳ ಸ್ಥಗಿತದಿಂದಾಗಿ ನಗರದ ಕೆಲವು ಪ್ರದೇಶಗಳಲ್ಲಿನ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಯಿದೆ. ಭಾರಿ ಮಳೆಯ ಮಧ್ಯೆ ತುರ್ತು ಕಾಮಗಾರಿ ಮೂಲಕ ತಾಂತ್ರಿಕ ಸಮಸ್ಯೆಯನ್ನು ನಿವಾರಿಸಿದ ಕೆಪಿಟಿಸಿಎಲ್ ಹಾಗೂ ಬೆಂಗಳೂರು ಜಲಮಂಡಳಿ ಸಿಬ್ಬಂದಿಗಳ ಕಾರ್ಯ ಶ್ಲಾಘನೀಯ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷರಾದ ಡಾ. ರಾಮ್ ಪ್ರಸಾತ್ ಮನೋಹರ್ ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವಚ್ಛ ಪರಿಸರ ನಿರ್ಮಾಣಕ್ಕಾಗಿ ಕರೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರಂ

ಕ್ಷೇತ್ರದ ಕಲ್ಕೆರೆ ಬಂಜಾರ ಲೇಔಟ್ನಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ವತಿಯಿಂದ ಆಯೋಜಿಸಿದ 101 ಗಿಡ ನೆಡುವ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ಮಾತನಾಡಿದರು, ಕರವೇ ಸಂಘಟನೆಗೆ ಇರುವ ಪರಿಸರ ಕಾಳಜಿ ಪ್ರತಿಯೊಬ್ಬರಿಗೂ ಬರುವಂತಾಗಲಿ, ಉತ್ತಮ ಆರೋಗ್ಯಕ್ಕಾಗಿ ಹೆಚ್ಚೆಚ್ಚು ಗಿಡಗಳನ್ನು ನೆಟ್ಟು ಬೆಳೆಸುವಂತೆ ನುಡಿದರು. ಕರವೇ ರಾಜ್ಯಾಧ್ಯಕ್ಷ ಪ್ರವೀಣ್ ಶೆಟ್ಟಿ ಮಾತನಾಡಿ, ಪರಿಸರ ಜೊತೆಗೆ ಕನ್ನಡ ಉಳಿವಿಗೂ ಹೆಚ್ಚಿನ ಆದ್ಯತೆ ನೀಡುವಂತೆ ಮನವಿ ಮಾಡಿದರು. ಕಾರ್ಯಕ್ರಮದ ಆಯೋಜಕರಾದ ಕರವೇ ಬೆಂ.ನಗರ ಜಿಲ್ಲಾ ಪ್ರ. ಕಾರ್ಯದರ್ಶಿ ಗಂಧರ್ವ ರಮೇಶ್, ವೃಕ್ಷ ಬಚಾವೋ ಆಂದೋಲನ ಸಮಿತಿ ಅಧ್ಯಕ್ಷ ಪರಿಸರ ಮಂಜು, ಕ್ಷೇತ್ರಾಧ್ಯಕ್ಷ ಕೃಷ್ಣಮೂರ್ತಿ, ಬೆನ್ನಿಗನಹಳ್ಳಿ ರವಿ, ಮುಖಂಡರಾದ ಮಾದೇಶಪ್ಪ, ವೆಂಕಿ, ಮಹಿಳಾ ಮುಖಂಡರು ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಲಾಯರ್ ಜಗದೀಶ್‌ಗೆ ಪ್ರಶಾಂತ್ ಸಂಬರಗಿ ಬಿಗ್‌ಶಾಕ್!

## ಮೊದಲ ದಿನದಿಂದಲೇ ಸ್ಪರ್ಧಿಗಳ ಹೈಡ್ರಾಮ ಶುರುವಾಗಿದ್ದು, ದಿನದಿಂದ ದಿನಕ್ಕೆ ಪ್ರೇಕ್ಷಕರಲ್ಲಿ ಹೆಚ್ಚಿಸಿದ ಕುತೂಹಲ

• ಉದಯವಾಹಿನಿ, ಬೆಂಗಳೂರು

ಕನ್ನಡ ಕಿರುತೆರೆ ಲೋಕದ ಅತಿದೊಡ್ಡ ರಿಯಾಲಿಟಿ ಶೋ ಬಿಗ್‌ಬಾಸ್ ಸೆ.29ರಿಂದ ತನ್ನ 11ನೇ ಸೀಸನ್ ಶುರು ಮಾಡಿದೆ. ಮೊದಲ ದಿನದಿಂದಲೇ ಸ್ಪರ್ಧಿಗಳ ಹೈಡ್ರಾಮ ಶುರುವಾಗಿದ್ದು, ದಿನದಿಂದ ದಿನಕ್ಕೆ ಪ್ರೇಕ್ಷಕರಲ್ಲಿ ಕುತೂಹಲವನ್ನು ಹೆಚ್ಚಿಸುತ್ತಿದೆ. ಅದರಲ್ಲೂ ಲಾಯರ್ ಜಗದೀಶ್ ಅವರು ಹೆಚ್ಚು ಚರ್ಚೆಗೆ ಗ್ರಾಸವಾಗಿದ್ದಾರೆ.

ಇದೀಗ ಬಿಗ್‌ಬಾಸ್ ವಿರುದ್ಧವೇ ಲಾಯರ್ ಜಗದೀಶ್ ತಿರುಗಿಬಿದ್ದಿದ್ದಾರೆ. ಇದರ ಬೆನ್ನಲ್ಲೇ ಜಗದೀಶ್ ವಿರುದ್ಧ ಬಿಗ್‌ಬಾಸ್ ಸೀಸನ್ 9ರ ಸ್ಪರ್ಧಿ ಹಾಗೂ ಸಾಮಾಜಿಕ ಹೋರಾಟಗಾರ ಪ್ರಶಾಂತ್ ಸಂಬರಗಿ ಕಿಡಿಕಾರಿದ್ದಾರೆ. ಕಲರ್ಸ್ ಕನ್ನಡ ವಾಹಿನಿಯಲ್ಲಿ ಸದ್ಯ ಬಿಡುಗಡೆಯಾಗಿರುವ ಪ್ರೋಮೋದಲ್ಲಿ ಜಗದೀಶ್ ಗುಡುಗಿದ್ದಾರೆ. ನನಗೆ ಇಲ್ಲಿ ಇರುವುದಕ್ಕೆ ಇಷ್ಟವಿಲ್ಲ. ನಾನು ಶೋ ಬಿಡುತ್ತೇನೆ. ಈ ಕ್ಷಣ ಮನಸ್ಸು ಮಾಡಿದರು ಇಲ್ಲಿಗೆ ಹೆಲಿಕಾಪ್ಟರ್ ತರಿಸುವ ಕೆಪಾಸಿಟಿ ನನಗಿದೆ. ನಾನೇನಾದ್ರು ಆಚೆ ಹೋದ್ರೆ ಎಲ್ಲವನ್ನು ಬಹಿರಂಗಪಡಿಸುತ್ತೇನೆ. ಈ ಶೋ ಹಾಳು ಮಾಡಿಲ್ಲ ಅಂದ್ರೆ ಕೇಳಿ. ಬಿಗ್‌ಬಾಸ್ ನಾನು ನಿಮ್ಮನ್ನು ಎಕ್ಸ್‌ಪೋಸ್ ಮಾಡುತ್ತೇನೆ. ಕರ್ನಾಟಕದಲ್ಲಿ ನನ್ನನ್ನು ಎದುರು ಹಾಕಿಕೊಂಡು ಶೋ ನಡೆಸುವುದಕ್ಕೆ ಆಗುತ್ತಾ ಎಂದು ಲಾಯರ್ ಜಗದೀಶ್ ಬಿಗ್‌ಬಾಸ್‌ಗೆ ನೇರ ಸವಾಲು ಹಾಕಿದ್ದಾರೆ. ಯಾವ ಕಾರಣಕ್ಕೆ ಈ ಸವಾಲು ಹಾಕಿದ್ದಾರೆ ಎಂಬುದು ಇಂದಿನ ಎಪಿಸೋಡ್‌ನಲ್ಲಿ ಗೊತ್ತಾಗಲಿದೆ. ಲಾಯರ್ ಜಗದೀಶ್ ಬಿಗ್‌ಬಾಸ್ ಮನೆಯೊಳಗೆ ಕಿರುಚಾಡಿ ಅಲ್ಲೋಲ-ಕಲ್ಲೋಲ ಸೃಷ್ಟಿಸಿರುವ ಬೆನ್ನಲ್ಲೇ ಪ್ರಶಾಂತ್ ಸಂಬರಗಿ ಜಗದೀಶ್ ವಿರುದ್ಧ ಕಿಡಿಕಾರಿದ್ದಾರೆ. ಅಲ್ಲದೆ, ಇನ್ನು ಮುಂದೆ ಲಾಯರ್ ಜಗದೀಶ್ ಎಂದು ಕರೆಯಬೇಡಿ ಎಂದಿದ್ದಾರೆ. ಬಿಗ್‌ಬಾಸ್ ಜಗದೀಶನ ಕಾನೂನು ಪದವಿ ರದ್ದಾಗಿದೆ. ಆತನ ದ್ವಿತೀಯ ಪಿಯುಸಿ ಅಂಕಪಟ್ಟಿ ನಕಲಿ ಆಗಿರುವುದರಿಂದ, ನಂತರದ ಪದವಿಗಳು (ಕಾನೂನು ಡಿಗ್ರಿ ಸೇರಿ) ಮಾನ್ಯವಲ್ಲದಿದ್ದುದರಿಂದ ಆತನ ಸನ್ನದ್ದು ವಾಪಾಸ್ ಕೊಡುವಂತೆ ಬಾರ್ ಕೌನ್ಸಿಲ್ ಆದೇಶ ನೀಡಿದೆ. ಆತನನ್ನು ವಕೀಲ್ ಸಾಹೇಬ್ ಎಂದು ಕರೆಯಬೇಡಿ. ಆ ರೀತಿ ಕರೆದರೆ ವಕೀಲರಿಗೆ ಅವಮಾನ ಮಾಡಿದಂತೆ ಎಂದು ಪ್ರಶಾಂತ್ ಸಂಬರಗಿ ಕಿಡಿಕಾರಿದ್ದಾರೆ. ಅಲ್ಲದೆ, ಬಾರ್ ಕೌನ್ಸಿಲ್ ನೀಡಿರುವ ಸುತ್ತೋಲೆಯ ಫೋಟೋವನ್ನು ಸಹ ತಮ್ಮ ಫೇಸ್ ಬುಕ್ ಖಾತೆಯಲ್ಲಿ ಪ್ರಶಾಂತ್ ಸಂಬರಗಿ ಹಂಚಿಕೊಂಡಿದ್ದಾರೆ.



**ನನಗೆ ನಾನೇ ಬಿಗ್‌ಬಾಸ್**

ಜಗದೀಶ್ ಬಿಗ್‌ಬಾಸ್ ನಡೆಯನ್ನು ಖಂಡಿಸಿದ್ದಾರೆ. ಟಾಸ್ಕ್ ಮುಗಿದ ಬಳಿಕ ಈ ರೀತಿ ಕೆಲಸ ಮಾಡಿಸೋದು ಎಷ್ಟು ಸರಿ ಎಂದು ಪ್ರಶ್ನೆ ಮಾಡಿದ್ದಾರೆ. ಮುಖವಾಡ ಹಾಕ್ಕೊಂಡು ಜೀವನ ಮಾಡ್ತಿದ್ದಾರೆ. ಒಬ್ಬ 16 ಜನರನ್ನು ಡಿಫೆಂಡ್ ಮಾಡ್ತಾನೆ. ಮೀಸೆ ಇಟ್ಟೋನು ಯಾರೇ ಇರ್ಬೋದು, ಇದುವರೆಗೆ ಬಿಟ್ಟಿಲ್ಲ. ನನಗೆ ಘನತೆ ಗೌರವ ಆಚೆ ಕಡೆ ಚೆನ್ನಾಗಿಯೇ ಇದೆ. ನನಗೆ ನಾನೇ ಬಿಗ್‌ಬಾಸ್. ನನ್ನನ್ನು ಹೊರಗೆ ಕಳಿಸೋದು ಬೆಸ್ಟ್ ಎಂದು ಹೇಳಿ ಹೊರನಡೆದಿದ್ದಾರೆ.


**ವಕೀಲ ಜಗದೀಶ್ ಬಿಗ್‌ಬಾಸ್ ತೊರೆಯುವ ನಿರ್ಧಾರ**

ಸ್ವರ್ಗದಲ್ಲಿರುವ ಸ್ಪರ್ಧಿಗಳಿಗೆ ಲಕ್ಷುರಿ ಐಟಂಗಳನ್ನು ನೀಡಲಾಗಿತ್ತು. ನಿಯಮದ ಪ್ರಕಾರ ಇದನ್ನು ನರಕದಲ್ಲಿರುವವರಿಗೆ ಕೊಡಬಾರದು ಎಂದು ಹೇಳಲಾಗಿತ್ತು. ಇದರ ಹೊರತಾಗಿಯೂ ಜಗದೀಶ್ ನರಕದಲ್ಲಿರುವವರಿಗೆ ನಿಯಮ ಉಲ್ಲಂಘಿಸಿ ಕೆಲವು ವಸ್ತುಗಳನ್ನು ನೀಡಿದ್ದಾರೆ. ಇದನ್ನು ನೋಡಿದ ಬಿಗ್‌ಬಾಸ್ ಮನೆಯಲ್ಲಿದ್ದ ದಿನಸಿ ಸಾಮಗ್ರಿ, ಹಣ್ಣು-ಹಂಪಲುಗಳನ್ನು ಹಿಂದಿರುಗಿಸಿ ಕೊಡುವಂತೆ ಆದೇಶ ಕೊಟ್ಟಿದ್ದರು. ಎಲ್ಲರೂ ಮೊದಲಿಗೆ ಜಗದೀಶ್ ಅವರು ಬಿಸಿನೀರು ಕೊಟ್ಟ ಕಾರಣದಿಂದ ಈಗಾಯ್ತು ಎಂದು ಭಾವಿಸಿದ್ದರು. ಆದರೆ, ಅಲ್ಲಿ ಬೇರೆಯೇ ನಡೆದಿತ್ತು. ಈ ವಿಚಾರವಾಗಿ ಸ್ಪರ್ಧಿಗಳು ಜಗದೀಶ್ ಅವರಿಗೆ ಛೀಮಾರಿ ಹಾಕಿದ್ದರು. ಇದೀಗ ವಕೀಲ ಜಗದೀಶ್ ಬಿಗ್‌ಬಾಸ್ ತೊರೆಯುವ ನಿರ್ಧಾರಕ್ಕೆ ಬಂದಿದ್ದು, ಮನೆಯಿಂದ ಹೊರಬಂದ ಬಳಿಕ ಕಾರ್ಯಕ್ರಮವನ್ನು ಬಂದ್ ಮಾಡಿಸುವುದಾಗಿ ಕ್ಯಾಮರಾ ಮುಂದೆಯೇ ಹೇಳಿದ್ದಾರೆ.

**ಬಿಗ್‌ಬಾಸ್ ಶೋ ಎಕ್ಸ್‌ಪೋಸ್ ಮಾಡ್ತಿನಿ**

## ಬ್ಲ್ಯಾಕ್ ಫಾರೆಸ್ಟ್ ಸೇರಿ 12 ಕೇಕ್ ಮಾದರಿಗಳಲ್ಲಿ ಕ್ಯಾನ್ಸರ್ ಕಾರಕ ಅಂಶ ಪತ್ತೆ

• ಉದಯವಾಹಿನಿ, ಬೆಂಗಳೂರು



ಕೇಕ್ ಪ್ರಿಯರಿಗೆ ಆಹಾರ ಇಲಾಖೆ ಶಾಕಿಂಗ್ ಸುದ್ದಿ ನೀಡಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ಕರ್ನಾಟಕದಾದ್ಯಂತ 235 ಕೇಕ್ ಮಾದರಿಗಳ ಪರೀಕ್ಷೆ ನಡೆಸಿದ್ದು, ಅವುಗಳಲ್ಲಿ 12 ಕೇಕ್ ಮಾದರಿಗಳಲ್ಲಿ ಕ್ಯಾನ್ಸರ್ ಕಾರಕ ಅಂಶಗಳು ಕಂಡುಬಂದಿವೆ.ರೆಡ್ ವೆಲ್ವೆಟ್ ಮತ್ತು ಬ್ಲ್ಯಾಕ್ ಫಾರೆಸ್ಟ್ ನಂತಹ ಜನಪ್ರಿಯ ಕೇಕ್ ಸೇರಿದಂತೆ 12 ಕೇಕ್ ಮಾದರಿಗಳಲ್ಲಿ ಕ್ಯಾನ್ಸರ್-ಉಂಟುಮಾಡುವ ಅಂಶಗಳು ಪತ್ತೆಯಾಗಿವೆ ಎಂದು ಎಫ್‌ಎಸ್‌ಎಸ್‌ಎಐ ಹೇಳಿದೆ. ಆಹಾರ ಸುರಕ್ಷತಾ ಆಯುಕ್ತ ಶ್ರೀನಿವಾಸ್ ಕೆ ಅವರು ಈ ಸಂಬಂಧ ಬೇಕರಿಗಳಿಗೆ ಎಚ್ಚರಿಕೆ ನೀಡಿದ್ದು, ಕೇಕ್‌ಗಳಲ್ಲಿ ಹಾನಿಕಾರಕ ರಾಸಾಯನಿಕಗಳು ಮತ್ತು ಬಣ್ಣಗಳನ್ನು ಬಳಸದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಚಿಸಿದ್ದಾರೆ. ಕೇಕ್‌ಗೆ ಬಳಸುವ ಪದಾರ್ಥಗಳು ಕಲಬೆರಿಕೆಯಿಂದ ಕೂಡಿವೆ ಎಂಬ ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತದ ಬೇಕರಿಗಳಿಂದ 235 ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದಾಗ 12 ಮಾದರಿಗಳಲ್ಲಿ ಅಲೂನಾ ರೆಡ್, ಸನ್ ಸೆಟ್ ಯೆಲ್ಲೋ, ಪೊನುಸೆಯಾ 4ಆರ್ , ಕಾರ್ಮಿಯೋಸೆನ್ ಎಂಬ ಅಂಶ ಪತ್ತೆಯಾಗಿದೆ ಎಂದು ಆಯುಕ್ತರು ಹೇಳಿದ್ದಾರೆ.ಗೋಬಿ ಮಂಚೂರಿಯನ್, ಕಬಾಬ್‌ಗಳು ಮತ್ತು ಪಾನಿ ಪುರಿ ಸಾಸ್‌ಗಳಂತಹ ಖಾದ್ಯಗಳಲ್ಲಿ ಕೃತಕ ಬಣ್ಣಗಳನ್ನು ಆಹಾರ ಸುರಕ್ಷತಾ ಇಲಾಖೆ ನಿಷೇಧಿಸಿದ ನಂತರ ಈ ಎಚ್ಚರಿಕೆ ನೀಡಿದೆ.

**ಕೇಕ್ ಪ್ರಿಯರೇ ಎಚ್ಚರ!**

**ರೆಡ್ ವೆಲ್ವೆಟ್ ಹಾಗೂ ಬ್ಲಾಕ್ ಫಾರೆಸ್ಟ್ ಕೇಕ್‌ಗೆ ಬಣ್ಣ ಬಳಕೆಗೆ ನಿರ್ಬಂಧಿಸಲಾಗಿದೆ. ಆಹಾರ ಸುರಕ್ಷತಾ ಇಲಾಖೆಯ ಸೂಚನೆ ಪಾಲಿಸುವಂತೆ ಕೇಕ್ ತಯಾರಿಕರಿಗೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.**

# ಜಂಬೂಸವಾರಿಗೆ ಮಹೇಂದ್ರ ಆನೆ ಸಾರಥ್ಯ!

## ಈ ವರ್ಷವೂ ಮಹೇಂದ್ರ ಆನೆಯು 400 ಕೆ.ಜಿ. ತೂಕದ ಮರದ ಅಂಬಾರಿ, ಚಾಮುಂಡೇಶ್ವರಿ ದೇವಿಯನ್ನು ಹೊತ್ತು ಸಾಗಲಿದೆ

• ಉದಯವಾಹಿನಿ, ಶ್ರೀರಂಗಪಟ್ಟಣ


ಪಟ್ಟಣದಲ್ಲಿ ಅ.4ರಂದು ನಡೆಯುವ ದಸರಾ ಉತ್ಸವದ ಜಂಬೂ ಸವಾರಿಯಲ್ಲಿ ಪ್ರಮುಖ ಆಕರ್ಷಣೆ ಚಾಮುಂಡೇಶ್ವರಿ ದೇವಿಯ ಮೆರವಣಿಗೆ. ಕಳೆದ ವರ್ಷದಂತೆ ಈ ವರ್ಷವೂ ಮಹೇಂದ್ರ ಆನೆಯು 400 ಕೆ.ಜಿ. ತೂಕದ ಮರದ ಅಂಬಾರಿ ಸೇರಿ ಒಟ್ಟು 650 ಕೆ.ಜಿ. ತೂಕದ ಸರ್ವಾಲಂಕೃತ ಚಾಮುಂಡೇಶ್ವರಿ ದೇವಿಯನ್ನು ಹೊತ್ತು ಸಾಗಲಿದೆ.

**ಮೈಸೂರು ದಸರಾ ಎಷ್ಟೊಂದು ಸುಂದರ**



ಉದಯವಾಹಿನಿ ಚಿತ್ರ

ಈ ಬಾರಿ ಪಟ್ಟಣದಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯುವ ದಸರಾ ಉತ್ಸವದ ಜಂಬೂ ಸವಾರಿಯಲ್ಲಿ ಮೂರು ಆನೆಗಳು ಪಾಲ್ಗೊಳ್ಳಲಿವೆ. ಮಹೇಂದ್ರ, ಹಿರಣ್ಯ ಮತ್ತು ಲಕ್ಷ್ಮಿ ಹೆಸರಿನ ಆನೆಗಳು ಗುರುವಾರ ಸಂಜೆ ಮೈಸೂರಿನಿಂದ ಇಲ್ಲಿಗೆ ಬರಲಿವೆ ಎಂದು ಅರಣ್ಯ ಇಲಾಖೆಯ ಮೂಲಗಳು ತಿಳಿಸಿವೆ.



ಉದಯವಾಹಿನಿ ಚಿತ್ರ

ಪಟ್ಟಣದ ಚಾಮುಂಡೇಶ್ವರಿ ದೇವಾಲಯದಲ್ಲಿರುವ ಪಂಚ ಲೋಹದ ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ಮರದ ಅಂಬಾರಿಯಲ್ಲಿ ಇಟ್ಟು ಆನೆಯ ಮೇಲೆ ಮೆರವಣಿಗೆ ಮಾಡಲಾಗುತ್ತಿದೆ. ಚಾಮುಂಡೇಶ್ವರಿ ದೇವಿಯ ಈ ವಿಗ್ರಹ 250 ಕೆ.ಜಿ. ತೂಕವಿದೆ. ಮೂರೂವರೆ ಅಡಿ ಎತ್ತರದ ದೇವಿಯು ಅಷ್ಟಭುಜೆಯಾಗಿದ್ದು ಖಡ್ಗ, ಶಂಖ, ಚಕ್ರ, ಅಭಯ ಹಸ್ತ, ಪುಷ್ಪ ಬಾಣ, ಗದೆ ಮತ್ತು ತ್ರಿಶೂಲ ಧಾರಣೆಯಾಗಿದ್ದಾಳೆ. ಹಸನ್ಮುಖಿ ದೇವಿಯು ಸಿಂಹದ ಮೇಲೆ ಕಳಿತಿರುವ ಭಂಗಿಯಲ್ಲಿರುವ ಈ ವಿಗ್ರಹವನ್ನು ಶಿಲ್ಪಿಯು ಚಿತ್ತಾಕರ್ಷಕವಾಗಿ ತಯಾರಿಸಿದ್ದಾನೆ. ದೇವಿಯು ನೋಡಿದ ಕೂಡಲೇ ಭಕ್ತಿ ಹುಟ್ಟಿವಂತೆ ಪ್ರಸನ್ನ ವದನೆಯಾಗಿದ್ದಾಳೆ.

### ಸಾಂಪ್ರದಾಯಿಕ ಪೂಜೆ

ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ಆನೆಯ ಮೇಲೆ ಪ್ರತಿಷ್ಠಾಪಿಸುವ ಮುನ್ನ ಕಿರಂಗೂರು ಬಳಿಯ ಬನ್ನಿ ಮಂಟಪದಲ್ಲಿಟ್ಟು ಸಾಂಪ್ರದಾಯಿಕ ಪೂಜೆ ನೆರವೇರಿಸಲಾಗುತ್ತದೆ. ಗಣಪತಿ ಪೂಜೆ, ಪುಣ್ಯಾಹ ವಾಚನ, ಗಂಗಾ- ಭಾಗೀರತಿ ಪೂಜೆ, ಶೋಡಷೋ ಪಚಾರ, ಬನ್ನಿ ವೃಕ್ಷ ಪೂಜೆ, ನಂದಿ ಧ್ವಜ ಪೂಜೆ; ಗಜ, ಅಶ್ವಪೂಜೆ ಮತ್ತು ಅಷ್ಟ ದಿಕ್ಪಾಲಕ ಬಲಿ ಕೈಂಕರ್ಯಗಳು ನಡೆಯುತ್ತವೆ. ಮಂಗಳಾಷ್ಟಕ ಪೂಜೆಯ ನಂತರ ಜಂಬೂ ಸವಾರಿಗೆ ಚಾಲನೆ ನೀಡಲಾಗುತ್ತದೆ' ಎಂಬುದು ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕ ಕೆ.ಎಸ್. ಲಕ್ಷ್ಮೀಶ ಶರ್ಮಾ ಅವರ ವಿವರಣೆ.

**ಅರಮನೆಯ ಮರದ ಅಂಬಾರಿ:** ಚಾಮುಂಡೇಶ್ವರಿ ದೇವಿ ವಿಗ್ರಹವನ್ನು ಕೂರಿಸುವ, ರಾಜ ಲಾಂಛನವುಳ್ಳ ಮರದ ಅಂಬಾರಿಯನ್ನು ಪ್ರತಿ ವರ್ಷ ಮೈಸೂರು ಅರಮನೆಯಿಂದ ತರಲಾಗುತ್ತದೆ. ತೇಗದ ಮರದಿಂದ ರಾಜ ಮನೆತನದವರು ಈ ಅಂಬಾರಿಯನ್ನು ಮಾಡಿಸಿದ್ದು, ಮೈಸೂರಿನಲ್ಲಿ ನಡೆಯುವ

### ವಿಜಯ ದಶಮಿ ಉತ್ಸವ

ಶ್ರೀರಂಗಪಟ್ಟಣದಲ್ಲಿ 2008ರಲ್ಲಿ ದಸರಾ ಉತ್ಸವ ಪುನರಾರಂಭವಾಗಿದ್ದು ಪ್ರತಿ ವರ್ಷ ದಸರಾದಲ್ಲಿ ಇದೇ ವಿಗ್ರಹವನ್ನೇ ಮೆರವಣಿಗೆ ಮಾಡಲಾಗುತ್ತಿದೆ. ಚಾಮುಂಡೇಶ್ವರಿ ದೇವಿಯ ಭಕ್ತರಾದ ಪಟ್ಟಣದ ತುಳಸಿ ಮನೆ ಸುರೇಶ್ ಎಂಬವರು 3 ಲಕ್ಷ ವೆಚ್ಚದಲ್ಲಿ ಈ ಪಂಚಲೋಹದ ವಿಗ್ರಹವನ್ನು ಮಾಡಿಸಿಕೊಟ್ಟಿದ್ದಾರೆ. ತಮಿಳುನಾಡಿನ ಕುಂಭಕೋಣಂನ ಶಿಲ್ಪಿಯೊಬ್ಬರು ಇದನ್ನು ತಯಾರಿಸಿಕೊಟ್ಟಿದ್ದಾರೆ. ಈ ವಿಗ್ರಹವನ್ನು ದಸರಾ ಉತ್ಸವ ಮಾತ್ರವಲ್ಲದೆ ಇಲ್ಲಿ ನಡೆಯುವ ವಿಜಯ ದಶಮಿ ಉತ್ಸವ ಯುಗಾದಿ ಮತ್ತು ಚಾಮುಂಡೇಶ್ವರಿ ವರ್ಧಂತಿಯ ದಿನ ಕೂಡ ಮೆರವಣಿಗೆ ಮಾಡಲಾಗುತ್ತದೆ.

ಜಂಬೂ ಸವಾರಿಯ ತಾಲೀಮಿನಲ್ಲಿ ಇದೇ ಅಂಬಾರಿಯನ್ನು ಬಳಸಲಾಗುತ್ತದೆ.

ಪಟ್ಟಣದಲ್ಲಿ ನಡೆಯುವ ದಸರಾ ಉತ್ಸವದ ಹಿಂದಿನ ದಿನ ಅಂಬಾರಿಯನ್ನು ಮೈಸೂರಿನಿಂದ ತಂದು ಉತ್ಸವ ಮುಗಿದ ನಂತರ ಅರಮನೆಗೆ ಮರಳಿಸಲಾಗುತ್ತದೆ.

# ರಸ್ತೆ ಡಾಂಬರೀಕರಣಕ್ಕಾಗಿ ರಸ್ತೆ ತಡೆದು ಪ್ರತಿಭಟನೆ

## ತಕ್ಷಣ ಗುಂಡಿ ಮುಚ್ಚುವ ಪ್ರಕ್ರಿಯೆ ಆರಂಭಿಸಿದ ಪಿಡಬ್ಲ್ಯೂಡಿ, ಜೆಇ

• ಉದಯವಾಹಿನಿ,ಬೇತಮಂಗಲ

ಕೋಲಾರ ಜಿಲ್ಲಾ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಲೋಕೋಪಯೋಗಿ ಇಲಾಖೆಯ ರಸ್ತೆಯನ್ನು ಈ ಕೂಡಲೇ ಡಾಂಬರೀಕರಣಗೋಳಿಸಬೇಕೆಂದು ಅಂಬೇಡ್ಕರ್ ಯುವ ವೇದಿಕೆ ಕರ್ನಾಟಕ ಸಂಘಟನೆಯ ಸಂಸ್ಥಾಪಕಾಧ್ಯಕ್ಷ ಜೈ ಭೀಮ್ ಶ್ರೀನಿವಾಸ್ ನೇತೃತ್ವದಲ್ಲಿ ಅಲ್ಲಿಕುಂಟೆ ಬಳಿ ನೂರಾರು ಮಂದಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿ ಆಗ್ರಹಿಸಿದರು.

ಪಟ್ಟಣದಿಂದ ಕೋಲಾರಕ್ಕೆ ಮುಖ್ಯ ಸಂಪರ್ಕ ರಸ್ತೆಯ ಡಾಂಬರೀಕರಣ ಕಿತ್ತು ಹೋಗಿ ಅನೇಕ ವರ್ಷಗಳು ಕಳೆಯುತ್ತಿದ್ದರೂ ಈ ಬಗ್ಗೆ ಆಡಳಿತಾರೂಢ ಕಾಂಗ್ರೆಸ್ ಶಾಸಕರೇ ಇದ್ದರೂ ಈ ರಸ್ತೆಯ ದುಸ್ಥಿತಿಯನ್ನು ಸರಿಪಡಿಸದಿರುವುದು ನಮ್ಮ ದುರ್ದೈವೆಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಜಿಎಫ್ ಕ್ಷೇತ್ರದಿಂದ ಬಂಗಾರಪೇಟೆನಂತರ ಕೋಲಾರ ಮೂವರು ಶಾಸಕರ ವ್ಯಾಪ್ತಿಗೆ ಒಳ



ಉದಯವಾಹಿನಿ ಚಿತ್ರ

ಪಡುವ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಜನ ಪ್ರತಿನಿಧಿಗಳು ಮೀನಾಮೇಷ ಎನಿಸುತ್ತಿರುವ ಕ್ರಮ ಖಂಡನೀಯವೆಂದರು. ಈ ರಸ್ತೆಯಲ್ಲಿ ಪ್ರತಿ ನಿತ್ಯ ಶಾಲಾ-ಕಾಲೇಜು ವಿದ್ಯಾರ್ಥಿಗಳು, ವೃದ್ಧರು, ರೋಗಿಗಳು, ರೈತರ ಸರಕು ಸಾಗಾಟ, ನಿತ್ಯ ನರಸಾಪುರ ಕಾರ್ಖಾನೆ ನೂರಾರು ಯುವಕರು, ಯುವತಿಯರು, ವಿದ್ಯಾರ್ಥಿಗಳು ಇದೇ ರಸ್ತೆಯನ್ನು ಅವಲಂಭಿಸಿದ್ದು, ನಿತ್ಯ ಜಿಲ್ಲಾ ಕೇಂದ್ರಕ್ಕೆ ಪ್ರಯಾಣಿಸಲು ತೀವ್ರ ಅನಾನುಕೂಲತೆಯಿಂದ ಕೂಡಿದ್ದು, ಅನೇಕ ಮಂದಿ ಅಪಘಾತಕ್ಕೆ ಈಡಾಗಿ ಕೈ ಕಾಲು ಕಳೆದುಕೊಂಡಿರುವ ಘಟನೆಗಳು ನಡೆಯುತ್ತಿದ್ದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಏಕೆ ಮೌನವಹಿಸಿದ್ದಾರೆಂದು ಪ್ರಶ್ನಿಸಿದರು.

### ಜಿಲ್ಲಾಧಿಕಾರಿಗಳ ಕಛೇರಿ ವರೆಗೂ ಕಾಲ್ನಡಿಗೆ

**ಕೊಟ್ಟ ಭರವಸೆಯಂತೆ ಒಂದು ತಿಂಗಳಿನಲ್ಲಿ ಬೇತಮಂಗಲ-ಕೋಲಾರ ಮುಖ್ಯ ರಸ್ತೆಯ ಡಾಂಬರೀಕರಣ ಪೂರ್ಣಗೋಳಿಸದಿದ್ದಲ್ಲಿ ಈ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಸಾರ್ವಜನಿಕರೊಂದಿಗೆ ರಸ್ತೆ ತಡೆ ಮಾಡಿ ಜಿಲ್ಲಾಧಿಕಾರಿಗಳ ಕಛೇರಿ ವರೆಗೂ ಕಾಲ್ನಡಿಗೆ ಮೂಲಕ ಹೋಗಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.**

# ಅತಂತ್ರ ಸ್ಥಿತಿಯಲ್ಲಿ ಕುಣಿಗಲ್ ಪುರಸಭೆ

• ಉದಯವಾಹಿನಿ, ಕುಣಿಗಲ್



ಉದಯವಾಹಿನಿ ಚಿತ್ರ

ಜನಪ್ರತಿನಿಧಿಗಳ ಆಡಳಿತದಿಂದ ದೂರ ಉಳಿದಿರುವ ಪುರಸಭೆಯಲ್ಲಿ, ಅವ್ಯವಹಾರಗಳ ಆರೋಪದ ಮೇಲೆ ಮುಖ್ಯಾಧಿಕಾರಿಯೂ ಅಮಾನತಾಗಿದ್ದಾರೆ. ಹತ್ತು ಸಿಬ್ಬಂದಿ ವಿರುದ್ಧ ವಿಚಾರಣೆ ಮುಂದುವರೆದಿದೆ. ಪುರಸಭೆ ಅತಂತ್ರ ಸ್ಥಿತಿಗೆ ತಲುಪಿದ್ದು ಸಂಬಂಧಪಟ್ಟವರು ವ್ಯವಸ್ಥಿತ ಆಡಳಿತಕ್ಕೆ ಗಮನಹರಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

**ಹತ್ತು ಸಿಬ್ಬಂದಿ ವಿರುದ್ಧ ವಿಚಾರಣೆ**

ಪುರಸಭೆಯಲ್ಲಿ ಇಪ್ಪತ್ತು ತಿಂಗಳಿಂದ ಜನಪ್ರತಿನಿಧಿಗಳ ಆಡಳಿತವಿಲ್ಲ. ಉಪವಿಭಾಗಾಧಿಕಾರಿ ಅಡಳಿತಾಧಿಕಾರಿಯಾಗಿದ್ದರೂ, ಕಾರ್ಯಭಾರ, ಒತ್ತಡದಿಂದ ಪುರಸಭೆಯತ್ತ ಗಮನ ಹರಿಸಲಾಗುತ್ತಿಲ್ಲ. ಒಂದು ವರ್ಷದಿಂದ ಮುಖ್ಯಾಧಿಕಾರಿ ( ಶಿವಪ್ರಸಾದ್ ಮತ್ತು ಮಂಜುಳಾ) ಹುದ್ದೆಯ ಹಾವು- ಏಣಿ ಆಟದಲ್ಲಿ ಶಾಸಕ ಡಾ.ರಂಗನಾಥ್ ಮಧ್ಯಪ್ರವೇಶದಿಂದ ರಾಜಕೀಯಕ್ಕೆ ತಿರುಗಿತ್ತು. ಶಿವಪ್ರಸಾದ್ ವಿರುದ್ಧ ಪೌರಾಡಳಿತ ಸಚಿವಾಲಯದಿಂದ ತನಿಖೆಗೆ ಶಾಸಕರು ಆಗ್ರಹಿಸಿದ್ದರು. ತನಿಖೆ ನಂತರ ಮುಖ್ಯಾಧಿಕಾರಿ ಶಿವಪ್ರಸಾದ್ ಅಮಾನತಾಗಿದ್ದರು. ಸದ್ಯ ತಹಶೀಲ್ದಾರ್ ರಶ್ಮಿ ಪ್ರಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪುರಸಭೆಯ ಹನ್ನೊಂದು ಸಿಬ್ಬಂದಿ ವಿರುದ್ಧ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸುತ್ತಿರುವುದರಿಂದ ಎಲ್ಲರೂ ಆತಂಕದಲ್ಲಿದ್ದಾರೆ. ಕೆಲವರು ನಾನಾ ಕಾರಣಗಳಿಂದಾಗಿ ರಜೆಯಲ್ಲಿರುವುದರಿಂದ ಪುರಸಭೆ ಆಡಳಿತ ವ್ಯವಸ್ಥೆ ಅತಂತ್ರವಾಗಿದ್ದು ನಾಗರಿಕರು ಪರದಾಡುವಂತಾಗಿದೆ.

## ಸುಧಾಕರ್- ಪ್ರದೀಪ್ ನಡುವೆ ಜಿದ್ದು

# ಅಡಕತ್ತರಿಯಲ್ಲಿ ಅಧಿಕಾರಿಗಳು



• ಉದಯವಾಹಿನಿ, ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ 'ಶಿಷ್ಟಾಚಾರ'ದ ವಿಚಾರವು ಅಧಿಕಾರಿಗಳ ವಲಯಕ್ಕೆ ತಲೆನೋವು ತಂದಿದೆ. ಕಾರ್ಯಕ್ರಮಗಳಲ್ಲಿ 'ಶಿಷ್ಟಾಚಾರ'ದ ವಿಚಾರ ವಾಗ್ವಾದ ಮತ್ತು ಪ್ರತಿಷ್ಠೆಯಾಗಿ ಪರಿವರ್ತನೆ ಆಗುತ್ತಿದೆ.

ಸಂಸದ ಡಾ.ಕೆ.ಸುಧಾಕರ್ ಮತ್ತು ಶಾಸಕ ಪ್ರದೀಪ್ ಈಶ್ವರ್ ಅವರ ಬೆಂಬಲಿಗರ ನಡುವೆ 'ಶಿಷ್ಟಾಚಾರ' ಪಾಲನೆ ಮತ್ತು ಉಲ್ಲಂಘನೆಗೆ ಸಂಬಂಧಿಸಿದ ಜಟಾಪಟಿ ಆಗಾಗ್ಗೆ ನಡೆಯುತ್ತಲೇ ಇದೆ. ಆ.26ರಂದು ನಡೆದ ಕೃಷ್ಣಜನ್ಮಾಷ್ಟಮಿ ಸಮಯದಲ್ಲಿಯೂ 'ಶಿಷ್ಟಾಚಾರ' ಪಾಲನೆಯ ವಿಚಾರ ಬೀದಿಗೆ ಬಂದಿತ್ತು. ಡಾ.ಕೆ.ಸುಧಾಕರ್ ಪರವಾಗಿರುವ ನಗರಸಭೆ ಸದಸ್ಯರೊಬ್ಬರನ್ನು ವೇದಿಕೆಯಲ್ಲಿ ಕೂರಿಸಿದ ವಿಚಾರಕ್ಕೆ ಸಿಟ್ಟಿಗೆದಿದ್ದರು. ಆಗ ಶಾಸಕರ ಬೆಂಬಲಿಗರು ಸಹ ವೇದಿಕೆಗೆ ಬಂದರು. ಬೆಂಬಲಿಗರ ಪರವಾಗಿ ಪ್ರದೀಪ್ ಈಶ್ವರ್ ಮಾತನಾಡಿದರು. ಸ್ಥಳದಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲರಿಗೂ ಶಿಷ್ಟಾಚಾರದ ಪಾಠ ಮಾಡಿದರು. ಇತ್ತೀಚೆಗೆ ತಾಲ್ಲೂಕಿನ ಕುಡುವತಿ ಗ್ರಾಮದಲ್ಲಿ ಶಾಲಾಕೊಠಡಿಗಳನ್ನು ಉದ್ಘಾಟಿಸಲಾಯಿತು. ಡಾ.ಕೆ.ಸುಧಾಕರ್ ಶಾಸಕರಾಗಿದ್ದ ವೇಳೆ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಮೂರು ಕೊಠಡಿಗಳನ್ನು ನಿರ್ಮಿಸಲು ಮುತುವರ್ಜಿವಹಿಸಿದ್ದರು. ಆದರೆ ಈ ಕಾರ್ಯಕ್ರಮಕ್ಕೆ ಸಂಸದರನ್ನು ಆಹ್ವಾನಿಸಿರಲಿಲ್ಲ. ಇದರಿಂದ ಸಿಟ್ಟಾದ ಸಂಸದರು ಕ್ಷೇತ್ರ ಶಿಕ್ಷಣಾಧಿಕಾರಿಗೆ ಕರೆ ಮಾಡಿ ಅಸಮಾಧಾನ ಸಹ ವ್ಯಕ್ತಪಡಿಸಿದ್ದರು.

# ಚುನಾಯಿತ ಸರ್ಕಾರವನ್ನ ಅಸ್ಥಿರಗೊಳಿಸಬೇಡಿ: ಹಂಪನಾ

• ಉದಯವಾಹಿನಿ, ಮೈಸೂರು

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ದಸರಾ ಉತ್ಸವಕ್ಕೆ ಗುರುವಾರ ನಾಡೋಜ ಡಾ.ಹಂಪ ನಾಗರಾಜಯ್ಯ ಅವರು ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಧ್ಯುಕ್ತ ಚಾಲನೆ ನೀಡಿದರು.

ಸರ್ಕಾರಗಳನ್ನ ಉರುಳಿಸುವ ದುರಾಲೋಚನೆ ಬರದಂತೆ ತಡೆಯಬೇಕು. ಚುನಾಯಿತ ಸರ್ಕಾರಗಳನ್ನ ಉಳಿಸುವ ಚಿಂತನೆ ಆಗಬೇಕು ಲೋಕಾಂಬಿಕೆಯೂ ಅಂತಹ ಚಿಂತನೆ ಮೂಡಿಸಲಿ ಎಂದು ದಸರಾ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಹಂಪನಾ ಅವರು ಈ ಆಶಯ ವ್ಯಕ್ತಪಡಿಸಿದರು. ಕೆಡವುದು ಸುಲಭ, ಕಟ್ಟುವುದು ಕಷ್ಟ ಮೊದಲೇ ದೊಡ್ಡ ಹೊರೆಗಳಿಂದ ಶ್ರೀಸಾಮಾನ್ಯರು ಬಳಲಿ ಬಸವಳಿದಿದ್ದಾರೆ ಪುನಃ ನಡೆಯುವ ಚುನಾವಣೆಗಳು ದೊಡ್ಡ ಹೊರೆಯಾಗಲಿವೆ. ಜನರಿಗೆ ಇನ್ನಷ್ಟು ಭಾರ ಹೇರಿದರೆ ಕುಸಿದುಬಿಡುತ್ತಾನೆ. ಯಾವ ಪಕ್ಷವೂ ಅಧಿಕಾರದಲ್ಲಿ ಶಾಶ್ವತವಾಗಿ ಇರಲು ಸಾಧ್ಯವಿಲ್ಲ.

**ದಸರಾ ಮಹೋತ್ಸವಕ್ಕೆ ಚಾಲನೆ**




ಉದಯವಾಹಿನಿ ಚಿತ್ರ

ಚಕ್ರಾರ ಪಂಕ್ತಿರಿವ ಗಚ್ಛತಿ ಭಾಗ್ಯ ಪಂಕ್ತಿಃ? ಸೋತ ಪಕ್ಷವು ಮತ್ತೆ ಅಧಿಕಾರಕ್ಕೆ ಬರಬಹುದು ಜನಮನವನ್ನು ತಮ್ಮ ಪರವಾಗಿ ಒಲಿಸಿಕೊಳ್ಳಲು ಐದು ವರ್ಷ ಸಜ್ಜಾಗಬಹುದು ಎಂಬ ಎಚ್ಚರಿಕೆ ನೀಡಿದರು. ಸಿಎಂಗಿಂತ ಮೊದಲೇ ಪುಷ್ಪಾರ್ಚನೆ ಮಾಡಿದ ಡಿಸಿಎಂ ಡಿ.ಕೆ ಶಿವಕುಮಾರ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿದರು.

# ಸಿಎಂ ರಾಜೀನಾಮೆ ಕೊಡಬೇಕಿಲ್ಲ

• ಉದಯವಾಹಿನಿ, ಮೈಸೂರು

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ರಾಜೀನಾಮೆ ಕೇಳಿದ್ರೆ ಕೊಡ್ತಾರಾ? ಸಿಎಂ ಸಿದ್ದರಾಮಯ್ಯ ಯಾಕೆ ರಾಜೀನಾಮೆ ಕೊಡಬೇಕು ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಸ್ವಪಕ್ಷದವರ ವಿರುದ್ಧವೇ ಟಾಂಗ್ ಕೊಟ್ಟಿದ್ದಾರೆ. ಮೈಸೂರು ದಸರಾ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಎಫ್ ಐಆರ್ ದಾಖಲಾದ ತಕ್ಷಣ ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕಿಲ್ಲ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ರಾಜೀನಾಮೆ ಕೇಳಿದ್ರೆ ಕೊಡ್ತಾರಾ? ಸಿಎಂ ಸಿದ್ದರಾಮಯ್ಯ ಯಾಕೆ ರಾಜೀನಾಮೆ ಕೊಡಬೇಕು? ಎಂದು ಸ್ವಪಕ್ಷದವರ ವಿರುದ್ಧವೇ ಟಾಂಗ್ ಕೊಟ್ಟಿದ್ದಾರೆ. ಬಿಜೆಪಿ-ಜೆಡಿಎಸ್ ನವರಿಗೆ ಮಾಡಲು ಬೇರೆ ಕೆಲಸ ಇಲ್ಲ. ಯಾರ ಮೇಲೆ ಎಫ್ ಐಆರ್ ದಾಖಲಾಗಿದೆಯೋ ಅವರೆಲ್ಲ ವಿಧಾನಸೌಧದ ಬಳಿ ನಿಂತುಕೊಳ್ಳಿ. ಕೇಂದ್ರ ಸರ್ಕಾರದಿಂದ ಏನು ಯೋಜನೆ ತರಬೇಕು ಅದನ್ನು ಯೋಚಿಸಿ, ಸಿದ್ದರಾಮಯ್ಯ ಕಾಲದಲ್ಲಿ ಅಭಿವೃದ್ಧಿ ಆದಷ್ಟು ಯಾವತ್ತೂ ಆಗಿಲ್ಲ ಎಂದು ಸಿಎಂ ಸಿದ್ದರಾಮಯ್ಯರನ್ನು ಹಾಡಿ ಹೊಗಳಿದ್ದಾರೆ.



# ಕರಗೋತ್ಸವಕ್ಕೆ ಅಣಿಯಾದ ಮಂಜಿನ ನಗರಿ

• ಉದಯವಾಹಿನಿ, ಮಡಿಕೇರಿ

ಪಾರಂಪರಿಕ ಕರಗೋತ್ಸವಕ್ಕೆ ಮಂಜಿನ ನಗರಿ ಸಜ್ಜುಗೊಂಡಿದೆ. ಅ.3ರಂದು ಸಂಜೆ 5 ಗಂಟೆಗೆ ನಗರದ ಎಲ್ಲಾ 4 ಶಕ್ತಿ ದೇವತೆಗಳ ಕರಗಗಳು ಇಲ್ಲಿನ ಪಂಪಿನಕೆರೆಯಲ್ಲಿ ಹೊರಡುವ ಮೂಲಕ ಶ್ರದ್ಧಾ, ಭಕ್ತಿಯ ಕರಗೋತ್ಸವ ಆರಂಭವಾಗಲಿದೆ. ಈ ಮೂಲಕ ಮಡಿಕೇರಿಯ ದಸರಾ ಜನೋತ್ಸವಕ್ಕೂ ಸಂಭ್ರಮದ ಚಾಲನೆ ಸಿಗಲಿದೆ. ಇದಕ್ಕಾಗಿ ಪಂಪಿನಕೆರೆಯಲ್ಲಿ ಎಲ್ಲ ಬಗೆಯ ಸಿದ್ಧತಾ ಕಾರ್ಯಗಳು ಅಂತಿಮ ಹಂತ ತಲುಪಿವೆ. ಸ್ವಚ್ಛತಾ ಕಾರ್ಯ ಮುಗಿದಿದೆ. ಗಿಡ, ಗಂಟಿಗಳನ್ನು ತೆರವುಗೊಳಿಸಲಾಗಿದೆ. ರಸ್ತೆಯನ್ನು ಸರಿಪಡಿಸಲಾಗಿದೆ. ವರ್ಷಪೂರ್ತಿ ಕಾಡಿನಂತೆ ಕಾಣುವ ಈ ಪ್ರದೇಶ ಇದೀಗ ನಳನಳಿಸುತ್ತಿದೆ.



ಮತ್ತೊಂದೆಡೆ ಕರಗಗಳು ಸಂಚರಿಸುವ ರಸ್ತೆಗೆ ತೇಪೆ ಹಚ್ಚುವ ಕಾರ್ಯವೂ ಕೊನೆಗಳಿಗೆಯಲ್ಲಿ ಬಿರುಸಿನಿಂದ ನಡೆದಿದೆ. ಕಳೆದ ಬಾರಿ ಕೇವಲ 'ವೆಟ್ ಮಿಕ್ಸ್' ಹಾಕಿ ಮುಚ್ಚಲಾಗಿತ್ತು. ಈ ಬಾರಿ ಡಾಂಬರಿನ ಮೂಲಕವೇ ಗುಂಡಿಗಳನ್ನು ಮುಚ್ಚಲಾಗಿದೆ. ಹೀಗಾಗಿ, ಮುಚ್ಚಲಾಗುತ್ತಿರುವ ಗುಂಡಿಗಳು ಕೇವಲ ದಸರೆಗಷ್ಟೇ ಸೀಮಿತವಾಗದೇ ಒಂದಷ್ಟು ದಿನಗಳ ಕಾಲ ಬಾಳಿಕೆ ಬರಬಹುದು ಎಂಬ ನಿರೀಕ್ಷೆ ಜನಸಾಮಾನ್ಯರಲ್ಲಿ ಮೂಡಿದೆ. ಇದರೊಂದಿಗೆ ನಗರದ ಎಲ್ಲ ನಾಲ್ಕೂ ಶಕ್ತಿ ದೇವತೆಗಳಾದ ದಂಡಿನ ಮಾರಿಯಮ್ಮ, ಕಂಚಿಕಾಮಾಕ್ಷಿಯಮ್ಮ, ಕುಂದೂರುಮೊಟ್ಟೆ ಚೌಟಿ ಮಾರಿಯಮ್ಮ ಹಾಗೂ ಕೋಟೆ ಮಾರಿಯಮ್ಮ ದೇವಸ್ಥಾನಗಳಲ್ಲೂ ಸಿದ್ಧತಾ ಕಾರ್ಯಗಳು ನಡೆದಿವೆ. ದೇಗುಲಗಳನ್ನೆಲ್ಲ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಗುರುವಾರ ತಳಿರು ತೋರಣಗಳನ್ನು ಕಟ್ಟಿ ಕರಗಗಳ ಸ್ವಾಗತಕ್ಕೆ ದೇವಸ್ಥಾನದ ಭಕ್ತಾದಿಗಳು ಸಿದ್ಧರಾಗಿದ್ದಾರೆ.

# ಹೈಟೆಕ್ ಕ್ರೀಡಾಂಗಣಕ್ಕೆ ಮರಗಳ ಮಾರಣಹೋಮ

• ಉದಯವಾಹಿನಿ, ಕುದೂರು

ಪಟ್ಟಣದ ರಾಮಲೀಲಾ ಮೈದಾನದಲ್ಲಿ 13 ಕೋಟಿ ವೆಚ್ಚದ ಹೈಟೆಕ್ ಕ್ರೀಡಾಂಗಣ ನಿರ್ಮಿಸಲು ಮೈದಾನದಲ್ಲಿದ್ದ ಮರಗಳನ್ನು ಕಳೆದ ಎರಡು ದಿನಗಳಿಂದ ಕಡಿಯಲಾಗುತ್ತಿದೆ. ಸುಮಾರು 2 ಎಕರೆ 27 ಗುಂಟೆ ವಿಸ್ತೀರ್ಣದಲ್ಲಿರುವ ವಿಶಾಲವಾದ ಮೈದಾನದ ಸುತ್ತಲೂ ಹಲವು ಜಾತಿಯ ಮರಗಳು ಸೊಂಪಾಗಿ ಬೆಳೆದಿದ್ದವು. ಮೈದಾನದ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಮರಗಳು ಗ್ಯಾಲರಿ ನಿರ್ಮಾಣಕ್ಕೆ ತೊಂದರೆಯಾಗುತ್ತದೆ ಎಂದು ಅವುಗಳನ್ನು ಕಡಿಯುವ ಕೆಲಸ ಆರಂಭವಾಗಿದೆ. ಬೆಳಗ್ಗೆ ಹಾಗೂ ಸಂಜೆ ವೇಳೆ ನೂರಾರು ಜನರು ವಾಯುವಿಹಾರ ನಡೆಸಿ ಮರದ ಕೆಳಗೆ ಕುಳಿತುಕೊಂಡು ವಿಶ್ರಮಿಸುತ್ತಿದ್ದರು. ಅರಣ್ಯ ಇಲಾಖೆಯಿಂದ ಹರಾಜು ಪಡೆದ ಗುತ್ತಿಗೆದಾರ ಮರ ಕಡಿಯಲು ಬಂದಾಗ ನಾಗರಿಕರು ವಿರೋಧಿಸಿದ್ದರು. ಮೈದಾನಕ್ಕೆ ಇನ್ನೂ ಹಣ ಮಂಜೂರು ಆಗಿಲ್ಲ, ಎಸ್ಟಿಮೇಟ್ ಕಾಪಿ ತೋರಿಸಿ ಎಂದು ಗಲಾಟೆ ಮಾಡಿದರು. ನಂತರ ಪೊಲೀಸರು



ಉದಯವಾಹಿನಿ ಚಿತ್ರ

ಮಧ್ಯಪ್ರವೇಶಿಸಿ ಮರ ಕಡಿಯಲು ಪಂಚಾಯಿತಿಯಲ್ಲಿಯೇ ಒಪ್ಪಿಗೆ ನೀಡಿರುವಾಗ ಗಲಾಟೆ ಮಾಡುವುದು ಸರಿಯಲ್ಲ ಎಂದು ಮನವರಿಕೆ ಮಾಡಿದರು. ಕ್ರೀಡಾಂಗಣ ನಿರ್ಮಾಣದ ಸಂಬಂಧ ಪಟ್ಟಣದ ನಾಗರಿಕರಲ್ಲಿ ಪರ ವಿರೋಧದ ಚರ್ಚೆ ಕಳೆದೆರಡು ದಿನಗಳಿಂದ ನಡೆಯುತ್ತಿದೆ. ಕೆಲವರು ಪಟ್ಟಣದ ಅಭಿವೃದ್ಧಿಯಾಗಬೇಕಾದರೆ ಈ ಕ್ರಮ ಅಗತ್ಯ ಎಂದರೆ ಮರಗಳನ್ನು ಉಳಿಸಿಕೊಂಡು ಅದರ ಟೊಂಗೆಗಳನ್ನು ಮಾತ್ರ ಕಡಿದು ಕ್ರೀಡಾಂಗಣ ಮಾಡಬಹುದು ಎನ್ನುತ್ತಾರೆ.

## ಮಿನಿ ನ್ಯೂಸ್

### ಬಂಗಾರದ ಅಂಗಡಿಗಳ ಸಿಸಿಟಿವಿ ತೆಗೆಸುವಂತೆ ಮಾಲೀಕರಿಗೆ ಬೆದರಿಕೆ

• ಉದಯವಾಹಿನಿ, ಚಾಮರಾಜನಗರ

ಇತ್ತೀಚಿನ ದಿನಗಳಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಲೇ ಇವೆ. ಇದೀಗ ತಮ್ಮ ಅಂಗಡಿಗಳಲ್ಲಿ ಅಳವಡಿಕೆ ಮಾಡಿರುವ ಸಿಸಿಟಿವಿ ಕ್ಯಾಮೆರಾವನ್ನು ತೆಗೆದು ಹಾಕುವಂತೆ ಚಿನ್ನದಂಗಡಿ ಹಾಗೂ ಬಟ್ಟೆ ಅಂಗಡಿ ಮಾಲೀಕರಿಗೆ ಅಪರಿಚಿತರು ಬೆದರಿಕೆ ಪತ್ರ ಅಂಟಿಸಿರುವ ಘಟನೆ ಚಾಮರಾಜನಗರದಲ್ಲಿ ನಡೆದಿದೆ. ಚಾಮರಾಜನಗರದ ಎಂ.ಕೆ.ಸುಬ್ರಮಣ್ಯ, ಎಂ.ಕೆ.ಶ್ರೀನಿವಾಸ ಹಾಗೂ ವಾಸುಕಿ ಎಂಬುವವರಿಗೆ ಬೆದರಿಕೆ ಪತ್ರ ಬರೆದು ಅಂಚೆ ಮೂಲಕ ಕಳುಹಿಸಲಾಗಿದೆ. ನಿಮ್ಮ ಅಂಗಡಿಗಳ ಮುಂದೆ ಇರುವ ಸಿಸಿ ಕ್ಯಾಮೆರಾ ತೆಗೆಸಿ, ಇಲ್ಲದಿದ್ದರೇ ತಕ್ಕ ಪಾಠ ಕಲಿಸುತ್ತೇವೆ ಎಂದು ಡೇಂಜರ್ ಸಿಂಬಲ್ ಬರೆದು ಕಳುಹಿಸಿದ್ದಾರೆ. ಮೂರು ಅಂಗಡಿ ಮಾಲೀಕರ ಹೆಸರು ಬರೆದು ಬೆದರಿಕೆ ಹಾಕಿರುವ ಆಸಾಮಿಗಳ ವಿರುದ್ಧ ಚಾಮರಾಜನಗರ ಪಟ್ಟಣ ಠಾಣೆಯಲ್ಲಿ ದೂರು ಕೊಡಲಾಗಿದೆ. ಇದರ ಬೆನ್ನಲೆ ನಿನ್ನೆ (ಅಕ್ಟೋಬರ್ 02) ರಾತ್ರಿ ಮೂರು ಅಂಗಡಿಗಳಲ್ಲಿ ಕಳ್ಳತನ ಆಗಿದ್ದು, ವ್ಯಾಪಾರಿಗಳನ್ನು ಬೆಚ್ಚಿ ಬೀಳಿಸಿದೆ.

### ಗೋಣಿಕೊಪ್ಪಲು ದಸರಾ ಕವಿಗೋಷ್ಠಿ 11ರಂದು

• ಉದಯವಾಹಿನಿ ಗೋಣಿಕೊಪ್ಪಲು


'ಇಲ್ಲಿನ ಕಾವೇರಿ ದಸರಾ ಸಮಿತಿ ಮತ್ತು ಪೊನ್ನಂಪೇಟೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತ ಆಶ್ರಯದಲ್ಲಿ ಗೋಣಿಕೊಪ್ಪಲು ದಸರಾ ಉತ್ಸವದ ಪ್ರಯುಕ್ತ ಅ.11ರಂದು ರಾಜ್ಯಮಟ್ಟದ ಬಹು ಭಾಷಾ ಕವಿಗೋಷ್ಠಿ ನಡೆಯಲಿದೆ' ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪಿ.ಕೇಶವಕಾಮತ್ ತಿಳಿಸಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಿರ್ಮಿಸಿರುವ ದಸರಾ ವೇದಿಕೆಯಲ್ಲಿ ಅಂದು ಬೆಳಿಗ್ಗೆ 10ಕ್ಕೆ ಪತ್ರಕರ್ತ ಜೀವನ್ ಚಿಣ್ಣಪ್ಪ ಕವಿಗೋಷ್ಠಿಯನ್ನು ಉದ್ಘಾಟಿಸಲಿದ್ದಾರೆ. ಸಾಹಿತಿ ನಾಗೇಶ್ ಕಾಲೂರು ಅಧ್ಯಕ್ಷತೆ ವಹಿಸುವರು. ಸಾಹಿತಿ ಜೆ.ಸೋಮಣ್ಣ ಮುಖ್ಯ ಅತಿಥಿಯಾಗಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಕವಿಗೋಷ್ಠಿಯಲ್ಲಿ ಕನ್ನಡ, ಕೊಡವ, ಅರೆಭಾಷೆ, ತುಳು, ಕೊಂಕಣಿ, ಹವ್ಯಕ ಕನ್ನಡ, ಬ್ಯಾರಿ, ಯರವ, ಕುಂಬಾರ, ಹಿಂದಿ, ತಮಿಳು, ಮಲೆಯಾಳಂ, ಮರಾಠಿ, ಇಂಗ್ಲಿಷ್ ಸೇರಿದಂತೆ 15 ಭಾಷೆಯ ಕವನಗಳನ್ನು 78 ಕವಿಗಳು ವಾಚಿಸಲಿದ್ದಾರೆ. ಅಲ್ಲದೆ 4 ಕನ್ನಡದ ಚುಟುಕುಗಳು 10 ಬಾಲ ಪ್ರತಿಭೆಗಳ ಕವನಗಳ ವಾಚನ ಇರಲಿವೆ' ಎಂದು ಹೇಳಿದರು. ಬೆಂಗಳೂರು, ಬಳ್ಳಾರಿ, ಚಿಕ್ಕಮಗಳೂರು, ಸುಳ್ಯ, ಬೆಳಗಾವಿ, ಮೈಸೂರು ಹೀಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಕವಿಗಳ ಅಂಕಣ ಬರಹಗಳ ಪುಸ್ತಕವೂ ಬಿಡುಗಡೆಯಾಗಲಿದೆ' ಎಂದರು.

### ಕೆಜಿಎಫ್ ಹೊರವಲಯದಲ್ಲಿ ಯೂರೋಪಿಯನ್ ಹಕ್ಕಿ

• ಉದಯವಾಹಿನಿ ಕೆಜಿಎಫ್

'ಬೆಣಚು ಕಲ್ಲು ಮಿಶ್ರಿತ ಕೆಂಪು ಮಣ್ಣು ಹೊಂದಿರುವ ನಗರದ ಬಂಗಾರದ ಗಣಿ ಪ್ರದೇಶಕ್ಕೆ ಹಲವು ದಿನಗಳಿಂದ ಯೂರೋಪಿಯನ್ ಬೀ ಈಟರ್ ಹಕ್ಕಿಗಳನ್ನು ಹುಡುಕಿಕೊಂಡು ವಿವಿಧ ಪ್ರದೇಶಗಳ ಪಕ್ಷಿ ಪ್ರಿಯರು ಇಲ್ಲಿಗೆ ಬರುತ್ತಿದ್ದಾರೆ.ಹಕ್ಕಿಗಳನ್ನು ಸೆರೆಹಿಡಿಯಲು ಅವರು ತಮ್ಮ ಬಳಿ ಬೃಹತ್ ಮತ್ತು ಉತ್ತಮ ತಂತ್ರಾಂಶದ ಕ್ಯಾಮೆರಾಗಳನ್ನು ಹೊಂದಿದ್ದು, ಸುತ್ತಮುತ್ತಲಿನ ಜನರನ್ನು ಪ್ರವಾಸಿಗರು ಕುತೂಹಲದಿಂದ ನೋಡುತ್ತಿದ್ದಾರೆ. ಮಹಾತ್ಮ ಗಾಂಧೀಜಿ ಜಯಂತಿ ಪ್ರಯುಕ್ತ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ರಜೆ ಇರುವ ಕಾರಣ ಹಲವರು ಕಾರು ಮತ್ತು ಮತ್ತು ಬೈಕ್‌ಗಳಲ್ಲಿ ಬೀ ಈಟರ್ ಪಕ್ಷಿಗಳನ್ನು ಸೆರೆಹಿಡಿಯಲು ಹೊರಟಿರುವುದು ಕೆಲವು ಕಡೆಗಳಲ್ಲಿ ಕಂಡುಬಂದಿತು. ಈ ವೇಳೆ ವಿದ್ಯುತ್ ತಂತಿಗಳು ಸೇರಿದಂತೆ ಇನ್ನಿತರ ಕಡೆಗಳಲ್ಲಿ ಕುಳಿತುಕೊಂಡಿರುವ ಬೀ ಈಟರ್ ಪಕ್ಷಿಗಳನ್ನು ಸೆರೆಹಿಡಿಯುವ ಕಸರತ್ತನ್ನು ಪ್ರವಾಸಿಗರು ಮಾಡಿದರು. ಬೀ ಈಟರ್ ಪಕ್ಷಿಗಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿಯಲು ದೂರದ ಮುಂಬೈನಿಂದ ಬಂದಿದ್ದ ಮಹಿಳೆಯೊಬ್ಬರು, ತಮ್ಮ ಮಗಳಿಗೆ ಹಕ್ಕಿಗಳ ಚಲನವಲನಗಳ ಕುರಿತು ಹೇಳಿಕೊಡುತ್ತಿದ್ದದ್ದು ಕಂಡುಬಂದಿತು. ಇತರ ಪೋಷಕರು ಸಹ ತಮ್ಮ ಮಕ್ಕಳನ್ನು ಕರೆದುಕೊಂಡು ಬೆಟ್ಟ ಮತ್ತು ಗುಡ್ಡಗಳನ್ನು ಅಲೆದಾಡುತ್ತಿದ್ದ ದೃಶ್ಯಾವಳಿಗಳು ಸಾಮಾನ್ಯವಾಗಿದ್ದವು.



ಯೂರೋಪ್ ಖಂಡದ ಬೀ ಈಟರ್ ಪಕ್ಷಿಯು ಸಾಮಾನ್ಯವಾಗಿ ಕುರುಚಲು ಪ್ರದೇಶದ ಬಯಲು ತಪ್ಪಲನ್ನು ಬಯಸುತ್ತದೆ. ಚಳಿಗಾಲದ ಅವಧಿಯಲ್ಲಿ ಯೂರೋಪ್‌ನ ಚಳಿ ತಡೆಯಲಾರದೆ ಈ ಪಕ್ಷಿಗಳು ಭಾರತಕ್ಕೆ ಬರುತ್ತವೆ. ಸಣ್ಣ ಹುಳುಗಳನ್ನು ತಿಂದು ಜೀವಿಸುವ ಈ ಹಕ್ಕಿಗಳು ಆಗಾಗ್ಗೆ ವಾಸಸ್ಥಳ ಬದಲಾಯಿಸುತ್ತಿರುತ್ತವೆ. ಈಚೆಗೆ ಇವು ಕೆಜಿಎಫ್ ಸುತ್ತಮುತ್ತಲಿನ ಪ್ರದೇಶಗಳನ್ನು ತಮ್ಮ ವಾಸಸ್ಥಾನಕ್ಕೆ ಆಯ್ಕೆ ಮಾಡಿಕೊಂಡಿವೆ ಎಂದು ಪಕ್ಷಿ ಪ್ರಿಯ ಫೋಟೊಗ್ರಾಫರ್ ಶಂಕರ್ ಹೇಳುತ್ತಾರೆ.

# ಅರಮನೆ ನಗರಿ ಮೈಸೂರಿನಲ್ಲಿ ಕಳೆಗಟ್ಟಿದ ದಸರಾ ಸಂಭ್ರಮ

## ಚಾಮುಂಡಿಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ದಸರಾಗೆ ವಿಧ್ಯುಕ್ತ ಚಾಲನೆ

• ಉದಯವಾಹಿನಿ, ಮೈಸೂರು

ವಿಶ್ವವಿಖ್ಯಾತ ಮೈಸೂರು ದಸರಾಗೆ ಚಾಲನೆ ಸಿಕ್ಕಿದೆ. ಚಾಮುಂಡಿಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ದಸರಾಗೆ ವಿಧ್ಯುಕ್ತ ಚಾಲನೆ ದೊರೆತಿದದೆ. ಇನ್ಮುಂದೆ 10 ದಿನಗಳ ಕಾಲ ಮೈಸೂರು ನಗರದಲ್ಲಿ ಸಡಗರ, ಸಂಭ್ರಮ ಮನೆ ಮಾಡಲಿದೆ. ರಾತ್ರಿಯಾಗುತ್ತಿದ್ದಂತೆಯೇ ಇಂದ್ರನ ಅಮರಾವತಿಯೇ ಧರೆಗಿಳಿದ ಅನುಭವವಾಗಲಿದೆ.

ಇಂದಿನಿಂದಲೇ ಇಡೀ ನಗರ ದಸರಾ ಬೆಳಕಿನಲ್ಲಿ ಮಿಂದೇಳಲಿದೆ. ದಸರಾ ವೇಳೆ ವಿದ್ಯುತ್ ದೀಪದ ಬೆಳಕಿನಲ್ಲಿ ಮಿಂದೇಳುತ್ತಿರುವ ನಗರಿಯನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ದಸರಾ ಎಂದರೆ ಎಲ್ಲರ ಮೈಮನವನ್ನು ಪುಳಕಗೊಳಿಸುತ್ತಿದೆ. ಅದರಲ್ಲೂ ದಸರಾ ಎಂದರೆ ಸಾಕು ಮೈಸೂರಿಗೆ ಮೈಸೂರೇ ಬದಲಾಗಿಬಿಡುತ್ತದೆ. ಮಕ್ಕಳಿಂದ ಆರಂಭಗೊಂಡು ವೃದ್ಧರವರೆಗೆ ಎಲ್ಲರಲ್ಲೂ ಸಡಗರ ಮೂಡಿ ಬಿಡುತ್ತದೆ. ಇಡೀ ನಗರದ ವಿದ್ಯುತ್ ದೀಪದ ಬೆಳಕಿನಲ್ಲಿ ಮಿಂದೇಳುತ್ತಿದ್ದರೆ, ಅದರ ನಡುವೆ ದಸರಾಕ್ಕೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ಸಿಗಲಿದೆ. ಇತ್ತ ಅರಮನೆಯಲ್ಲಿ ಖಾಸಗಿ ದರ್ಬಾರ್ ಆರಂಭವಾಗಿದ್ದರೆ, ಅತ್ತ ಫಲಪುಷ್ಪ ಪ್ರದರ್ಶನ, ಪುಸ್ತಕ ಮೇಳ, ಆಹಾರಮೇಳ, ವಸ್ತುಪ್ರದರ್ಶನ ಹೀಗೆ ಎಲ್ಲದಕ್ಕೂ ಚಾಲನೆ ಸಿಗಲಿದ್ದು, ಪ್ರತಿ ದಿನವೂ ದಸರಾ ಸಂಬಂಧ ಕಾರ್ಯಕ್ರಮಗಳು ಆರಂಭವಾಗಲಿವೆ.

**10 ದಿನ ಅದ್ದೂರಿ ಕಾರ್ಯಕ್ರಮ ಪಟ್ಟಿ**



**ಎಲ್ಲರಿಗೂ ದಸರಾದಲ್ಲಿ ಸಂಭ್ರಮಿಸುವ ಸಡಗರ:** ದಸರಾ ಶುರುವಾಗುತ್ತಿದ್ದಂತೆಯೇ ರೈತರು, ಮಹಿಳೆಯರು, ಯುವಕರು, ಯುವತಿಯರು ಹೀಗೆ ಎಲ್ಲರಿಗೂ ದಸರಾದಲ್ಲಿ ಪಾಲ್ಗೊಳ್ಳುವ, ಮಿಂಚುವ ಅವಕಾಶ ದೊರೆಯಲಿದೆ. ಒಂದು ಕಡೆ ಯುವ ಮನಸ್ಸುಗಳಿಗೆ ಲಗ್ಗೆಯಿಡುವ ಯುವ ದಸರಾ ಮನ ತಣಿಸಲಿದ್ದರೆ, ಮತ್ತೊಂದೆಡೆ ಬೋಜನ ಪ್ರಿಯರಿಗೆ ವಿವಿಧ ಖಾದ್ಯಗಳನ್ನು ಉಣಬಡಿಸುತ್ತಾ ಬಾಯಿ ಚಪ್ಪರಿಸುವಂತೆ ಆಹಾರ ಮೇಳ ಮಾಡಲಿದೆ. ಇನ್ನು ಸಂಜೆ ನಗರದಲ್ಲಿ ಅಡ್ಡಾಡಿದರೆ, ಇನ್ನು ಝುಗಮಗಿಸುವ ಅರಮನೆ ಸ್ವರ್ಗದ ಬಾಗಿಲು ತೆರೆದು ಸ್ವಾಗತಿಸುವಂತೆ ಮಾಡುತ್ತಿದೆ. ಇಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸೆಳೆಯಲಿವೆ. ದಸರಾ ಸಡಗರ ಸಂಭ್ರಮದ ಜೊತೆಗೆ ಇತಿಹಾಸ, ರಾಜಪರಂಪರೆಯನ್ನು ತೆರೆದಿಡುವ ಖಾಸಗಿ ದರ್ಬಾರ್ ಗಮನ ಸೆಳೆಯಲಿದೆ. ಅಷ್ಟೇ ಅಲ್ಲದೆ, ಹಿಂದಿನ ರಾಜ ವೈಭವ ಮತ್ತೆ ಮರುಕಳಿಸಿದಂತೆ ಭಾಸವಾಗುತ್ತದೆ. ಜನ ಇನ್ಮುಂದೆ ಹತ್ತು ದಿನಗಳ ಕಾಲ ಸಂಜೆ ಆಗುತ್ತಿದ್ದಂತೆಯೇ ಜನ ಮನೆಯಿಂದ ಹೊರ ಬರಲಿದ್ದಾರೆ.

### ದಸರಾದ ವಿಶೇಷ

**ಇವತ್ತು ಬದಲಾವಣೆಯ ಕಾಲಘಟ್ಟದಲ್ಲಿದ್ದೇವೆ. ಈಗಿನ ತಲೆಮಾರಿಗೆ ಅನ್ವಯವಾಗುವಂತೆ ಹಿಂದಿನ ಸಂಪ್ರದಾಯದೊಂದಿಗೆ ಒಂದಷ್ಟು ಹೊಸ ಕಾರ್ಯಕ್ರಮಗಳನ್ನು ಸೇರ್ಪಡೆ ಮಾಡುತ್ತಾ ದಸರಾ ಇನ್ನಷ್ಟು ವಿಸ್ತಾರವಾಗುತ್ತಾ ಹೋಗುತ್ತಿರುವುದು ದಸರಾದ ವಿಶೇಷವಾಗಿದೆ.**

### ಸಂಪ್ರದಾಯಕ್ಕೊಂದು ಹೊಸ ಮೆರಗು

**ಇನ್ನು ಇವತ್ತು ಇಂತಹದೊಂದು ದಸರಾ ಆಚರಣೆಯನ್ನು ಹಿಂದಿನ ಕಾಲದಲ್ಲಿ ಮೈಸೂರು ಮಹಾರಾಜರು ಜಾರಿಗೆ ತಂದರು. ಅದು ರಾಜತ್ವ ಕಳೆದು ಪ್ರಜಾಪ್ರಭುತ್ವ ಬಂದಿದ್ದರೂ ಹಲವು ಬದಲಾವಣೆಗಳನ್ನು ಕಂಡು ಜನೋತ್ಸವವಾಗಿ ಈಗ ಮೆರೆಯುತ್ತಿದೆ. ಅಶ್ವಯುಜ ಶುದ್ಧ ಪ್ರಥಮೆಯಂದು ನವರಾತ್ರಿ ಉತ್ಸವ ಶುರುವಾಗಿ ಮಹಾನವಮಿಯ ಕಡೇ ದಿನದವರೆಗೂ ಪ್ರತಿನಿತ್ಯ ಪೂಜೆ-ಪುನಸ್ಕಾರ, ಪೂರ್ವಾಹ್ನ ಮತ್ತು ಮಧ್ಯಾಹ್ನ ಸಿಂಹಾಸನಾರೋಹಣ, ಒಡ್ಡೋಲಗ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಹಾರಾಜರು ಆಚರಿಸುತ್ತಿದ್ದರು.**


**ಏನೋ ಒಂಥರಾ ಆನಂದ :** ಹೊರಗಿನಿಂದ ಜನ ಎಲ್ಲೆಡೆ ಸುತ್ತಾಡಿ ಕಣ್ತುಂಬಿಸಿಕೊಂಡು ಹೋಗಲಿದ್ದು, ನಗರದ ಅಲ್ಲಲ್ಲಿ ವೃತ್ತಗಳು, ರಸ್ತೆಗಳು, ಮರಗಳು, ಕಟ್ಟಡಗಳು ಸೇರಿದಂತೆ ಎಲ್ಲೆಡೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದ್ದು, ಅವು ಮಿನುಗುವಾಗ ಕಾಣುವ ದೃಶ್ಯ ಅದ್ಭುತ. ಆದ್ದರಿಂದಲೇ ಮೈಸೂರು ದಸರಾ ಎಂದಾಕ್ಷಣ ಏನೋ ಒಂಥರಾ ಆನಂದ. ಸುಂದರ ಅನುಭವ.ಇನ್ನು ನಗರದಲ್ಲಿ ಅಡ್ಡಾಡುವವರಿಗೆ ಮೈಮನವೆಲ್ಲಾ ರೋಮಾಂಚನ. ಕಣ್ಮುಂದೆ ಚೆಂದದ ಮೈಸೂರು, ಅಂದದ ಅರಮನೆ, ಸುಂದರ ಚಿನ್ನದ ಅಂಬಾರಿ, ಮನಸೆಳೆವ ರತ್ನ ಸಿಂಹಾಸನ, ಸಿಂಹಾಸನಾಧೀಶರಾಗಿ ಮೆರೆದ ಮಹಾರಾಜರ ವೈಭವ-ವೈಭೋಗಗಳೆಲ್ಲವೂ ನೆನಪುಗಳ ಮೆರವಣಿಗೆಯಾಗಿ ತೇಲಿ ಬರುತ್ತದೆ.

ಅಂತರಾಳದಿಂದ..
EDITORIAL

# ತನಿಖೆಯ ದಾರಿ ತಪ್ಪಿಸುತ್ತಿದ್ದಾರೆಯೇ ಕೇಂದ್ರ ಸಚಿವ ಕುಮಾರಸ್ವಾಮಿ

ನಿವೇಶನಗಳನ್ನು ಮರಳಿಸಿ ರುವುದರಿಂದಾಗಿ ಆರೋಪಗಳನ್ನು ಪರೋಕ್ಷವಾಗಿ ಸಮರ್ಥಿಸಿದಂತಾಗಿದೆ ಎಂದು ವಿರೋಧ ಪಕ್ಷಗಳು ಸಂಭ್ರಮಿಸುತ್ತಿದ್ದರೆ, ಸಾರ್ವಜನಿಕ ಬದುಕಿನಲ್ಲಿ ಯಾವ ರೀತಿಯಲ್ಲೂ ಗುರುತಿಸಿಕೊಳ್ಳದ ಸಿದ್ದರಾಮಯ್ಯ ಅವರ ಪತ್ನಿಯನ್ನು ಈ ಪ್ರಕರಣದಲ್ಲಿ ಎಳೆದು ತಂದಿರುವುದನ್ನು ಹಲವರು ಪ್ರಶ್ನಿಸುತ್ತಿದ್ದಾರೆ. ಸಹಸ್ರಾರು ಕೋಟಿ ರೂಪಾಯಿಯ ಹಗರಣಗಳನ್ನು ಮಾಡಿ ಅದನ್ನು ದಕ್ಕಿಸಿಕೊಂಡವರೇ ರಾಜಕೀಯದೊಳಗೆ ಮಿಂಚುತ್ತಿರುವಾಗ, ವಿರೋಧ ಪಕ್ಷಗಳಿಗೆ ಆಹಾರವಾಗಿದ್ದ ಮುಡಾ ನಿವೇಶನಗಳನ್ನು ಮರಳಿಸುವ ಮೂಲಕ ಸಿದ್ದರಾಮಯ್ಯ ಪತ್ನಿ ಸರಿಯಾದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಎಂದು ಹಲವರು ಶ್ಲಾಘಿಸುತ್ತಿದ್ದಾರೆ. ಇದೇ ತೀರ್ಮಾನವನ್ನು ಆರೋಪ ಕೇಳಿ ಬಂದ ಆರಂಭದಲ್ಲೇ ತೆಗೆದುಕೊಂಡಿದ್ದರೆ ಪರಿಣಾಮಕಾರಿಯಾಗಿ ರುತ್ತಿತ್ತು ಮತ್ತು ವಿರೋಧಿಗಳ ಬಾಯಿಯನ್ನು ಮುಚ್ಚಿಸಬಹುದಾಗಿತ್ತು ಎಂದು ಕಾಂಗ್ರೆಸ್ ನೊಳಗಿರುವ ಕೆಲವು ನಾಯಕರು ಒಳಗಿಂದೊಳಗೆ ಅಭಿಪ್ರಾಯ ಪಡುತ್ತಾರೆ. ಅದೇ ಹೊತ್ತಿಗೆ ಬಿಜೆಪಿಯ ಶಾಸಕರೇ, ಬಿಜೆಪಿಯ ಆರೋಪಗಳನ್ನು ತಳ್ಳಿ ಹಾಕುತ್ತಿದ್ದಾರೆ. 'ಬಿಜೆಪಿ ನೇತೃತ್ವದ ಸರಕಾರ ಅಸ್ತಿತ್ವದಲ್ಲಿದ್ದಾಗ ಮುಡಾ ನಿವೇಶನಗಳನ್ನು ಮುಖ್ಯಮಂತ್ರಿ ಪತ್ನಿಗೆ ನೀಡಲಾಗಿತ್ತು ಅದುದರಿಂದ ಪರೋಕ್ಷವಾಗಿ ಈ ಅಕ್ರಮದಲ್ಲಿ ಬಿಜೆಪಿಯೂ ಭಾಗಿ ಯಾದಂತಾಗಿದೆ. ಇಷ್ಟಕ್ಕೂ ನಿವೇಶನಗಳನ್ನು ಸಿದ್ದರಾಮಯ್ಯ ಅವರ ಪತ್ನಿ ಮಾತ್ರ ಪಡೆದಿರುವುದಲ್ಲ. ಇನ್ನೂ ಹಲವರು ಪಡೆದಿದ್ದಾರೆ. ಅವರೆಲ್ಲರಿಂದ ನಿವೇಶನಗಳನ್ನು ಕಿತ್ತುಕೊಳ್ಳುತ್ತಾರೆಯೇ? ಬಿಜೆಪಿ ಆರೋಪದಲ್ಲಿ ಹುರುಳಿಲ್ಲ' ಎಂದು ಬಿಜೆಪಿ ಶಾಸಕರೊಬ್ಬರು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ. ಇವೆಲ್ಲದರ ನಡುವೆ, ಕೇಂದ್ರ ಸಚಿವ ಕುಮಾರಸ್ವಾಮಿ ಮಾತ್ರ. ನಿವೇಶನಗಳನ್ನು ಮರಳಿ ಪಡೆದ ಮುಡಾದ ವಿರುದ್ಧವೇ ಆರೋಪಗಳನ್ನು ಮಾಡಿದ್ದಾರೆ. ಈ ಮೂಲಕ ಹಗರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ. ಸಾಕ್ಷ ನಾಶಕ್ಕೆ ಷಡ್ಯಂತ್ರ ನಡೆದಿದೆ ಎಂದೆಲ್ಲ ದೂರಿದ್ದಾರೆ. ಸ್ವತಃ ಕೋಟ್ಯಂತರ ಬೆಲೆಬಾಳುವ ಗಣಿ ಹಗರಣದಲ್ಲಿ ತನಿಖೆ ಎದುರಿಸುತ್ತಿರುವ ಕೇಂದ್ರ ಸಚಿವ ಕುಮಾರಸ್ವಾಮಿಯವರ ಇತ್ತೀಚಿನ ವರ್ತನೆ, ಹೇಳಿಕೆಗಳನ್ನು ನೋಡಿದರೆ ಅವರು ತೀವ್ರ ಹತಾಶೆಯಲ್ಲಿದ್ದಾರೆ. ಇನ್ನೂ ತನಿಖೆಯೇ ಪೂರ್ತಿಯಾಗದ ಒಂದು ಪ್ರಕರಣದಲ್ಲಿ ಇಷ್ಟೆಲ್ಲ ಪ್ರಮಾದಗಳನ್ನು ಹುಡುಕುವ ಕುಮಾರಸ್ವಾಮಿಯವರು, ತನ್ನ ಹಗರಣಗಳನ್ನು ತನಿಖೆ ನಡೆಸುತ್ತಿರುವ ಅಧಿಕಾರಿಗಳ ಜೊತೆಗೆ ವರ್ತಿಸುತ್ತಿರುವ ವರ್ತನೆ ಇದೀಗ ಪ್ರಶ್ನೆಗೊಳಗಾಗಿದೆ. ತನಿಖೆಗೆ ಸಹಕರಿಸುತ್ತಿಲ್ಲ ಮಾತ್ರವಲ್ಲ ತನಿಖಾಧಿಕಾರಿಯ ಜೊತೆಗೆ ಸಹಕರಿಸದೇ ಅಧಿಕಾರಿಯ ವಿರುದ್ದವೇ ಆರೋಪಗಳನ್ನು ಮಾಡಲು ಶುರು ಹಚ್ಚಿದ್ದಾರೆ. ಅಷ್ಟೇ ಅಲ್ಲ ತನ್ನ ಸಚಿವ ಸ್ಥಾನವನ್ನು ಬಳಸಿಕೊಂಡು ತನಿಖೆಯ ಮೇಲೆ ಪ್ರಭಾವ ಬೀರಲು ಮುಂದಾಗಿದ್ದಾರೆ. ಸಂಡೂರಿನ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಸಂಬಂಧಿಸಿದ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿ ಅವರನ್ನು ವಿಚಾರಣೆಗೆ ಒಳಪಡಿಸಲು ಸಿಟ್ ಈಗಾಗಲೇ ರಾಜ್ಯಪಾಲರ ಅನುಮತಿಯನ್ನು ಕೇಳಿದೆ. ಸಿಟ್ ರಾಜ್ಯಪಾಲರ ಅನುಮತಿ ಕೇಳಿರುವುದು ಮಾಧ್ಯಮಗಳಿಗೆ ಬಹಿರಂಗವಾಗಿರುವುದನ್ನೇ ಒಂದು ಹಗರಣವೆಂದು ಬಿಂಬಿಸಲು ಹೊರಟು ಕುಮಾರಸ್ವಾಮಿ ನಗೆಪಾಟಲಿಗೀಡಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಪಾಲರ ಪಕ್ಷಪಾತವನ್ನು ಪ್ರಶ್ನಿಸಿದ್ದಾರೆಯೇ ಹೊರತು, ತನ್ನ ವಿರುದ್ಧ ತನಿಖೆ ನಡೆಯಬಾರದು ಎಂದು ಯಾವತ್ತೂ ಹೇಳಿಲ್ಲ ತನಿಖೆಯಾಗಲಿ, ಆರೋಪ ಸಾಬೀತಾದರೆ ರಾಜೀನಾಮೆ ನೀಡಲು ಸಿದ್ಧ' ಎಂದು ಅವರು ಈಗಾಗಲೇ ಮಾಧ್ಯಮಗಳ ಮುಂದೆ ಸ್ಪಷ್ಟಪಡಿಸಿದ್ದಾರೆ. ತನಿಖೆ ನಡೆಸುತ್ತಿರುವ ಅಧಿಕಾರಿಗಳ ಮೇಲೆ ಯಾವತ್ತೂ ವೈಯಕ್ತಿಕ ಟೀಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿಲ್ಲ. ಆದರೆ ಕುಮಾರಸ್ವಾಮಿ ತನ್ನ ಹಗರಣಗಳನ್ನು ತನಿಖೆ ನಡೆಸುತ್ತಿರುವ ಎಡಿಜಿಪಿ ವಿರುದ್ಧ ವೈಯಕ್ತಿಕ ದಾಳಿಗಳನ್ನು ನಡೆಸುತ್ತಿದ್ದಾರೆ. ನೇರವಾಗಿ ಅವರಿಗೆ ಬೆದರಿಕೆಗಳನ್ನು ಒಡ್ಡುತ್ತಿದ್ದಾರೆ. ತನಿಖೆಗೆ ಅಡ್ಡಿಯನ್ನುಂಟು ಮಾಡುತ್ತಿದ್ದಾರೆ. ತನ್ನ ಸಚಿವ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು, ಎಡಿಜಿಪಿ ವಿರುದ್ಧ ಕ್ರಮ ಕೈಗೊಳ್ಳಲು ಕೇಂದ್ರ ಸರಕಾರಕ್ಕೆ ಒತ್ತಡವನ್ನು ಹಾಕುತ್ತಿದ್ದಾರೆ. ತಾನು ಪಡೆದ ನಿವೇಶನವನ್ನು ಮರಳಿಸಿರುವುದರಿಂದ ಸಿದ್ದರಾಮಯ್ಯ ಆರೋಪ ಸಾಬೀತಾದಂತೆ ಆಗುವುದಿಲ್ಲ ಅದರೆ ತನಿಖೆ ನಡೆಸುತ್ತಿರುವ ಅಧಿಕಾರಿಗಳನ್ನು ಆರೋಪಿ ಸ್ಥಾನದಲ್ಲಿರುವ ಕೇಂದ್ರ ಸಚಿವರು ಬೆದರಿಸಿದರೆ, ತನಿಖಾಧಿಕಾರಿಯ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿದರೆ, ಅವರ ವಿರುದ್ಧ ಕೇಂದ್ರ ಸಚಿವರಿಗೆ ಗುಟ್ಟಾಗಿ ಪತ್ರಗಳನ್ನು ಬರೆದರೆ ಪರೋಕ್ಷವಾಗಿ ತನ್ನ ಮೇಲಿರುವ ಆರೋಪಗಳನ್ನು ಪರೋಕ್ಷವಾಗಿ ಒಪ್ಪಿಕೊಂಡಂತಾಗುತ್ತದೆ. ತನಿಖೆಗೆ ಸಚಿವ ಕುಮಾರಸ್ವಾಮಿ ಹೆದರಿರುವುದು ಇದರಿಂದ ಬಹಿರಂಗವಾಗುತ್ತದೆ. ಇಷ್ಟಕ್ಕೂ ತನಿಖಾಧಿಕಾರಿಯ ಮೇಲೆ ಕುಮಾರಸ್ವಾಮಿ ಮಾಡುತ್ತಿರುವ ಆರೋಪಗಳಲ್ಲಿ ಎಳ್ಳಷ್ಟಾದರೂ ಸತ್ಯಾಂಶವಿದೆಯೇ ಎಂದರೆ ಅದೂ ಮುಖ್ಯವಾಗಿ, ಎಡಿಜಿಪಿ ಭ್ರಷ್ಟ ಅಧಿಕಾರಿ. ಒಬ್ಬ ಬ್ಲಾಕ್ ಮೇಲರ್, ಕ್ರಿಮಿನಲ್, ಅವರ ಕೈಕೆಳಗೆ ಕೆಲಸ ಮಾಡುವ ಇನ್‌ಸ್ಪೆಕ್ಟರ್ 20 ಕೋಟಿ ರೂಪಾಯಿ ಬೇಡಿಕೆಯಿಟ್ಟು ಸಿಕ್ಕಿ ಬಿದ್ದಿದ್ದಾರೆ ಎಂದೆಲ್ಲ ಅವರು ಆರೋಪಿಸಿದ್ದಾರೆ. ಆದರೆ ಇವುಗಳಿಗೆ ಅವರ ಬಳಿ ಯಾವುದೇ ದಾಖಲೆ ಇಲ್ಲ. ಈ ಆರೋಪಗಳಿಗಾಗಿ ಕೇಂದ್ರ ಸಚಿವ ಕುಮಾರಸ್ವಾಮಿಯ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ ಎಂದು ಎಡಿಜಿಪಿ ಚಂದ್ರಶೇಖರ್ ಈಗಾಗಲೇ ಎಚ್ಚರಿಸಿದ್ದಾರೆ. ಇಷ್ಟ ಕ್ಕೂ ಎಡಿಜಿಪಿ ಚಂದ್ರಶೇಖರ್ 20 ಕೋಟಿ ರೂಪಾಯಿ ಬೇಡಿಕೆಯಿಟ್ಟಿದ್ದಾರೆ ಎಂದು ಆರೋಪಿಸಿರುವುದು ಒಬ್ಬ ಇನ್‌ಸ್ಪೆಕ್ಟರ್. ಆತನ ಹೆಸರು ಕಿಶೋರ್ ಕುಮಾರ್. ಆದರೆ ಈ ಪ್ರಕರಣವನ್ನು ವಿಚಾರಣೆ ನಡೆಸಿದ ಕೋರ್ಟ್ ಆರೋಪವನ್ನು ತಳ್ಳಿ ಹಾಕಿದೆ. ಸುಪ್ರೀಂ ಕೋರ್ಟ್‌ನಲ್ಲಿ ಸುಳ್ಳು ಸಾಕ್ಷ್ಯ ಹೇಳಿದ ಆರೋಪ ಹೊತ್ತಿರುವ ಇನ್‌ಸ್ಪೆಕ್ಟರ್ ಹೇಳಿಕೆಯ ಆಧಾರದಲ್ಲಿ ಕುಮರಾಸ್ವಾಮಿ ಅವರು ಲೋಕಾಯುಕ್ತ ಮುಖ್ಯಸ್ಥರ ಮೇಲೆ ದಾಳಿ ನಡೆಸುವುದು ಎಷ್ಟು ಸರಿ ಆರೋಪವನ್ನು ಸ್ವತಃ ನ್ಯಾಯಾಲಯವೇ ತಳ್ಳಿ ಹಾಕಿರುವಾಗ, ಮತ್ತೆ ಅದನ್ನು ಪ್ರಸ್ತಾಪಿಸುವ ಅಗತ್ಯವಿದೆಯೆ ತನ್ನನ್ನು ಸಮರ್ಥಿಸಿಕೊಳ್ಳಲು ಒಬ್ಬ ಅಮಾನತುಗೊಂಡ ಇನ್‌ಸ್ಪೆಕ್ಟರ್‌ನ್ನು ಬಳಸಿಕೊಳ್ಳಲು ಮುಂದಾಗಿರುವುದೇ ಸಚಿವ ಕುಮಾರಸ್ವಾಮಿಯವರ ಹತಾಶೆ, ಆತಂಕಗಳನ್ನು ಹೇಳುತ್ತದೆ ನಕಲಿ ಮಾರಾಟ ಪತ್ರಗಳನ್ನು ಸೃಷ್ಟಿಸಿ ಪಿಎಸಿಎಲ್ ಭೂಮಿಯನ್ನು ಅಕ್ರಮವಾಗಿ ಮಾರಾಟ ಮಾಡಿದ ಆರೋಪಗಳನ್ನು ಹೊತ್ತಿರುವ, ನೂರಾರು ಕೋಟಿ ರೂ. ವಂಚನೆಯ ಆರೋಪಗಳನ್ನು ಹೊಂದಿರುವ ಇನ್‌ಸ್ಪೆಕ್ಟರ್ ಜೊತೆಗೆ ಕೇಂದ್ರ ಸಚಿವ ಕುಮಾರಸ್ವಾಮಿಗೆ ಇರುವ ಅನೈತಿಕ ಸಂಬಂಧವನ್ನು ಇದು ಹೇಳುತ್ತದೆ.

> ಸಿದ್ದರಾಮಯ್ಯ ವಿರುದ್ಧ ಈಡಿ ಈಸಿಐಆರ್ ದಾಖಲಿಸಿದ ಬೆನ್ನಿಗೇ ಅವರ ಪತ್ನಿ ಸಪಾರ್ವತಿ ಅವರು ತನ್ನ ಹೆಸರಿನಲ್ಲಿರುವ ಮುಡಾ ನಿವೇಶನಗಳನ್ನು ಹಿಂದಿರುಗಿಸಲು ನಿರ್ಧರಿಸಿದ್ದಾರೆ. ಮುಡಾ ನಿವೇಶನಗಳನ್ನು ಅಕ್ರಮ ದಾರಿಯಲ್ಲಿ ಪಡೆಯಲಾಗಿದೆಯೇ ಮತ್ತು ಈ ಅಕ್ರಮದಲ್ಲಿ ಸಿದ್ದರಾಮಯ್ಯ ಅವರ ಪಾಲಿದೆಯೇ ಎನ್ನುವುದು ತನಿಖೆಯಾಗುವ ಮುನ್ನವೇ ಸಿದ್ದರಾಮಯ್ಯ ಅವರ ಪತ್ನಿ ನಿವೇಶನಗಳನ್ನು ಹಿಂದಿರುಗಿಸಿರುವುದನ್ನು ಹಲವರು ಸಮರ್ಥಿಸಿಕೊಂಡಿದ್ದರೆ, ಇನ್ನು ಕೆಲವರು ಪ್ರಶ್ನಿಸಿದ್ದಾರೆ.



## ರಾಮಾಯಣ
### ದಶರಥನು ಅಶ್ವಮೇಧ ಯಾಗವನ್ನು ಮಾಡಿದ್ದು

• ಹಿಂದಿನ ಸಂಚಿಕೆಯಿಂದ **8ನೆಯ ಅಧ್ಯಾಯ**

ಇಟ್ಟಿಗೆಗಳ ಅಚ್ಚುಗಳನ್ನು ಮಾಡಿಸಿ ಆ ಇಟ್ಟಿಗೆಗಳಿಂದ ಗರುಡನ ಆಕಾರದಂತೆ ಆರು ಚಯನಗಳನ್ನು ಮಾಡಿಸಿ ಒಂದೊಂದು ಚಯನವನ್ನು ಮೂರು ಮೂರು ಅಂತರವಾಗಿ ಮಾಡಬೇಕು ಆ ಆರು ಚಯನಗಳೂ ಹದಿನೆಂಟು ರೂಪಗಳಾಗಿ ಹದಿನೆಂಟೂ ಒಂದೇ ಆಕಾರವಾಗಿ ಗರುಡನ ಆಕಾರ ವಾಗಲು, ಆ ಗರುಡನಿಗೆ ಸುವರ್ಣಮಯವಾದ ಗರಿಗಳನ್ನು ಕಲ್ಪಿಸಿ ಮುಂದುಗಡೆಯಲ್ಲಿ ಯೂಪಸ್ತಂಭವನ್ನು ನಿಲ್ಲಿಸಬೇಕು. ಆ ಯೂಪಸ್ತಂಭದ ಸಮೀಪದಲ್ಲಿ ಇಂದ್ರಾದಿ ದೇವತೆಗಳಲ್ಲಿ ಯಾವ ಯಾವ ದೇವತೆಗೆ ಶಾಸ್ತ್ರದಲ್ಲಿ ಎಷ್ಟು ಪಶುಗಳುಂಟೋ ಅಷ್ಟು ಪಶುಗಳನ್ನು ನಿಯಮಿಸಿ, ಸರ್ಪಗಳು ಪಕ್ಷಿಗಳು ಜಲಚರ ಪ್ರಾಣಿಗಳು ಮೊದಲಾದ ಮುನ್ನೂರು ಪಶುಗಳನ್ನು ಅಲ್ಲಿ ನಿಲ್ಲಿಸಿ, ಶಾಮಿತ್ರಸ್ಥಾನ ವೆಂಬ ಸ್ಥಾನದಲ್ಲಿ ಕುದುರೆಯನ್ನು ಕಟ್ಟಲು ಕುದುರೆಯ ಸಹಿತವಾಗಿ ಮುನ್ನೂರೊಂದು ಪಶುಗಳಾಗು ವುವು. ಆ ಪಶುಗಳು ಗ್ರಾಮ್ಯಪಶುಗಳು, ಕುದುರೆ ಹೊರತಾಗಿ ಮಿಕ್ಕ ಪಶುಗಳನ್ನು ಅಭಿಮಂತ್ರಿಸಿ ಬಿಟ್ಟು ಅನಂತರ ಆ ಕುದುರೆಯನ್ನು ಚೆನ್ನಾಗಿ ರಕ್ಷಣೆಮಾಡಿಕೊಂಡು ಪೂಜೆಯನ್ನು ಮಾಡಿ ಸತ್ಕರಿಸಿಕೊಂಡಿರುವುದಕ್ಕಾಗಿ ಕೌಸಲಾದೇವಿಗೆ ನಿಯಮಿಸಿ ಆ ಕುದುರೆಯ ಸಮೀಪದಲ್ಲಿಯೇ ಆ ದೇವಿಯು ಒಂದು ರಾತ್ರಿ ಇರುವಹಾಗೆ ಕಟ್ಟುಮಾಡಿ ಹೋತೃಗಳಾದ ಋತ್ವಿಜರೂ ಉದ್ಗಾತೃಗಳೆಂಬ ಸಾಮಗಾನದ ಋತ್ವಿಜರೂ ಅಧ್ವರ್ಯುಗಳೆಂಬ ಋತ್ವಿಜರೂ ಹೋಮವನ್ನು ಮಾಡಿದರು. ಆಮೇಲೆ ಯಜಮಾನನಾದ ದಶರಥಮಹಾರಾಯನನ್ನೂ ರಾಣಿಯಾದ ಕೌಸಲಾದೇವಿಯನ್ನೂ ಮಿಕ್ಕ ಸ್ತ್ರೀಯರನ್ನೂ ಕರೆದು ಮಂತ್ರವನ್ನು ಹೇಳಿಸಿ ಆ ಅಶ್ವದ ಕಿಬ್ಬೊಟ್ಟೆಯನ್ನೂ, ಅದರ ಕೆಳಗಿದ್ದ ವಪೆಯನ್ನೂ ಮಾಂಸವಿಶೇಷವನ್ನೂ ತೆಗೆದು ಮಹಾ ಜಿತೇಂದ್ರಿಯನಾದ ಋಜನ ವಪಾಶ್ರವಣಿಯೆಂಬ ಗುಳದ ಮುಳ್ಳಿನ ಹೊರೆಯ ಮೇಲೆ ಆತ್ಮಾಭಿಪೂರಣಮಾಡಿ, ಅಗ್ನಿಯಲ್ಲಿ ಕಾಯಿಸಿ, ವಪೆಯನ್ನು ವಿಸ್ತಾರವಾಗಿ ಹರಡಿ, ವಿಧ್ಯುಕ್ತ ಪ್ರಕಾರದಲ್ಲಿ ವಪಾಯಾಗವೆಂಬ ಹೋಮವನ್ನು ಮಾಡಲು ಮಾಂಗಲ್ಯವಾದ ಆ ವಪಾಯಾಗ ಧೂಮವನ್ನು ಆಘ್ರಾಣಿಸಿ ಸಮಸ್ತ ರಾಯರೂ ಅದರ ಪುಣ್ಯ ಪ್ರಭಾವಗಳಿಂದ ತಮ್ಮ ಪಾಪಗಳನ್ನು ಕಳೆದುಕೊಂಡರು. ಆಮೇಲೆ ಮಹಾಕ್ರೂರವಾದ ಅಲುಗುಗಳುಳ್ಳ ಸ್ವಧಿತಿಯೆಂಬ ಹೆಸರುಳ್ಳ ಮೂರು ಚೂರಿಗಳಿಂದ ಆ ಅಶ್ವವನ್ನು ವಿಶಸನಮಾಡಿ ಅದರ ಶರೀರದಲ್ಲಿ ಆಯಾ ಸ್ಥಾನಗಳಲ್ಲಿದ್ದ ಹವಿಸ್ಸುಗಳನ್ನು ವಿಂಗಡಿಸಿ ಅಬ್ಬೆಗಿಡದ ಕೊನೆಯಲ್ಲಿರಿಸಿ, ಯಜ್ಞಕರ್ಮದಲ್ಲಿ ನಿಯಮಿಸಲ್ಪಟ್ಟ ಹದಿನಾರು ಮಂದಿ ಋತ್ವಿಜರಾದ ಬ್ರಾಹ್ಮಣರು ಪಾದಾದಿ ಸಮಸ್ತ ಅಂಗಗಳನ್ನೂ ಅಗ್ನಿಯಲ್ಲಿ ಹೋಮ ಮಾಡಿದರು.

ಮುಂದುವರಿಯುವುದು...

# ನವರಾತ್ರಿ ಮಹೋತ್ಸವ ಆಚರಣೆ: ಸಂಭ್ರಮ

• ಉದಯವಾಹಿನಿ, ವಿಶೇಷ



ಜಗತ್ತಿನಲ್ಲಿ ಯಾವಾಗ ತಾಮಸಿಕ, ಅಸುರೀ ಮತ್ತು ಕ್ರೂರ ಜನರು ಪ್ರಬಲರಾಗಿ ಸಾತ್ತ್ವಿಕ ಮತ್ತು ಧರ್ಮನಿಷ್ಠ ಸಜ್ಜನರನ್ನು ಪೀಡಿಸುತ್ತಾರೆಯೋ, ಆಗ ದೇವಿಯು ಧರ್ಮಸಂಸ್ಥಾಪನೆಗಾಗಿ ಪುನಃ ಪುನಃ ಅವತಾರ ತಾಳುತ್ತಾಳೆ. ಇದು ಆ ದೇವಿಯ ವ್ರತವಾಗಿದೆ. ನವರಾತ್ರಿಯಲ್ಲಿ ದೇವಿತತ್ತ್ವವು ಎಂದಿಗಿಂತ 1000 ಪಟ್ಟು ಹೆಚ್ಚು ಕಾರ್ಯನಿರತವಾಗಿರುತ್ತದೆ. ದೇವಿತತ್ತ್ವದ ಲಾಭವನ್ನು ಆದಷ್ಟು ಹೆಚ್ಚು ಪಡೆದುಕೊಳ್ಳಲು ನವರಾತ್ರಿಯ ಕಾಲದಲ್ಲಿ 'ಶ್ರೀ ದುರ್ಗಾದೇವ್ಯೈ ನಮಃ।' ಎಂಬ ನಾಮಜಪವನ್ನು ಆದಷ್ಟು ಹೆಚ್ಚು ಮಾಡಬೇಕು.

**ನವರಾತ್ರಿ ವ್ರತವನ್ನು ಆಚರಿಸುವ ಪದ್ಧತಿ**

ಈ ವ್ರತಕ್ಕೆ ಅನೇಕ ಕುಟುಂಬಗಳಲ್ಲಿ ಕುಲಾಚಾರದ ಸ್ವರೂಪವಿರುತ್ತದೆ. ಆಶ್ವಯುಜ ಶುಕ್ಲ ಪಾಡ್ಯಕ್ಕೆ ಈ ವ್ರತವು ಪ್ರಾರಂಭವಾಗುತ್ತದೆ. ಮನೆಯಲ್ಲಿ ಪವಿತ್ರ ಜಾಗದಲ್ಲಿ ಒಂದು ಪೀಠವನ್ನು ತಯಾರಿಸಿ ಅದರ ಮೇಲೆ ಸಿಂಹಾಸನದ ಮೇಲೆ ಕುಳಿತಿರುವ ಅಷ್ಟಭುಜದೇವಿಯನ್ನು ಹಾಗೂ ನವಾರ್ಣವಯಂತ್ರ ವನ್ನು ಸ್ಥಾಪಿಸುತ್ತಾರೆ. ಯಂತ್ರದ ಪಕ್ಕದಲ್ಲಿ ಘಟಸ್ಥಾಪನೆ ಮಾಡಿ ಅದಕ್ಕೂ ದೇವಿಗೂ ವಿಧಿ ಪೂರ್ವಕ ಪೂಜೆಯನ್ನು ಮಾಡುತ್ತಾರೆ.

ನವರಾತ್ರಿ ಮಹೋತ್ಸವದಲ್ಲಿ ಕುಲಾಚಾರದಂತೆ ಘಟಸ್ಥಾಪನೆ ಮಾಲಾಬಂಧನ ಮಾಡಬೇಕು. ಹೊಲದಲ್ಲಿನ ಮಣ್ಣನ್ನು ತಂದು ಅದರಿಂದ ಎರಡು ಬೆರಳುಗಳ ಗಾತ್ರದಷ್ಟು ಚೌಕಾಕಾರ ಮಾಡಿ ಅದರಲ್ಲಿ ಐದು ಅಥವಾ ಏಳು ಧಾನ್ಯಗಳನ್ನು ಹಾಕಬೇಕು. ಜೋಳ, ಗೋಧಿ, ಎಳ್ಳು, ಹೆಸರು, ನವಣೆ, ತೃಣ ಧಾನ್ಯ ಮತ್ತು ಕಡಲೆ ಇವು ಸಪ್ತಧಾನ್ಯಗಳಾಗಿವೆ. ಮಣ್ಣಿನ ಅಥವಾ ತಾಮ್ರದ ಕಲಶದಲ್ಲಿ ನೀರು, ಗಂಧ, ಹೂವು, ಗರಿಕೆ, ಅಕ್ಷತೆ, ಅಡಿಕೆ, ಪಂಚಪಲ್ಲವ, ಪಂಚರತ್ನ ಅಥವಾ ನಾಣ್ಯ ಮುಂತಾದ ವಸ್ತುಗಳನ್ನು ಹಾಕಬೇಕು. ಸಪ್ತಧಾನ್ಯ ಮತ್ತು ಕಲಶ ಸ್ಥಾಪನೆಯ ವೈದಿಕ ಮಂತ್ರಗಳು ಗೊತ್ತಿಲ್ಲದಿದ್ದರೆ, ಪುರಾಣೋಕ್ತ ಮಂತ್ರಗಳನ್ನು ಹೇಳಬೇಕು. ಅವೂ ಬರದಿದ್ದರೆ ಆಯಾ ವಸ್ತುಗಳ ಹೆಸರು ಹೇಳಿ 'ಸಮರ್ಪಯಾಮಿ' ಎಂದು ನಾಮಮಂತ್ರದ ಉಪಯೋಗವನ್ನು ಮಾಡಬೇಕು. ಕಲಶದೊಳಗೆ ತಲುಪುವಂತೆ ಮಾಲೆಯನ್ನು ಕಟ್ಟಬೇಕು. ಒಂಭತ್ತು ದಿನಗಳವರೆಗೆ ಪ್ರತಿದಿನ ಕುಮಾರಿಯ ಪೂಜೆಯನ್ನು ಮಾಡಿ ಅವಳಿಗೆ ಭೋಜನವನ್ನು ಕೊಡಬೇಕು. ಮುತ್ತೈದೆ ಎಂದರೆ ಪ್ರಕಟ ಶಕ್ತಿ ಮತ್ತು ಕುಮಾರಿ ಎಂದರೆ ಅಪ್ರಕಟ ಶಕ್ತಿ. ಮುತ್ತೈದೆಯಲ್ಲಿ ಪ್ರಕಟ ಶಕ್ತಿಯು ಸ್ವಲ್ಪ ಅಪವ್ಯಯವಾಗುವುದರಿಂದ ಅವಳಿಗಿಂತ ಕುಮಾರಿಯಲ್ಲಿ ಶಕ್ತಿಯ ಪ್ರಮಾಣವು ಜಾಸ್ತಿಯಿರುತ್ತದೆ. ಅಖಂಡ ದೀಪಪ್ರಜ್ವಲನೆ, ಆ ದೇವತೆಯ ಮಹಾತ್ಮೆಯ ಪಠಣ, ಸಪ್ತ ಶತಿಪಾಠ, ದೇವಿಭಾಗವತ, ಬ್ರಹ್ಮಾಂಡಪುರಾಣದಲ್ಲಿನ ಲಲಿತೋಪಾಖ್ಯಾನವನ್ನು ಕೇಳುವುದು, ಲಲಿತಾಪೂಜೆ, ಸರಸ್ವತಿಪೂಜೆ, ಉಪವಾಸ, ಜಾಗರಣೆ ಮುಂತಾದ ವಿವಿಧ ಕಾರ್ಯಕ್ರಮಗಳನ್ನು ನಡೆಸಿ ಅವರವರ ಶಕ್ತಿಸಾಮರ್ಥ್ಯಕ್ಕನುಸಾರವಾಗಿ ನವರಾತ್ರಿ ಮಹೋತ್ಸವವನ್ನು ಆಚರಿಸುತ್ತಾರೆ. ಭಕ್ತನಿಗೆ ಉಪವಾಸವಿದ್ದರೂ ದೇವತೆಗೆ ಎಂದಿನಂತೆ ಅನ್ನದ ನೈವೇದ್ಯವನ್ನು ಮಾಡಬೇಕು. ಈ ಕಾಲದಲ್ಲಿನ ಆಚಾರದ ಒಂದು ಉತ್ಕೃಷ್ಟ ಅಂಗವೆಂದು ಗಡ್ಡ-ಮೀಸೆಗಳ ಕೂದಲು ಮತ್ತು ತಲೆಯ ಕೂದಲನ್ನು ಕತ್ತರಿಸದಿರುವುದು, ಕಠೋರ ಬ್ರಹ್ಮಚರ್ಯ, ಮಂಚ ಮತ್ತು ಹಾಸಿಗೆಯ ಮೇಲೆ ಮಲಗದಿರುವುದು, ಗಡಿಯನ್ನು ಉಲ್ಲಂಘಿಸದಿರುವುದು, ಪಾದರಕ್ಷೆಗಳನ್ನು ಉಪಯೋಗಿಸದಿರುವುದು ಮುಂತಾದ ನಿಯಮಗಳ ಪಾಲನೆಯನ್ನು ಮಾಡುತ್ತಾರೆ. ನವರಾತ್ರಿಯ ಸಂಖ್ಯೆಗೆ ಒತ್ತುಕೊಟ್ಟು ಕೆಲವರು ಕೊನೆಯ ದಿನವೂ ದೇವಿಯನ್ನು ಇಡುತ್ತಾರೆ; ಆದರೆ ಶಾಸ್ತ್ರಕ್ಕನುಸಾರ ಕೊನೆಯ ದಿನ ನವರಾತ್ರಿಯ ವಿಸರ್ಜನೆಯಾಗುವುದು ಆವಶ್ಯಕವಾಗಿದೆ. ಆ ದಿನ ಸಮಾರಾಧನೆ ಆದ ನಂತರ ಸಮಯವಿದ್ದರೆ ಅದೇ ದಿನ ಎಲ್ಲಾ ದೇವರನ್ನು ತೆಗೆದು ಅಭಿಷೇಕ ಮತ್ತು ಷೋಡಶೋಪಚಾರ ಪೂಜೆಯನ್ನು ಮಾಡಬೇಕು, ಸಮಯವಿಲ್ಲದಿದ್ದರೆ ಮರುದಿನ ಎಲ್ಲಾ ದೇವರಿಗೂ ಪೂಜಾಭಿಷೇಕಗಳನ್ನು ಮಾಡಬೇಕು.

ದೇವಿಯ ಮೂರ್ತಿಯ ವಿಸರ್ಜನೆಯ ಸಮಯದಲ್ಲಿ ಬಿತ್ತಿದ ಸಪ್ತಧಾನ್ಯಗಳ ಸಸಿಗಳನ್ನು ದೇವರಿಗೆ ಅರ್ಪಿಸುತ್ತಾರೆ ಹಾಗೂ 'ಶಾಕಂಭರಿದೇವಿ' ಎಂದು ತಿಳಿದು ಸ್ತ್ರೀಯರು ಅವುಗಳನ್ನು ತಲೆಯಲ್ಲಿ ಧರಿಸಿ ವಿಸರ್ಜನೆಗೆ ತೆಗೆದುಕೊಂಡು ಹೋಗುತ್ತಾರೆ. ನವರಾತ್ರಿಯನ್ನು ಪ್ರಾರಂಭಿಸುವಾಗ ಅಥವಾ ಸಮಾಪ್ತಿ ಮಾಡುವಾಗ ದೇವರ ಉದ್ವಾರ್ಜನೆಯನ್ನು ಅವಶ್ಯ ಮಾಡಬೇಕು. ಉದ್ವಾರ್ಜನೆ ಮಾಡಲು ನಿತ್ಯದಂತೆ ನಿಂಬೆಕಾಯಿ, ಭಸ್ಮ ಮುಂತಾದವುಗಳನ್ನು ಉಪಯೋಗಿಸಬೇಕು. ರಂಗೋಲಿ ಅಥವಾ ಪಾತ್ರೆ ತಿಕ್ಕುವ ಚೂರ್ಣವನ್ನು ಉಪಯೋಗಿಸಬಾರದು. ಕೊನೆಗೆ, ಸ್ಥಾಪಿಸಿದ ಘಟ ಮತ್ತು ದೇವಿಯನ್ನು ವಿಸರ್ಜಿಸಬೇಕು. ನವರಾತ್ರಿ ಅಥವಾ ಇತರ ಧಾರ್ಮಿಕ ವಿಧಿಗಳಲ್ಲಿ ದೀಪವು ಯಾವಾಗಲೂ ಉರಿಯುತ್ತಿರಬೇಕು. ಇದು ಪೂಜಾವಿಧಿಯ ಅಂಗವಾಗಿದೆ. ಆದುದರಿಂದ ದೀಪವು ಗಾಳಿ, ಎಣ್ಣೆ ಕಡಿಮೆಯಾಗುವುದು, ಉರಿದು ಕಪ್ಪಾಗುವುದು ಮುಂತಾದ ಕಾರಣಗಳಿಂದಾಗಿ ನಂದಿದರೆ ಆ ಕಾರಣವನ್ನು ದೂರಗೊಳಿಸಿ ದೀಪವನ್ನು ಪುನಃ ಉರಿಸಬೇಕು ಮತ್ತು ಪ್ರಾಯಶ್ಚಿತ್ತವೆಂದು ಅಧಿಷ್ಠಾನ ದೇವತೆಯ 108 ಅಥವಾ 1008 ರಷ್ಟು ಜಪ ಮಾಡಬೇಕು.

**ದೇವಿಗೆ ಮುಂದಿನಂತೆ ಪ್ರಾರ್ಥನೆಯನ್ನು ಮಾಡಬೇಕು**


**ಹೇ ದೇವಿ, ನಾವು ಶಕ್ತಿಹೀನರಾಗಿದ್ದೇವೆ, ಅಪರಿಮಿತ ಭೋಗವನ್ನು ಭೋಗಿಸಿ ಮಾಯಾಸಕ್ತರಾಗಿದ್ದೇವೆ. ಹೇ ಮಾತೆ, ನೀನು ನಮಗೆ ಬಲವನ್ನು ನೀಡುವವಳಾಗು, ನಿನ್ನ ಶಕ್ತಿಯಿಂದ ನಾವು ಅಸುರೀ ಪ್ರವೃತ್ತಿಯನ್ನು ನಾಶ ಮಾಡುವಂತಾಗಲಿ.**

**ನವರಾತ್ರಿಯ ನಿಮಿತ್ತ ಸನಾತನ ಸಂಸ್ಥೆಯ ವಿಶೇಷ ಲೇಖನ**

# ದೈವಿಕತೆ ಹಾಗೂ ಮಾನವೀಯತೆ..!



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಮನುಷ್ಯನ ಗುಣ ನಿಸ್ವಾರ್ಥ. ಮನುಷ್ಯನ ಜನ್ಮ ನಿಸ್ವಾರ್ಥ ಬದುಕಿನ ಹೃದಯ ವೈಶಾಲ್ಯತೆ. ಸ್ವಾರ್ಥ ಮನಸ್ಥಿತಿಯ ಆಕ್ರಮಣ ಎನ್ನುವುದು ಬಿಗಿಯನ್ನು ಹೆಚ್ಚಿಸುತ್ತದೆ ಹೊರತು ಮನಸ್ಸಿನ ಕಟ್ಟುಪಾಡುಗಳನ್ನು ಇನ್ನೊಬ್ಬರ ಮೇಲೆ ಹೇರುವುದಕ್ಕಿಂತ, ತಮ್ಮನ್ನು ತಾವು ನಿಸ್ವಾರ್ಥ ಆಲೋಚನೆಗಳಲ್ಲಿ ಬೆಳಗಿಸಿಕೊಳ್ಳುತ್ತಾ, ಸ್ವಾರ್ಥ ಮನಸ್ಥಿತಿಯ ಆಲೋಚನೆಗಳ ಬಂಧನಗಳಿಂದ ಬಿಡಿಸಿಕೊಳ್ಳುತ್ತಾ, ಸಾಗುತ್ತಿರಬೇಕಾದರೆ ಎಲ್ಲರೂ ಎಲ್ಲರಲ್ಲೂ ದೇವರನ್ನು ದೈವತ್ವವನ್ನು ಕಾಣುತ್ತಿದ್ದರು. ಯಾವಾಗ ಒಬ್ಬರನ್ನೊಬ್ಬರು ತನ್ನ ಅನುಕೂಲಕ್ಕಾಗಿಯೇ ನಿನ್ನ ಜನ್ಮ ಎನ್ನುವುದು ಎಂದು ತಮ್ಮ ಆಲೋಚನೆಗಳಿಂದ ಬಿಗಿಯಲ್ಪಟ್ಟಾಗ, ಮನುಕುಲದ ಉದ್ದಾರವನ್ನು ಕಲ್ಲು ಮಣ್ಣುಗಳ ಚೈತನ್ಯದಲ್ಲಿ, ವೃಕ್ಷ ರಾಶಿಗಳ ಜೀವಂತಿಕೆಯಲ್ಲಿ ಮಾನವ ಸಹಜ ಗುಣವನ್ನು ಕಂಡುಕೊಳ್ಳಲು ಹಾಗೂ ನಿಸ್ವಾರ್ಥವಾದ ಆಲೋಚನೆಗಳಲ್ಲಿ ಎಲ್ಲರೂ ಒಟ್ಟಿಗೆ ಕೂಡಿ ಬಾಳಲು, ಹಂಚಿ ತಿನ್ನುವ ಮಾನವೀಯತೆಯ ಗುಣವನ್ನು ದೈವಿಕ ಕಟ್ಟುಪಾಡುಗಳಲ್ಲಿ ಹೆಚ್ಚಿಸಲು ಬಂದಂತಹ ಮಾನವ ನಿಸ್ವಾರ್ಥ ಭದ್ರಕೋಟೆಯೇ ಆಲಯಗಳಾಗಿರುತ್ತವೆ. ಕಠಿಣ ಮನಸ್ಸಿನ ಕ್ರೂರತ್ವವನ್ನು ಕರಗಿಸುವುದು ಮತ್ತೊಂದು ಕಠಿಣ ಶಕ್ತಿಯೇ ಆಗಿರಬೇಕೆನ್ನುವುದೇ ದೈವಿಕ ಶಿಲಾ ರೂಪದ ಚೈತನ್ಯವಾಗಿರುತ್ತದೆ. ಹೃದಯದಲ್ಲಿ ಪ್ರೇಮ ಚೈತನ್ಯವನ್ನು ಹೊತ್ತರೆ ಗುಡಿ ಗೋಪುರಗಳ ಚೈತನ್ಯಕ್ಕಿಂತ ಮಾನವೀಯತೆಯ ಮೌಲ್ಯದ ಚೈತನ್ಯ ಅಮೃತ ಜ್ಞಾನ ಸಾಗರದಲ್ಲಿ ಸಮಸ್ತರ ಉದ್ದಾರಕ್ಕಾಗಿ, ತನ್ನಂತೆ ಎಲ್ಲರೂ, ತನ್ನ ಚೈತನ್ಯದಂತೆ ಎಲ್ಲರಲ್ಲೂ ದೈವತ್ವವಿದೆ ಎಂದು ಕಂಡುಕೊಳ್ಳುವುದೇ ಮಾನವೀಯತೆಯ ಧರ್ಮದ ಶ್ರೇಷ್ಠತೆಯಾಗಿರುತ್ತದೆ. ಮೊದಲು ಮಾನವೀಯ ಧರ್ಮವನ್ನು ಪಾಲಿಸಿದರೆ, ಶರೀರವೇ ದೇಗುಲವಾಗಿ, ಆಲೋಚನೆಗಳೇ ಅಮೃತತ್ವದ ಮಹಾ ಚೈತನ್ಯ ಗೋಪುರವಾಗಿ ಬೆಳಗುತ್ತದೆ. ನಮ್ಮದು ಮನುಕುಲ, ಮನುಕುಲದ ಸಹಜ ಮೌಲ್ಯಗಳನ್ನು ಎಲ್ಲರಿಗೂ ದಾರಿ ತೋರುವ ದೀಪಗಳಾಗಿ ಬೆಳಗಿಸಬೇಕೇ ಹೊರತು, ಕುಲದ ಚೈತನ್ಯವನ್ನು ಮೀರಿ ಬೆಳೆದಂತಹ ಆಲೋಚನೆಗಳನ್ನು, ಸ್ವಾರ್ಥ ಆಲೋಚನೆಗಳ ಕಟ್ಟುಪಾಡಲ್ಲಿ ಬಿಗಿಯಬಾರದು. ಮನುಜ ಧರ್ಮ ಶ್ರೇಷ್ಠ ಧರ್ಮ, ಮಾನವೀಯತೆಯ ಗುಣ ನಿಸ್ವಾರ್ಥ ಮನಸ್ಸಿನ ಪ್ರೀತಿ, ಪ್ರೇಮ, ವಾತ್ಸಲ್ಯ, ಕರುಣೆ. ಇದನ್ನೇ ಅಲ್ಲವೇ ಮಾನವ ಭಗವಂತನಿಂದ ಬಯಸುವುದು. ಎಲ್ಲರಿಗೂ ಸಮಾನತೆಯ ಚೈತನ್ಯವನ್ನು ತನ್ನ ಆಲೋಚನೆಗಳಲ್ಲಿ, ನಿಸ್ವಾರ್ಥ ಆಲೋಚನೆಯ ಮನಸ್ಸಿನಲ್ಲಿ ನೀಡುತ್ತಾ ಹೊರಟಾಗ ದೈವತ್ವವನ್ನು ತನ್ನವರಿಂದಲೇ ಪಡೆಯಲು ಸಾಧ್ಯವಿರುತ್ತದೆ. ನಾವು ಮಾನಸಿಕವಾಗಿ ಜಗತ್ತನ್ನು ದ್ವೇಷಿಸಿದರೆ, ಜಗತ್ತು ನಮಗೆ ಅದನ್ನೇ ನೀಡುತ್ತದೆ. ನಾವು ನಿಸ್ವಾರ್ಥ ಮನಸ್ಸಿನಲ್ಲಿ ಜಗತ್ತಿಗೆ ಪ್ರೇಮ ಶಕ್ತಿಯಲ್ಲಿ ಅನುಕೂಲಿಸಿದರೆ, ಇಡೀ ಜಗತ್ತು ನಮ್ಮನ್ನು ದೈವತ್ವವಾಗಿ ನಡೆಸುತ್ತದೆ. ನಡೆದು ಬಿಡಬೇಕು ಮಾನವೀಯತೆಯಲ್ಲಿ, ಮಾನವೀಯ ಚೈತನ್ಯದ ಮಹಾಗೋಪುರದ ಎತ್ತರದಲ್ಲಿ. ಧರ್ಮ ಎನ್ನುವುದು ಭದ್ರಕೋಟೆಯಾಗಿರಬೇಕೆ ಹೊರತು, ಮನುಕುಲದ ಉದ್ಧಾರವನ್ನು ಛಿದ್ರಗೊಳಿಸುವಂತಹ ಆಕ್ರಮಣಕಾರಿ ಬಲವಂತದ ಹೇರಿಕೆ ಆಗಬಾರದು. ನಾನು ಶ್ರೇಷ್ಠ ನಾನೇ ಶ್ರೇಷ್ಠ ಎನ್ನುವುದು, ಎಂದಿಗೂ ಮಾನವೀಯತೆಯನ್ನು ಬೆಳಗಿಸುವುದಿಲ್ಲ. ನಾವು ಶ್ರೇಷ್ಠ ನಾವೆಲ್ಲರೂ ಶ್ರೇಷ್ಠ ಎನ್ನುವುದೇ ಧರ್ಮಶಕ್ತಿಯ ಮೂಲ ಜ್ಞಾನವಾಗಿರುತ್ತದೆ. ನಮಗೆ ನೋವಾದರೆ, ಕಣ್ಣಿನಲ್ಲಿ ನೀರು ಬರುತ್ತದೆ ಹಿಂಸೆಯಲ್ಲಿ ಮಾನವೀಯತೆಯು ನಲಗುತ್ತದೆ ಎನ್ನುವುದಾದರೆ, ಎಲ್ಲರಲ್ಲೂ ನೋವನ್ನು ನೀಡದಂತಹ ದೈವಿಕ ಚೈತನ್ಯವನ್ನು, ನಿಸ್ವಾರ್ಥ ಪ್ರೇಮದ ಆಲೋಚನೆಯನ್ನು ಹೆಚ್ಚಿಸಿಕೊಳ್ಳುವುದೇ ದೈವಿಕತೆಯ ಮಾನವೀಯತೆಯ ಮೌಲ್ಯವಾಗಿರುತ್ತದೆ.


# ಪೇಂಟ್ ದಿ ಬೆಂಗಳೂರು
## ಸುಂದರ ಮಾತನಾಡುವ ಗೋಡೆಗಳು

• ಉದಯವಾಹಿನಿ ಬೆಂಗಳೂರು

ಜೈನ್ (ಡೀಮ್ಡ್-ಟು-ಬಿ-ಯೂನಿವರ್ಸಿಟಿ) ಶಾಂತಾ ಮಣಿ ಕಲಾ ಕೇಂದ್ರ ಮತ್ತು ಸ್ಕೂಲ್ ಆಫ್ ಡಿಸೈನ್, ಮೀಡಿಯಾ ಮತ್ತು ಕ್ರಿಯೇಟಿವ್ ಆರ್ಟ್ಸ್ ಸ್ಕೂಲ್ ಆಫ್ ಡಿಸೈನ್, ಮೀಡಿಯಾ ಮತ್ತು ಕ್ರಿಯೇಟಿವ್ ಆರ್ಟ್ಸ್ ''ಪೇಂಟ್ ದಿ ಥಿಯೇ'' ಎಂಬ ಅತ್ಯಾಕರ್ಷಕ ಮತ್ತು ಅಂತರ್ಗತ ಕಾರ್ಯಕ್ರಮವನ್ನು ಘೋಷಿಸಲು ಸಂತೋಷವಾಗಿದೆ. **ಬೆಂಗಳೂರು:** ನಗುವ, ನಗುವ ಮತ್ತು ಸುಂದರ ಮಾತನಾಡುವ ಗೋಡೆಗಳು. ಈ ಕಾರ್ಯಕ್ರಮವು ಅಕ್ಟೋಬರ್ 4, 2024 ರಂದು ಬೆಳಿಗ್ಗೆ 10:30 ರಿಂದ ಬೆಂಗಳೂರಿನ ಸುಗಟ್ಟಾ / ಹುಣಸಮಾರನಹಳ್ಳಿ ಆವರಣದಲ್ಲಿ (ಶಾಂತಾಮಣಿ ಕಲಾ ಕೇಂದ್ರ), ಸುತ್ತಮುತ್ತಲಿನ ನಾಗರಿಕರಿಗೆ ಲಭ್ಯವಿರುತ್ತದೆ. ಈ ಮುಕ್ತ ಕಾರ್ಯಕ್ರಮವು ಕಲಾವಿದರು, ವಿದ್ಯಾರ್ಥಿಗಳು, ಸಮುದಾಯದ ಸದಸ್ಯರನ್ನು ಒಗ್ಗೂಡಿಸಲು ಮತ್ತು ಬೆಂಗಳೂರಿನ ಗೋಡೆಗಳನ್ನು ಸಾಂಪ್ರದಾಯಿಕ ಕಲೆಯೊಂದಿಗೆ ಜೀವಂತ ಗೊಳಿಸಲು ಆಹ್ವಾನಿಸುತ್ತದೆ. ಸುಗತ್ತ ಮತ್ತು ಹುಣಸಮಾರನಹಳ್ಳಿಯ ಗೋಡೆಗಳು ಸಂತೋಷ, ಪರಂಪರೆ ಮತ್ತು ಸೌಂದರ್ಯದ ಕಥೆಗಳನ್ನು ಹಂಚಿಕೊಳ್ಳುವ ಅಭಿವ್ಯಕ್ತಿಯ ಕ್ಯಾನ್ವಾಸ್ ಗಳಾಗಿ ಮಾರ್ಪಡುತ್ತವೆ. ಬಣ್ಣಗಳು ಮತ್ತು ಕುಂಚಗಳು ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳನ್ನು ಒದಗಿಸಲಾಗುವುದು, ಇದು ಎಲ್ಲಾ ಮಹತ್ವಾಕಾಂಕ್ಷಿ ಮತ್ತು ಅನುಭವಿ ಕಲಾವಿದರಿಗೆ ಪ್ರವೇಶಿಸಬಹುದಾದ ಕಾರ್ಯಕ್ರಮವಾಗಿದೆ.

ಭಾಗವಹಿಸುವವರು ನಗರದ ಸುಂದರೀಕರಣಕ್ಕೆ ಕೊಡುಗೆ ನೀಡುವುದು ಮಾತ್ರವಲ್ಲದೆ ಅವರ ಪಾಲ್ಗೊಳ್ಳುವಿಕೆಯ ಗುರುತಿಸುವಿಕೆಯಾಗಿ ಭಾಗ ವಹಿಸುವಿಕೆ ಪ್ರಮಾಣಪತ್ರಗಳನ್ನು ಸಹ ಪಡೆಯುತ್ತಾರೆ.

**ಈವೆಂಟ್ ವಿವರಗಳು:** ಈವೆಂಟ್ ಹೆಸರು: ಪೇಂಟ್ ದಿ ಬೆಂಗಳೂರು - ನಗುವ, ನಗುತ್ತಿರುವ ಮತ್ತು ಸುಂದರ ಮಾತನಾಡುವ ಗೋಡೆಗಳು ದಿನಾಂಕ: ಅಕ್ಟೋಬರ್ 4, 2024 ಸಮಯ: ಬೆಳಗ್ಗೆ 10:30 ರಿಂದ ಸ್ಥಳ: ಶಾಂತಾಮಣಿ ಕಲಾ ಕೇಂದ್ರ, ಜೈನ್ (ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ), ಸುಗಟ್ಟಾ / ಹುಣಸಮಾರನಹಳ್ಳಿ ಆವರಣ, ಬೆಂಗಳೂರು, ಕರ್ನಾಟಕ ವಿಳಾಸ: ನಂ. 840/12/2, ಸುಗಟ್ಟಾ ಗ್ರಾಮ, ಹುಣಸಮಾರನಹಳ್ಳಿ ಅಂಚೆ, ಜಾಲ ಹೋಬಳಿ, ಬೆಂಗಳೂರು - 562157, ಕರ್ನಾಟಕ, **ಭಾರತ ಒದಗಿಸಿದ ಸಾಮಗ್ರಿಗಳು:** ಎಲ್ಲಾ ಚಿತ್ರಕಲೆ ಸಾಮಗ್ರಿಗಳನ್ನು ಸಂಘಟಕರು ಪೂರೈಸುತ್ತಾರೆ ಭಾಗವಹಿಸುವಿಕೆಯ ಪ್ರಮಾಣಪತ್ರ: ಎಲ್ಲಾ ಭಾಗವಹಿಸುವವರು ಭಾಗವಹಿಸುವಿಕೆಯ ಪ್ರಮಾಣಪತ್ರವನ್ನು ಸ್ವೀಕರಿಸುತ್ತಾರೆ. ಜೈನ್ (ಡೀಮ್ಡ್-ಟು-ಬಿ-ಯೂನಿವರ್ಸಿಟಿ) ಶಾಂತಾಮಣಿ ಕಲಾ ಕೇಂದ್ರ ಮತ್ತು ಸ್ಕೂಲ್ ಆಫ್ ಡಿಸೈನ್, ಮೀಡಿಯಾ ಮತ್ತು ಕ್ರಿಯೇಟಿವ್ ಆರ್ಟ್ಸ್ ಮತ್ತು ಟೌನ್ ಮುನ್ಸಿಪಲ್ ಕೌನ್ಸಿಲ್ ಹುಣಸಮಾರನಹಳ್ಳಿ, ಬೆಂಗಳೂರು, ಕರ್ನಾಟಕ ಮತ್ತು ಎನ್‌ಎಸ್‌ಎಸ್ ವಿಂಗ್ ಜೈನ್ (ಡೀಮ್ಡ್-ಟು-ಬಿ-ಯೂನಿವರ್ಸಿಟಿ) ಮತ್ತು ವನಲೋಕದ ಜಂಟಿ ಪ್ರಯತ್ನ




# ಮೋಜು ಮಸ್ತಿ ಮಾಡಲು ವಿಕಾಸ್ ಸಂಸ್ಥೆ ಅವಕಾಶ

• ಉದಯವಾಹಿನಿ ಬೆಂಗಳೂರು,




ಜೀವನದಲ್ಲಿ ಅಪಾರ ಅನುಭವ ಪಡೆದು ಸಂಧ್ಯಾಕಾಲದಲ್ಲಿರುವ ಹಿರಿಯ ನಾಗರಿಕರಿಗಾಗಿ 2ನೇ ಆವೃತ್ತಿಯ ಹಿರಿಯರ ಹಬ್ಬ''ಕ್ಕೆ ನಗರದ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಮೈದಾನ ಸಜ್ಜಾಗಿದೆ. ಅ.6ರ ಭಾನುವಾರದಂದು ಇಡೀ ದಿನ ಕುಣಿದು ಕುಪ್ಪಳಿಸಿ ಮೋಜು ಮಸ್ತಿ ಮಾಡಲು ವಿಕಾಸ್ ಸಂಸ್ಥೆ ಅವಕಾಶ ಕಲ್ಪಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಯಾ ವಿಕಾಸ್ ಸಂಸ್ಥೆಯ ಸಿಇಒಗಳಾದ ಜಮುನಾ ರವಿ, ಹಿಮಾಂಶು ಜೈನ್, ಸಿಓಓ ಪವಿತ್ರ ರೆಡ್ಡಿ, ಹಿರಿಯರ ಹಬ್ಬದಲ್ಲಿ 1500-2000 ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ. ನಿವೃತ್ತ ಐಎಎಸ್, ಐಪಿಎಸ್, ಉನ್ನತಾಧಿಕಾರಿಗಳು, ಜನ ಸಾಮಾನ್ಯರು ಒಳಗೊಂಡಂತೆ ಎಲ್ಲಾ ರೀತಿಯ ಜನ ಸಮೂಹ ಹಬ್ಬದಲ್ಲಿ ಪಾಲ್ಗೊಳ್ಳುತ್ತಿದೆ. ಪರಸ್ಪರ ಸಮ್ಮಿಲನಕ್ಕೆ ಇದು ರಹದಾರಿಯಾಗಿದ್ದು, ಜ್ಞಾನ-ಹಂಚಿಕೆಯ ವಿಚಾರಗೋಷ್ಠಿಗಳು, ಆರೋಗ್ಯ ತಪಾಸಣೆ, ವೈವಿಧ್ಯಮಯ ಆಟಾಟೋಪಗಳು, ಮನೋರಂಜನಾ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ ಎಂದರು. ಬೆಳಿಗ್ಗೆ 9.30 ರಿಂದ ಸಂಜೆ 5 ಗಂಟೆವರೆಗೆ ನಡೆಯಲಿರುವ ಹಿರಿಯರ ಮೋಜಿನ ಕೂಟದಲ್ಲಿ ವಾಸು ದೀಕ್ಷಿತ್ ಅವರ ಸಂಗೀತ ಕಚೇರಿ ಏರ್ಪಡಿಸಲಾಗಿದೆ. ಊಟ, ಉಪಹಾರ ಒದಗಿಸುತ್ತಿದ್ದು, ಹಿರಿಯ ನಾಗರಿಕರಿಗೆ ಅಗತ್ಯವಾಗಿರುವ ಬಟ್ಟೆ, ಕಲಾಕೃತಿ ಮತ್ತು ಇತರ ಆಸಕ್ತಿದಾಯಕ ವಸ್ತುಗಳನ್ನು ಮಾರಾಟ ಮಾಡಲು ಮಳಿಗೆಗಳನ್ನು ತೆರೆಯಲಾಗುತ್ತಿದೆ. ಮೊದಲ ವಿಶ್ವಕಪ್ ಗೆದ್ದ ಮಾಜಿ ವಿಕೇಟ್ ಕೀಪರ್ ಸಯ್ಯದ್ ಕಿರ್ಮಾನಿ, ಪ್ರಣಯ ರಾಜ ಶ್ರೀನಾಥ್, ವಯಾ ವಿಕಾಸ್ ಮಂಡಳಿಯ ಸದಸ್ಯ ಡಾ. ಅಲೆಕ್ಸಾಂಡರ್ ಥಾಮಸ್ ಮತ್ತಿತರು ಪಾಲ್ಗೊಳ್ಳಲಿರುವ ಹಿರಿಯ ಹಬ್ಬದಲ್ಲಿ ಹಿರಿಯ ನಟ, ಬಾಣಸಿಗ ಸಿಹಿ ಕಹಿ ಚಂದ್ರು ಕೈಯಾರೆ ಅಡುಗೆ ಸಿದ್ಧಪಡಿಸಿ ಉಣಬಡಿಸಿ ರಂಜಿಸಲಿದ್ದಾರೆ. ಖ್ಯಾಲ್ ಸಂಸ್ಥೆ, ಕಡಂಬಮ್ಸ್, ಆಕ್ಸಿಸ್ ಬ್ಯಾಂಕ್, ಸೋಲಿಸ್ ಹೆಲ್ತ್, ಭಾರ್ತಿ ಎಎಕ್ಸ್ಎ ಲೈಫ್ ಸಂಸ್ಥೆಗಳು ಇದಕ್ಕೆ ಪ್ರಾಯೋಜಕತ್ವ ವಹಿಸಿಕೊಂಡಿವೆ ಎಂದರು.

# ದಲಿತ ಪರ ಸಂಘಟನೆಗಳಿಂದ ಡಿಸಿಎಂ, ಗೃಹ ಸಚಿವರಿಗೆ ಮನವಿ
## ಬಿಬಿಎಂಪಿಗೆ ಕೊಟ್ಯಂತರ ರೂ. ವಂಚನೆ: ಸಹಾಯಕ ಪ್ರಾಧ್ಯಾಪಕ ಚಿರಾಗ್ ಎಸ್. ಬಂಧನಕ್ಕೆ ಆಗ್ರಹ




ಪೌರಕಾರ್ಮಿಕರ ಅವಲಂಬಿತರ ಒಕ್ಕೂಟವತಿಯಿಂದ ನ್ಯಾಯಕ್ಕಾಗಿ ಹೋರಾಟವತಿಯಿಂದ ಸಹಾಯಕ ಪ್ರಾಧ್ಯಾಪಕರು ಜ್ಯೋತಿ ನಿವಾಸ ಕಾಲೇಜು ಕೋರಮಂಗಲ ಬೆಂಗಳೂರು ರವರು ಪೌರಕಾರ್ಮಿಕರ ಅವಲಂಬಿ ತರಿಗೆ ಸಿಕ್ಕಬೇಕಾದ ಸೌಲಭ್ಯವನ್ನು ಬಿ.ಬಿ.ಎಂ.ಪಿಗೆ ನಕಲಿ/ಪೋರ್ಜರಿ ದಾಖಲೆ ನೀಡಿ ಸುಮಾರು1.00 ಕೋಟಿಗೂ ಮೇಲ್ಪಟ್ಟು ವಂಚಿಸಿರುವ ಮೇರೆಗೆ ಎಸ್. ಚಿರಾಗ್ ಸಹಾಯಕ ಪ್ರಾಧ್ಯಾಪಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಬಂಧಿಸಲು ಆಗ್ರಹಿಸಿ ದಲಿತ ಪರ ಸಂಘಟನೆಗಳು ಸಭೆ.

ಪೌರ ಕಾರ್ಮಿಕರ ಅವಲಂಬಿತರ ಒಕ್ಕೂಟದ ಅಧ್ಯಕ್ಷರಾದ ಮೋಹನ್ ಕೆ. ರಾಜ್ಯಾಧ್ಯಕ್ಷರಾದ ಎಂ.ಸಿ.ಶ್ರೀನಿವಾಸ್, ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ದಾಸ್, ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಜನಜಾಗೃತಿ ಸಮಿತಿಯ ರಾಜ್ಯಾಧ್ಯಕ್ಷರಾದ ಸೂರ್ಯಚಂದ್ರ ಮಂಜಣ್ಣ, ಜೈಭೀಮ್ ನೀಲಿ ಸೇನೆಯ ಜಿಲ್ಲಾಧ್ಯಕ್ಷ ತ್ಯಾಗರಾಜು, ಸುವರ್ಣ ಕರ್ನಾಟಕ ರಾಜ್ಯದಲಿತ ಕ್ರಿಯ ಸಮಿತಿ.(ರಿ) ಅಧ್ಯಕ್ಷರಾದ ಜಿ.ವೇಲು, ದಲಿತ ಸಫಾಯಿ ಕರ್ಮಚಾರಿ ಸಂಘ ರಾಜ್ಯಾಧ್ಯಕ್ಷರಾದ ಚಂದ್ರು, ದಲಿತ ಪರ ಹೋರಾಟಗಾರ ವಿಜಯ್ ಕುಮಾರ್, ದಲಿತ ಸಂರಕ್ಷಣೆ ವೇದಿಕೆ ಅಧ್ಯಕ್ಷರಾದ ರಾಬರ್ಟ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು, ಭಾಗವಹಿಸಿದ್ದರು ಚಿರಾಗ್.ಎಸ್ ಸಹಾಯಕ ಪ್ರಾಧ್ಯಾಪಕರು ಜ್ಯೋತಿ ನಿವಾಸ ಕಾಲೇಜು ಕೋರಮಂಗಲ ಬೆಂಗಳೂರು ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾನೂನು ಬಾಹಿರವಾಗಿಗುತ್ತಿಗೆ ಪಡೆದುಕೊಂಡು ಯಾವುದೇ ಕೆಲಸ ನಿರ್ವಹಿಸದೆ M/s AVS Enterprises ಸಂಸ್ಥೆಯ ಮುಖಾಂತರ ಕೋಟ್ಯಾಂತರ ರೂ ವಂಚಿಸಿರುವುದರಿಂದ ಪೌರಕಾರ್ಮಿಕರು ಅವಲಂಬಿತರು ಮತ್ತು ನಿರುದ್ಯೋಗಿಗಳು ಕಾಮಗಾರಿ ಸೌಲಭ್ಯವನ್ನು ಪಡೆಯಲು ವಂಚಿತರಾಗಿರುತ್ತಾರೆ.

ಎಸ್.ಚಿರಾಗ್ ರವರು ಪಾಲಿಕೆಗೆ ಈ ಕೆಳಕಂಡಂತೆ ನಕಲಿ ದಾಖಲೆ ನೀಡಿ ಪಾಲಿಕೆಗೆ ಕೋಟ್ಯಾಂತರ ರೂ ವಂಚಿಸಿರುತ್ತಾರೆ. ಬೊಮ್ಮನಹಳ್ಳಿ ವಲಯದಲ್ಲಿ ಚಿರಾಗ್.ಎಸ್ ರವರು ದಿನಾಂಕ: 01-04-2020 ರಿಂದ 31-03-2021 ನೇ ಅವಧಿಯಲ್ಲಿ ಸುಮಾರು ರೂ.24,64,000/- ಕ್ಕೂ ಮೇಲ್ಪಟ್ಟು ಬಿಲ್ ಪಡೆದುಕೊಂಡು ವಂಚಿಸಿರುತ್ತಾರೆ.

ಆರ್.ಆರ್ ನಗರ ವಲಯದಲ್ಲಿ ಚಿರಾಗ್.ಎಸ್ ರವರು 2022ನೇ ಸಾಲಿನಲ್ಲಿ ಕೋವಿಡ್ ಡಾಕ್ಟರ್ ನಿಯೋಜಿಸಿರುವುದಾಗಿ ರೂ.33,12,366/- ಕ್ಕೂ ಮೇಲ್ಪಟ್ಟು ಬಿಲ್ಲುಗಳನ್ನು ಪಡೆದುಕೊಂಡು ವಂಚಿಸಿ ರುತ್ತಾರೆ. ಯಲಹಂಕ ವಲಯದಲ್ಲಿ ಚಿರಾಗ್.ಎಸ್ ರವರು 2021 ನೇ ಸಾಲಿನಲ್ಲಿ ಕಂಟ್ರೋಲ್ ರೂಮ್ ನಿರ್ವಹಿಸಿರುವುದಾಗಿ ನಕಲಿ ದಾಖಲೆಗಳನ್ನು ನೀಡಿ ಕೆಲಸ ನಿರ್ವಹಿಸುವ ಬಗ್ಗೆ ಜ್ಞಾನ ತಿಳುವಳಿಕೆ ಇಲ್ಲದೆ ರೂ.11,09,728/- ಗಳ ಬಿಲ್ಲನ್ನು ಪಡೆದು ಪಾಲಿಕೆ ವಂಚಿಸಿರುತ್ತಾರೆ.

**ಬಿ.ಬಿ.ಎಂ.ಪಿ ಗೆ ನಕಲಿ/ಪೋರ್ಜರಿ ದಾಖಲೆ**

ಪೂರ್ವ ವಲಯದಲ್ಲಿ ಕೋವಿಡ್ ನಿಂತ್ರಣದ ನಿರ್ವಹಣೆ ಸಂದರ್ಭದಲ್ಲಿ ಸ್ವಾಬ್ ಕಲೆಕ್ಟರ್, ಗಣಕಯಂತ್ರ ನಿರ್ವಾಹಕರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೆಲಸ ನಿರ್ವಹಿಸಿರುವುದಾಗಿ ಬಿಂಬಿಸಿ ಸದರಿ ಮೊತ್ತವನ್ನು ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಅವರ ಕುಟುಂಬ ಸದಸ್ಯರ ಖಾತೆಗೆ ವರ್ಗಾಹಿಸಿ ಸುಮಾರು ರೂ.35,04,500/- ಕ್ಕೂ ಮೇಲ್ಪಟ್ಟು ಹಣವನ್ನು ಪಾಲಿಕೆ ವಂಚಿಸಿರುತ್ತಾರೆ. ಚಿರಾಗ್.ಎಸ್ ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಬಂಧಿಸಿ ಪಾಲಿಕೆಗೆ ವಂಚನೆ ಮಾಡಿರುವ ಕೋಟ್ಯಾಂತರ ರೂಗಳನ್ನು ಮುಟ್ಟುಗೋಲು ಹಾಕಲು ಉಪಮುಖ್ಯಮಂತ್ರಿಗಳು, ನಗರ ಉಸ್ತುವಾರಿಗಳಾದ ಡಿ.ಕೆ. ಶಿವಕುಮಾರ್ ರವರಿಗೆ ಗೃಹ ಸಚಿವರಾದ ಜಿ.ಪರಮೇಶ್ವರ್ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ರವರಿಗೆ ಮನವಿ ಸಲ್ಲಿಸಲಾಗುವುದು. 15 ದಿನದಲ್ಲಿ ಕ್ರಮ ಕೈಗೊಳ್ಳದೇ ಹೋದರೆ ದಲಿತ ಸಂಘಟನೆ ಒಕ್ಕೂಟದಿಂದ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಸಭೆಯಲ್ಲಿ ಭೀಮಪುತ್ರಿ ಬ್ರಿಗೇಡ್ ಸಂಸ್ಥಾಪಕಿ ರೇವತಿರವರು ,ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಲಿತ ಸಂಘರ್ಷ ಸೇನೆ (ರಿ). ಮಾದಿಗ ನಿರುದ್ಯೋಗಿಗಳ ಹೋರಾಟ ಸಮಿತಿಯ ಅಧ್ಯಕ್ಷರಾದ ಹರೀಶ್, ದ್ರಾವಿಡ ಸ್ವಾಭಿಮಾನ ಸೇನೆ (ರಿ) ರಾಜ್ಯಾಧ್ಯಕ್ಷರಾದ ಜೈಭೀಮ್ ಪರ್ತಿಬಾನ್, ಹಾಗೂ ಅಖಿಲ ಕರ್ನಾಟಕ ಡಾ। ಬಿ.ಆರ್. ಅಂಬೇಡ್ಕರ್ ಸಮೂಹ ವೇದಿಕೆ ಡಾ ಭೀಮಾರಾವ್ ಅಂಬೇಡ್ಕರ್ ದಲಿತ ಸೇವಾ ಸಮಿತಿ (ರಿ.) , ಭ್ರಷ್ಟಾಚಾರ ನಿರ್ಮೂಲನೆ ವೇದಿಕೆ ಅಧ್ಯಕ್ಷರಾದ ಜೊಸೆಫ್, ಕಾರ್ಮಿಕ ಹಕ್ಕುಗಳ ಸಂರಕ್ಷಣಾ ಸಮಿತಿ (ರಿ)ಅಧ್ಯಕ್ಷರಾದ ಎನ್.ಓಬಳೇಶ್, ಅನಿಕೇತನ ಕನ್ನಡ ಬಳಗ ಅಧ್ಯಕ್ಷರಾದ ಹೇಮರಾಜುರವರು ದಲಿತಪರ ಹೋರಾಟಗಾರರು, ಚಿಂತಕರು ಉಪಸ್ಥಿತರಿದ್ದರು..

# ತಂತಿ ಮೇಲಿನ ನಡಿಗೆಯಂತಿದೆ ಕೊಳೆಗೇರಿ ಬದುಕು

## ವಿದ್ಯುತ್ ಕಂಬಗಳು, ಮಳೆ ಬಂದಾಗ ಕಿಡಿ ಸೇರಿದಂತೆ ಕೊಳೆಗೇರಿಗಳೆಂದು ಗುರುತಿಸಿಕೊಂಡಿರುವ ಹಲವು ಬಡಾವಣೆ

• ಉದಯವಾಹಿನಿ ದಾವಣಗೆರೆ

ದೂರದಲ್ಲೆಲ್ಲೋ ಇರುವ ವಿದ್ಯುತ್ ಕಂಬದಿಂದ ಮನೆಗಳ ಮೇಲೆ ಅಪಾಯಕಾರಿ ರೀತಿಯಲ್ಲಿ ಎಳೆದಿರುವ ವಿದ್ಯುತ್ ತಂತಿಗಳು, ಕಿರಿದಾದ ರಸ್ತೆ ನಡುವೆ ವಾಹನಗಳ ಸವಾರರಿಗೆ ಸವಾಲೊಡ್ಡುವ ರೀತಿಯಲ್ಲಿ ಅಡ್ಡವಾಗಿರುವ ವಿದ್ಯುತ್ ಕಂಬಗಳು, ಮಳೆ ಬಂದಾಗ 'ಕಿಡಿ' ಕಾರುತ್ತಾ ಸದ್ದು ಮಾಡುವ ವಿದ್ಯುತ್ ಪರಿವರ್ತಕಗಳು (ಟಿಸಿ)...

ಪಾಲಿಕೆ ವ್ಯಾಪ್ತಿಯ ಬಾಷಾ ನಗರ, ಚೌಡೇಶ್ವರಿ ನಗರ, ಮಂಡಕ್ಕಿ ಬಟ್ಟಿ ಲೇಔಟ್, ಪಾರ್ವತಮ್ಮ ಕಾಲೊನಿ, ಸಿದ್ದ ರಾಮೇಶ್ವರ ಕಾಲೊನಿ ಸೇರಿದಂತೆ 'ಕೊಳೆಗೇರಿ'ಗಳೆಂದು ಗುರುತಿಸಿಕೊಂಡಿರುವ ಹಲವು ಬಡಾವಣೆಗಳಲ್ಲಿನ ಚಿತ್ರಣ ವಿದು. ಚಿಕ್ಕಚಿಕ್ಕ ಶೆಡ್‌ಗಳಂತಿರುವ ಮನೆಗಳೇ ಹೆಚ್ಚಾಗಿರುವ ಈ ಪ್ರದೇಶಗಳಲ್ಲಿ ಸಮರ್ಪಕವಾದ ವಿದ್ಯುತ್ ವ್ಯವಸ್ಥೆಯಿಲ್ಲ. ಮನೆ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸದ ಕಾರಣಕ್ಕೆ ಹಾಗೂ ವಿದ್ಯುತ್ ಪರಿವರ್ತಕಗಳು ದೂರ ಇರುವ ಕಾರಣಕ್ಕೆ ಇಲ್ಲಿನ ನಿವಾಸಿಗಳು ತಾವೇ ಅಪಾಯಕಾರಿಯಾದಂಥ ಲೈನ್ (ವಿದ್ಯುತ್ ತಂತಿ) ಎಳೆದುಕೊಂಡಿದ್ದಾರೆ. ಆ ಮೂಲಕ ತಮ್ಮ ಗೂಡುಗಳಿಗೆ ತಾತ್ಕಾಲಿಕವಾಗಿ 'ಬೆಳಕು' ಪಡೆದಿದ್ದಾರೆ.

ಕೊಳೆಗೇರಿಗಳ ಪೈಕಿ ಹಲವೆಡೆ ಕೈ ಎತ್ತಿದರೆ ಸ್ಪರ್ಶಿಸುವ ಅಂತರದಲ್ಲೇ ವಿದ್ಯುತ್ ತಂತಿಗಳು ಹಾದು ಹೋಗಿವೆ. ಜನವಸತಿ ಪ್ರದೇಶಗಳಲ್ಲಿ ಮನೆಗಳಿಗೆ ಹೊಂದಿಕೊಂಡಂತೆಯೇ ಟಿ.ಸಿ. ಅಳವಡಿಸಲಾಗಿದೆ. ಇದರಿಂದ ಸ್ಥಳೀಯರು ಆತಂಕದಲ್ಲೇ ಕಾಲ ಕಳೆಯುವ ಸ್ಥಿತಿ ಉಂಟಾಗಿದೆ.


ಉದಯವಾಹಿನಿ ಚಿತ್ರ

> ಮಳೆ ಬಂದಾಗ ಮನೆಯ ಗೋಡೆ, ಪಾತ್ರೆಗಳಲ್ಲಿ ಕರೆಂಟ್ ಹರಿದಂತಾಗುತ್ತದೆ. ಗೋಡೆ ಮುಟ್ಟಿದರೂ ಮೈ ಜೂಂ ಅನ್ನುತ್ತದೆ. ಒಮ್ಮೆ ವೈರ್ ಕೆಳಗೆ ಬಿದ್ದು, ಆತಂಕ ಸೃಷ್ಟಿಸಿತ್ತು. ಈ ಅಪಾಯಕಾರಿ ಟಿ.ಸಿ, ವಿದ್ಯುತ್ ತಂತಿಗಳಿಂದ ಮಕ್ಕಳನ್ನು ಕಾಪಾಡಿಕೊಳ್ಳುವುದೇ ಸವಾಲಾಗಿದೆ' ಎಂದು ಶಾಹೀದಾ ಬಾನು ನೋವು ತೋಡಿಕೊಂಡರು.

ಮಳೆ ಬಂದಾಗೆಲ್ಲ ನಮ್ಮಲ್ಲಿ ಕರೆಂಟ್ ತೆಗೀತಾರೆ. ಟಿ.ಸಿ, ಕರೆಂಟ್ ಕಂಬದಲ್ಲಿನ ವೈರ್‌ಗಳು ಕರ್ ಕರ್ ಸೌಂಡ್ ಮಾಡುತ್ತವೆ. ಹೀಗೇ ಕರ್ ಕರ್ ಎನ್ನುತ್ತಿರುವಾಗಲೇ ವಿದ್ಯುತ್ ಲೈನ್‌ನಲ್ಲಿ ಹೆಚ್ಚು ಕಡಿಮೆಯಾಗಿ ಆನ್ ಇದ್ದ ಕೊಳವೆಬಾವಿ ಮೋಟಾರ್ ಕೆಟ್ಟು ಹೋಯ್ತು. ಈಗ ಕುಡಿಯೋಕೆ, ಬಳಸೋಕೆ ನೀರಿಲ್ಲ. ಪಾಲಿಕೆಯಿಂದ ಬರುವ ನೀರು ಭಾಳ ಗಲೀಜಾಗಿರುತ್ತೆ. ಹುಳ ಇರ್ತವೆ. ಬೋರ್ ಸರಿ ಮಾಡಿಸಿಕೊಟ್ರೆ ಸಾಕು ಹೇಗೋ ಕರೆಂಟ್ ಇದ್ದಾಗ ಚಲೊ ನೀರ್ ಆದ್ರೂ ಸಿಗುತ್ತದೆ' ಎನ್ನುತ್ತಾರೆ ಬಾಷಾ ನಗರದ ನಿವಾಸಿಗಳಾದ ಬಾಲಪ್ಪ, ದುಗ್ಗೇಶ್.

> ಜೆಜೆಎಂ ನಳಗಳ ಕಳವು ಮಂಡಕ್ಕಿ 2 ವರ್ಷದ ಹಿಂದೆ ಇದೇ ಟಿ.ಸಿ.ಗೆ ಬೆಂಕಿ ಬಿದ್ದಿತ್ತು. ಜೀವ ಭಯದಿಂದ ಹೆದರಿ ಮನೆಗಳಿಂದ ಹೊರಗೆ ಓಡಿ ಹೋಗಿದ್ದೆವು. ಕೊನೆಗೆ ಅಗ್ನಿಶಾಮಕದವರು ಬಂದು ಬೆಂಕಿ ನಂದಿಸಿದ್ದರು. ದೇವರ ದಯೆಯಿಂದ ಯಾವುದೇ ಅನಾಹುತ ಆಗಿರಲಿಲ್ಲ. ಅದಾದ ಬಳಿಕವೂ ಬೆಸ್ಕಾಂನವರು ಎಚ್ಚೆತ್ತುಕೊಂಡು ಟಿ.ಸಿ.ಯನ್ನು ಬೇರೆಡೆ ಸ್ಥಳಾಂತರಿಸದಿಲ್ಲ. ನಮ್ಮ ಜೀವಕ್ಕೆ ಬೆಲೆ ಇಲ್ಲವೇ' ಎಂದು ಸ್ಥಳೀಯರಾದ ಶಂಷುದ್ದೀನ್, ಸಲಾಂ ಸಾಬ್ ಪ್ರಶ್ನಿಸಿದರು.

> ಬಟ್ಟಿ ಲೇಔಟ್ ಪಾರ್ವತಮ್ಮ ಕಾಲೊನಿ ಸಿದ್ದರಾಮೇಶ್ವರ ಕಾಲೊನಿ ಸೇರಿದಂತೆ ವಿವಿಧ ಕೊಳೆಗೇರಿ ಪ್ರದೇಶಗಳಲ್ಲಿ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಯಡಿ ಅಳವಡಿಸಿರುವ ನಳ ಮೀಟರ್‌ಗಳನ್ನು ಕಳವು ಮಾಡಲಾಗಿದೆ. 'ನಾವೆಲ್ಲ ಕೂಲಿ ಮಾಡಿ ಬದುಕು ನಡೆಸುವವರು. ಕೂಲಿಗೆ ಹೋದಾಗ ರಾತ್ರಿ ವೇಳೆ ಖದೀಮರು ನಲ್ಲಿಯ ಪೈಪ್ , ಮೀಟರ್ ಗಳನ್ನು ಕದ್ದೊಯ್ದಿದ್ದಾರೆ. ಪಾಲಿಕೆ ಪೂರೈಸುವ ನೀರನ್ನೇ ಅವಲಂಬಿಸಿದ್ದೇವೆ' ಎಂದು ಸ್ಥಳೀಯರು ಹೇಳಿದರು.

ಇನ್ನು ಪಾರ್ವತಮ್ಮ ಕಾಲೊನಿಯಲ್ಲಿ ನಡುರಸ್ತೆಗಳಲ್ಲೇ ವಿದ್ಯುತ್ ಕಂಬಗಳನ್ನು ಹಾಕಿದ್ದು, ಇದರಿಂದ ಸ್ಥಳೀಯರಿಗೆ ಸಾಕಷ್ಟು ಅನನುಕೂಲ ಉಂಟಾಗುತ್ತಿದೆ. ಇಲ್ಲಿ ವಾಹನಗಳ ಸಂಚಾರವೂ ಅಪಾಯಕಾರಿಯಾಗಿದೆ. ದಾವಣಗೆರೆಯ ಮಂಡಕ್ಕಿ ಬಟ್ಟಿ ಲೇಔಟ್‌ನಲ್ಲಿ ಮನೆ ಯೊಂದರ ಬಳಿಯೇ ವಿದ್ಯುತ್ ಪರಿವರ್ತಕ ಇರುವುದು ತಿಪ್ಪೇಸ್ವಾಮಿ ಎ.ಕೆ. ಎಇಇ ಬೆಸ್ಕಾಂಕೊಳೆಗೇರಿಗಳಲ್ಲಿ ಅಪಾಯ ತಂದೊಡ್ಡುವ ವಿದ್ಯುತ್ ತಂತಿ ಟಿ.ಸಿ.ಗಳಿರುವ ಬಗ್ಗೆ ದೂರು ಬಂದಿಲ್ಲ. ಆದರೂ ಈ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿ ಸರಿಪಡಿಸಲು ಅಗತ್ಯ ಕ್ರಮ ವಹಿಸಲಾಗುವುದು

# ನೀರು ಶುದ್ಧೀಕರಣ ಘಟಕ ಸ್ಥಗಿತ

• ಉದಯವಾಹಿನಿ ಹೊಳೆಹೊನ್ನೂರು

ಪಟ್ಟಣದಲ್ಲಿ ಅಳವಡಿಸಿರುವ ನೀರು ಶುದ್ಧೀಕರಣ ಘಟಕ ವರ್ಷದ ಹಿಂದೆಯೇ ಸ್ಥಗಿತಗೊಂಡಿದ್ದು, ಸ್ಥಳೀಯರಿಗೆ ಶುದ್ಧ ನೀರು ದೊರೆಯದಂತಾಗಿದೆ. ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಪಟ್ಟಣ ಪಂಚಾಯಿತಿ, ತುಂಗಾ ನದಿಯ ನೀರನ್ನು ಶುದ್ಧೀಕರಿಸಿ ಪೂರೈಸುತ್ತಿದೆ.

ಆದರೆ, ಆ ನೀರು ಕುಡಿಯಲು ಯೋಗ್ಯವಲ್ಲ ಎಂದು ಆರೋಗ್ಯ ಇಲಾಖೆ ಹೇಳಿದೆ. ಅಂತೆಯೇ ಸಾರ್ವಜನಿಕರು ಅನ್ಯ ಮಾರ್ಗವಿಲ್ಲದೆ ಈ ನೀರನ್ನೇ ಬಳಸುತ್ತಿದ್ದಾರೆ. ಶುದ್ಧೀಕರಣ ಘಟಕದ ನಿರ್ವಹಣೆ ಜವಾಬ್ದಾರಿ ನೀಡಲಾಗಿದ್ದರೂ, ಅಧಿಕಾರಿಗಳು ನಮಗೂ ಅದಕ್ಕೂ ಯಾವುದೇ ಸಂಬಂಧವಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ.

ಪಟ್ಟಣ ಪಂಚಾಯಿತಿ ಘೋಷಣೆಯಾಗಿ 3 ವರ್ಷ ಕಳೆದರೂ ಚುನಾವಣೆ ನಡೆಯದೇ ಜನಪ್ರತಿನಿಧಿಗಳಿಲ್ಲ. ಅಧಿಕಾರಿಗಳು ಇದ್ದರೂ ಇಲ್ಲದಂತೆ ಆಗಿದೆ. ಹೇಳುವವರು ಕೇಳುವವರು ಇಲ್ಲದಂತಾಗಿದೆ ಎಂದು ಪಟ್ಟಣದ ಜನರು ದೂರುತ್ತಿದ್ದಾರೆ. ಸುತ್ತಮುತ್ತಲಿನ ಗ್ರಾಮಗಳ ಜನರು ಪಟ್ಟಣಕ್ಕೆ ಬಂದರೂ ನೀರು ಕುಡಿಯಲು ಇಷ್ಟಪಡುವುದಿಲ್ಲ. ನೀರು ಶುದ್ಧೀಕರಣ ಘಟಕ ಸ್ಥಗಿತಗೊಂಡಿದ್ದರಿಂದ ಕೆಲವು ಅಂಗಡಿ ಹಾಗೂ ಹೋಟೆಲ್‌ಗಳಲ್ಲಿ ತುಂಗಾ ನದಿ ನೀರನ್ನೇ ನೀಡಲಾಗುತ್ತದೆ. ಆದರೆ, ಗ್ರಾಹಕರು ಆ ನೀರು ಕುಡಿಯುವುದಕ್ಕೆ ಹಿಂದೇಟು ಹಾಕುತ್ತಾರೆ ಎಂದು ಸ್ಥಳೀಯರಾದ ಎಂ. ಶ್ರೀನಿವಾಸ್ ಹೇಳುತ್ತಾರೆ.


ಉದಯವಾಹಿನಿ ಚಿತ್ರ


# ಶೋಭಾಯಾತ್ರೆಯಲ್ಲಿ ಲಾಭ ಮಾಡಿಕೊಂಡ ಕಳ್ಳರು!

• ಉದಯವಾಹಿನಿ ಚಿತ್ರದುರ್ಗ

ನಗರದಲ್ಲಿ ಸೆ.28ರಂದು ನಡೆದ ಮಹಾಗಣಪತಿ ಶೋಭಾಯಾತ್ರೆ ವೇಳೆ ಅಸಂಖ್ಯಾತ ಮೊಬೈಲ್ ಫೋನ್‌ಗಳು ಕಳ್ಳತನವಾಗಿರುವ ವಿಷಯ ಬೆಳಕಿಗೆ ಬಂದಿದೆ. ಚಿನ್ನದ ಚೈನ್, ಪರ್ಸ್‌ಗಳೂ ಕಳ್ಳತನವಾಗಿದ್ದು, ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿವೆ. ಬೆಳಿಗ್ಗೆ 11 ಗಂಟೆಯಿಂದ ರಾತ್ರಿ 12 ಗಂಟೆಯವರೆಗೂ ನಡೆದ ಶೋಭಾಯಾತ್ರೆಯಲ್ಲಿ ಲಕ್ಷಾಂತರ ಜನರು ಭಾಗಿಯಾಗಿದ್ದರು.

ರಾಜ್ಯದ ವಿವಿಧೆಡೆಯಿಂದ ಅಪಾರ ಜನಸ್ತೋಮ ಮೆರವಣಿಗೆಯಲ್ಲಿ ಪಾಲ್ಗೊಂಡಿತ್ತು. ಜನಸಾಗರದ ನಡುವೆ ಕಳ್ಳರು ಕೈಚಳಕ ತೋರಿಸಿದ್ದು ಮೊಬೈಲ್ ಫೋನ್ ಎಗರಿಸಿದ್ದಾರೆ.

ಹಲವರು ಚೈನ್, ಪರ್ಸ್ ಗಳನ್ನೂ ಕಳೆದುಕೊಂಡಿದ್ದಾರೆ. ಶೋಭಾಯಾತ್ರೆ ವೇಳೆ ಡಿ.ಜೆ. ಶಬ್ದಕ್ಕೆ ನೃತ್ಯ ಮಾಡುತ್ತಿದ್ದ ವೇಳೆ ಮೊಬೈಲ್ ಫೋನ್‌ಗಳನ್ನು ಎಗರಿಸಲಾಗಿದೆ.


ಉದಯವಾಹಿನಿ ಚಿತ್ರ

**ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲೆ**

ಪೊಲೀಸರ ಕಟ್ಟೆಚ್ಚರದ ನಡುವೆಯೂ ಕಳ್ಳತನ ಮಾಡಿದ್ದಾರೆ. ಜೇಬುಗಳ್ಳರ ಹಾವಳಿ ಬಗ್ಗೆ ಮೊದಲೇ ಪೊಲೀಸರಿಗೆ ಮಾಹಿತಿ ಇತ್ತು. ಈ ಕುರಿತು ನಿಗಾ ವಹಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿಬ್ಬಂದಿಗೆ ಸೂಚಿಸಿದ್ದರು. ಆದರೂ ಜೇಬುಗಳ್ಳತನ ತಡೆಯಲು ಸಾಧ್ಯವಾಗಿಲ್ಲ ಎಂಬುದು ಜನರ ದೂರು. ಶೋಭಾಯಾತ್ರೆ ದಿನ ನೂರಾರು ಜನರು ಪೊಲೀಸ್ ಠಾಣೆಗಳ ಮುಂದೆ ಹಾಜರಾಗಿ ಮೊಬೈಲ್ ಕಳ್ಳತನದ ದೂರು ನೀಡಲು ಮುಂದಾಗಿದ್ದರು. ಆದರೆ ಪೊಲೀಸರು ಬೆರಳೆಣಿಕೆಯಷ್ಟು ದೂರು ಮಾತ್ರ ಸ್ವೀಕರಿಸಿ ಹಲವರನ್ನು ವಾಪಸ್ ಕಳುಹಿಸಿದರು. ಕೆಲವರಿಗೆ ಆನ್‌ಲೈನ್‌ನಲ್ಲಿ ದೂರು ನೀಡುವಂತೆ ವಾಪಸ್ ಕಳುಹಿಸಿದರು.

> ಸೆ. 29ರಂದು ದೂರು ನೀಡಲು ಠಾಣೆಗೆ ತೆರಳಿದಾಗ ಆನ್‌ಲೈನ್‌ನಲ್ಲಿ ದೂರು ದಾಖಲಿಸುವಂತೆ ಪೊಲೀಸರು ವಾಪಸ್ ಕಳುಹಿಸಿದರು. ಆನ್‌ಲೈನ್‌ನಲ್ಲಿ ಮೊಬೈಲ್ ನಂಬರ್ ಸ್ಥಗಿತಗೊಳಿಸಲು (ಬ್ಲಾಕ್) ಮಾತ್ರ ಸಾಧ್ಯವಾಯಿತು. ದೂರು ನೀಡಲು ಸಾಧ್ಯವಾಗಲಿಲ್ಲ. ನನ್ನ ರೂ. 25,000 ದರದ ಮೊಬೈಲ್ ಕಳೆದುಕೊಂಡು ನಷ್ಟವಾಗಿದೆ' ಎಂದು ಕೆಳಗೋಟೆಯ ಯುವಕ ರುದ್ರೇಶ್ ಬೇಸರ ವ್ಯಕ್ತಪಡಿಸಿದರು.


# ನಗರಸಭೆ ಅಧ್ಯಕ್ಷರಾಗಿ ಲಲಿತಾ ಅನಪುರ, ಉಪಾಧ್ಯಕ್ಷರಾಗಿ ರುಕೀಯಾ ಬೇಗಂ

• ಉದಯವಾಹಿನಿ ಯಾದಗಿರಿ

ನಗರಸಭೆ ಅಧ್ಯಕ್ಷರಾಗಿ ಬಿಜೆಪಿಯಿಂದ ಲಲಿತಾ ಅನಪುರ, ಉಪಾಧ್ಯಕ್ಷರಾಗಿ ರುಕೀಯಾ ಬೇಗಂ ಆಯ್ಕೆಯಾದರು. ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆ, ಉಪಾಧ್ಯಕ್ಷ ಸ್ಥಾನ ಹಿಂದುಳಿದ ಮಹಿಳೆಗೆ ಮೀಸಲಾಗಿತ್ತು.

ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಮತ್ತು ಬಿಜೆಪಿ ಆಕಾಂಕ್ಷಿಗಳಿಂದ ನಾಮಪತ್ರ ಸಲ್ಲಿಕೆಯಾಗಿತ್ತು.ಆದರೆ, ಬಿಜೆಪಿ ಬಹುಮತ ಸಾಬೀತು ಪಡಿಸಿ ಗದ್ದುಗೆ ಏರಿದೆ.

ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಲಲಿತಾ ಅನಪುರ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ರುಕೀಯಾ ಬೇಗಂ ತಲಾ 19 ಸ್ಥಾನಗಳನ್ನು ಪಡೆದಿದ್ದಾರೆ ಎಂದು ಚುನಾವಣಾಧಿಕಾರಿಯೂ ಆದ ಉಪವಿಭಾಗಾಧಿಕಾರಿ ಹಂಪಣ್ಣ ಸಜ್ಜನ್ ತಿಳಿಸಿದರು. ಕಾಂಗ್ರೆಸ್‌ನಿಂದ ಅಧ್ಯಕ್ಷ ಸ್ಥಾನಕ್ಕೆ ವಾರ್ಡ್ ಸಂಖ್ಯೆ 28ರ ಸದಸ್ಯೆ ಜಯಮ್ಮ ಸುರೇಶ್ ಮಡ್ಡಿ, ಉಪಾಧ್ಯಕ್ಷ ಸ್ಥಾನಕ್ಕೆ ವಾರ್ಡ್ ಸಂಖ್ಯೆ 1 ರ ಸದಸ್ಯೆ ಗೌಸಿಯಾ ಬೇಗಂ ಉಮೇದುವಾರಿಕೆ ಸಲ್ಲಿಸಿದ್ದರು. ಈ ವೇಳೆ ಮಾತನಾಡಿದ ನೂತನ ನಗರಸಭೆ ಅಧ್ಯಕ್ಷೆ ಲಲಿತಾ ಅನಪುರ, ನಗರದ ಸ್ವಚ್ಛತೆ ಮತ್ತು ಅಭಿವೃದ್ಧಿ ಕಡೆಗೆ ಒತ್ತು ನೀಡುತ್ತೇನೆ. ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಗರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇವೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

# ಚೈತ್ರಾ ಕುಂದಾಪುರರನ್ನು ಹೊರಗಿಡಿ; ಭೋಜರಾಜ್ ಆಗ್ರಹ

• ಉದಯವಾಹಿನಿ ಸಾಗರ

ಖಾಸಗಿ ವಾಹಿನಿಯ ಬಿಗ್ ಬಾಸ್ ಸೀಸನ್ 11 ಕಾರ್ಯಕ್ರಮದಿಂದ ಚೈತ್ರಾ ಕುಂದಾಪುರ ಅವರನ್ನು ಹೊರಗಿಡಿ ಎಂದು ನ್ಯಾಯವಾದಿ ಕೆ.ಎಲ್.ಭೋಜರಾಜ್ ಒತ್ತಾಯಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚೈತ್ರಾ ಅವರನ್ನು ಕಾರ್ಯಕ್ರಮದಿಂದ ತೆಗೆದುಹಾಕದೆ ಹೋದಲ್ಲಿ ವಾಹಿನಿ ವಿರುದ್ಧ ಕಾನೂನು ಸಮರ ಹೂಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಚೈತ್ರಾ ಅವರನ್ನು ಮೇರುನಟ ಸುದೀಪ್ ಹಿಂದೂ ಫೈರ್ ಬ್ರಾಂಡ್ ಎಂದು ಹೊಗಳಿರುವುದು ದುರದೃಷ್ಟಕರ. ಅವರ ಮೇಲೆ 11 ಪ್ರಕರಣ ವಿವಿಧ ಠಾಣೆಯಲ್ಲಿ ದಾಖಲಾಗಿದೆ.

ಗೋವಿಂದ ಬಾಬು ಪೂಜಾರಿ ಎಂಬುವವರಿಗೆ ಕಳೆದ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಕೊಡಿಸುತ್ತೇನೆ ಎಂದು ಐದು ಕೋಟಿ ರೂ. ಪಡೆದಿದ್ದಾರೆ. ಇದೀಗ 3.50 ಕೋಟಿ ರೂ. ವಾಪಾಸ್ ಕೊಡಿಸಲಾಗಿದ್ದು, ಎಫ್‌ಐಆರ್ ಕೂಡ ದಾಖಲಾಗಿದ್ದು 800 ಪುಟಗಳ ಚಾರ್ಜ್‌ಶೀಟ್ ಮಾಡಲಾಗಿದೆ.



ಉದಯವಾಹಿನಿ ಚಿತ್ರ

ಕುಂದಾಪುರ ತಾಲ್ಲೂಕಿನ ಜನರು ಚೈತ್ರಾ ಹೆಸರಿನ ಪಕ್ಕದಲ್ಲಿರುವ ಕುಂದಾಪುರ ಹೆಸರು ಬಳಸದಂತೆ ಪ್ರತಿಭಟನೆ ಸಹ ನಡೆಸಿದ್ದಾರೆ ಎಂದು ಹೇಳಿದ್ದಾರೆ.

ಅನೇಕ ಆರೋಪಗಳನ್ನು ತಮ್ಮ ಮೇಲೆ ಇರಿಸಿಕೊಂಡಿರುವ ಚೈತ್ರಾ ಕುಂದಾಪುರ ಅವರನ್ನು ಖಾಸಗಿ ವಾಹಿನಿ ತನ್ನ ಟಿಆರ್‌ಪಿಗಾಗಿ ಬಿಗ್‌ಬಾಸ್ ಸೀಸನ್ -11ರಲ್ಲಿ ಮೂರನೇ ಸ್ಪರ್ಧಿಯಾಗಿ ಸೇರಿಸಿಕೊಂಡಿರುವುದು, ಅವರನ್ನು ಚಿತ್ರನಟ ಸುದೀಪ್ ಹೊಗಳಿ ಅಟ್ಟಕ್ಕೇರಿಸುತ್ತಿರುವುದು ವ್ಯವಸ್ಥೆಯ ದುರಂತವಾಗಿದೆ. ಇಂತಹ ಘಟನೆಗಳಿಂದಾಗಿ ಸಮಾಜಕ್ಕೆ ಕೆಟ್ಟ ಸಂದೇಶ ರವಾನೆಯಾಗುತ್ತದೆ.

# ಮುಡಾ ನಿವೇಶನ ವಾಪಸ್ ಕೊಟ್ಟರೆ ತಪ್ಪೇನು: ಸಂತೋಷ್ ಲಾಡ್

• ಉದಯವಾಹಿನಿ ಧಾರವಾಡ

'ಮುಡಾ ಹಂಚಿಕೆ ಮಾಡಿದ್ದ ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ವಾಪಸ್ ನೀಡಿದ್ದರಲ್ಲಿ ತಪ್ಪೇನಿದೆ? ಸಿದ್ದರಾಮಯ್ಯ ಅವರ ಗೌರವ ಮತ್ತು ಪ್ರತಿಷ್ಠೆ ತುಂಬಾ ಮುಖ್ಯ.

ಅದಕ್ಕೆ ನಿವೇಶನಗಳನ್ನು ವಾಪಸ್ ನೀಡಿದ್ದಾರೆ' ಎಂದು ಸಚಿವ ಸಂತೋಷ್ ಲಾಡ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿಜೆಪಿಯವರೇ ನಿವೇಶನಗಳನ್ನು ಹಂಚಿಕೆ ಮಾಡಿದ್ದರು. ನಿವೇಶನಗಳನ್ನು ವಾಪಸ್ ನೀಡಿದ್ದಕ್ಕೆ 'ಯು ಟರ್ನ್' ಎಂದರೆ ಏನರ್ಥ? ನಿವೇಶನಗಳನ್ನು ವಾಪಸ್ ನೀಡಬಾರದು ಎಂಬ ಕಾನೂನು ಇದೆಯೇ' ಎಂದು ಪ್ರಶ್ನಿಸಿದರು.



ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ರೂ. 8.5 ಸಾವಿರ ಕೋಟಿ ಹಗರಣ ನಡೆದಿದೆ. ಚುನಾವಣಾ ಬಾಂಡ್‌ನಲ್ಲಿ ಬಿಜೆಪಿಗೆ ಶೇ 60 ದೇಣಿಗೆ ಸಿಕ್ಕಿದೆ. ಇದು ಬಿಜೆಪಿಯವರು ಮಾಡಿದ ವಂಚನೆ. ಈ ವಿಷಯದಲ್ಲಿ ಇ.ಡಿ ಏಕೆ ಪ್ರವೇಶಿಸಿಲ್ಲ? ಕೇಂದ್ರದಲ್ಲಿ 29 ಸಚಿವರ ವಿರುದ್ಧ ಕೊಲೆ, ಅತ್ಯಾಚಾರ, ಕ್ರಿಮಿನಲ್ ಪ್ರಕರಣಗಳಿವೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧವೂ ಪ್ರಕರಣ ಇದೆ. ಈ ಸಚಿವರು ರಾಜೀನಾಮೆ ಕೊಡಬೇಕು' ಎಂದರು.

> ಸಿದ್ದರಾಮಯ್ಯ ಅವರ ಪತ್ನಿ ಸಾರ್ವಜನಿಕ ಜೀವನದಲ್ಲಿ ಕಾಣಿಸಿಕೊಂಡಿಲ್ಲ. ಅವರ ವಿರುದ್ಧ ಲೋಕಾಯುಕ್ತ ಮತ್ತು ಇ.ಡಿ (ಜಾರಿ ನಿರ್ದೇಶನಾಲಯ) ತನಿಖೆ ನಡೆದಿದೆ. ಇ.ಡಿ ಬಳಸಿಕೊಂಡು ಮುಖ್ಯಮಂತ್ರಿ ರಾಜೀನಾಮೆಗೆ ಬಿಜೆಪಿಯವರು ಒತ್ತಾಯಿಸುವುದು ರಾಜಕೀಯ ಕುತಂತ್ರ' ಎಂದರು.

# ಜಾಗತಿಕ ಶಾಂತಿಗೆ ಬಡಿದಿದೆ ಬರ

## ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಅಭಿಪ್ರಾಯ

• ಉದಯವಾಹಿನಿ ಮಂಗಳೂರು

ಜಾಗತಿಕ ಶಾಂತಿಗೆ ಬರ ಬಂದೊದಗಿದೆ. ಜಾಗತಿಕ ನಾಯಕರು ಶಾಂತಿ ಕಾಪಾಡುವಲ್ಲಿ ವಿಫಲರಾಗಿದ್ದು, ಎಲ್ಲೆಡೆ ಯುದ್ಧೋನ್ಮಾದ ತಾಂಡವವಾಡುತ್ತಿದೆ. ಮಹಾತ್ಮ ಗಾಂಧಿ ಪ್ರತಿಪಾದಿಸಿದ ಅಹಿಂಸಾ ಮಾರ್ಗವೊಂದೇ ಜಗತ್ತನ್ನು ವಿನಾಶದಿಂದ ಕಾಪಾಡಬಲ್ಲುದು ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಅಭಿಪ್ರಾಯಪಟ್ಟರು.

ಇಂಡಿಯನ್ ಕಥೊಲಿಕ್ ಪ್ರೆಸ್ ಅಸೋಸಿಯೇಶನ್ (ಐಸಿಪಿಎ) ಹಾಗೂ ರಾಕ್ಣೊ' ಪತ್ರಿಕೆ ಆಶ್ರಯಲ್ಲಿ ಇಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಕ್ರೈಸ್ತ ಪತ್ರಕರ್ತರ 29ನೇ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಬಡವರು ಹಸಿವಿನಿಂದ ಸಾಯುತ್ತಿದ್ದಾರೆ. ಶಿಕ್ಷಣ, ಆರೋಗ್ಯ ಮೂಲಸೌಕರ್ಯಗಳ ಬಗ್ಗೆ ಸರ್ಕಾರಗಳಿಗೆ ಕಾಳಜಿ ಇಲ್ಲ. ಜನರ ಕಲ್ಯಾಣಕ್ಕೆ ಹಣವಿಲ್ಲ. ಆದರೆ, ಕೋವಿ, ರಾಕೆಟ್, ಹೈಡ್ರೋಜನ್ ಬಾಂಬ್, ಅಣು ಬಾಂಬ್ ಮೊದಲಾದ ಶಸ್ತ್ರಾಸ್ತ್ರ ಖರೀದಿಗೆ ಸರ್ಕಾರಗಳು ಕೋಟಿ ಗಟ್ಟಲೆ ಹಣ ಸುರಿಯುತ್ತಿವೆ. ಶಸ್ತ್ರಗಳ ಉತ್ಪಾದನೆ ಹಾಗೂ ಮಾರಾಟ ಜಗತ್ತಿನಲ್ಲೇ ಅತಿ ಹೆಚ್ಚು ವಹಿವಾಟು ನಡೆಸುವ ಕೈಗಾರಿಕೆಯಾಗಿ ಬೆಳೆದಿದೆ' ಎಂದು ಹೇಳಿದರು.

ಶಾಂತಿ ನೆಲೆಸದೆ ಅಭಿವೃದ್ಧಿ ಅಸಾಧ್ಯ. ದೈಹಿಕ, ಮಾನಸಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಕಾನೂನಾತ್ಮಕ ಹಿಂಸೆಗಳು ಕೋಮುವಾದ, ಉಗ್ರವಾದ, ಮೂಲಭೂತವಾದ, ಸಂಘಟಿತ ಅಪರಾಧ, ಶೋಷಣೆಗಳನ್ನು ಹುಟ್ಟು ಹಾಕುತ್ತಿವೆ. ಇವೆಲ್ಲವೂ ಪರ್ಯಾವಸಾನವಾಗುವುದು ಯುದ್ಧದಲ್ಲಿ. ರಷ್ಯಾ-ಉಕ್ರೇನ್, ಮಧ್ಯಪ್ರಾಚ್ಯ ರಾಷ್ಟ್ರಗಳ ಯುದ್ಧಗಳಲ್ಲಿ ನಾವಿದನ್ನು ಕಾಣುತ್ತಿದ್ದೇವೆ. ಜಾಗತಿಕ ಶಾಂತಿ ಸ್ಥಾಪನೆಗಾಗಿ ವಿಶ್ವಸಂಸ್ಥೆ ಸ್ಥಾಪನೆಯಾದ ಬಳಿಕ 300ಕ್ಕೂ ಹೆಚ್ಚು ಯುದ್ಧಗಳು ನಡೆದಿವೆ. ಯುದ್ಧದಿಂದಾಗಿ 1 ಲಕ್ಷಕ್ಕೂ ಹೆಚ್ಚು ಮಂದಿ ಪ್ರತಿವರ್ಷ ಜೀವ ಕಳೆದುಕೊಳ್ಳುತ್ತಿದ್ದಾರೆ. ಮೂರನೆ ಜಾಗತಿಕ ಯುದ್ಧ ಸಂಭವಿಸಿದರೆ ಮನುಕುಲದ ವಿನಾಶ ಕಟ್ಟಿಟ್ಟ ಬುತ್ತಿ. ಗಾಂಧಿ ಮಾರ್ಗವೊಂದೇ ಇಂದಿನ ಜಾಗತಿಕ ತಲ್ಲಣಗಳಿಗೆ ಪರಿಹಾರ ಒದಗಿಸಬಲ್ಲುದು' ಎಂದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, 'ಸತ್ಯಕ್ಕೆ ಬೇರೆ ಬೇರೆ ಆಯಾಮಗಳಿವೆ. ಜಾಗದಿಂದ ಜಾಗಕ್ಕೆ, ಸಮಯದಿಂದ ಸಮಯಕ್ಕೆ, ಸಮುದಾಯದಿಂದ ಸಮುದಾಯಕ್ಕೆ ಸತ್ಯವು ಬದಲಾಗುತ್ತದೆ. ದೇಶದಲ್ಲಿ 11,441 ಸಮುದಾಯಗಳಿದ್ದು, ಅವುಗಳ ಸತ್ಯದ ಪರಿಕಲ್ಪನೆಯೂ ವಿಭಿನ್ನ. ದ್ರೌಪದಿ ನಮಗಿಲ್ಲಿ ಪೌರಾಣಿಕ ಪಾತ್ರ ಮಾತ್ರ. ಆದರೆ ತಮಿಳು ನಾಡಿನಲ್ಲಿ ಆಕೆ ದೇವತೆ. ಛತ್ತೀಸಗಡದವರಿಗೆ ಶ್ರೀಕೃಷ್ಣ ದೇವರಲ್ಲ, ಅವರಿಗೆ ಭೀಮನ ಮೇಲೆಯೇ ನಂಬಿಕೆ ಹೆಚ್ಚು. ಧಾರ್ಮಿಕ ಚೌಕಟ್ಟಿನಲ್ಲಿ ಇಡಿ ದೇಶಕ್ಕೆ ಅನ್ವಯಿಸಬಹುದಾದ ಸತ್ಯವನ್ನು ಗಾಂಧೀಜಿ ಅನ್ವೇಷಿಸಿದರು' ಎಂದರು. ಏಷ್ಯಾದಲ್ಲೇ ಯಾರೂ ಮಣಿಸಲು ಸಾಧ್ಯವಿಲ್ಲದ ಸೇನೆಯನ್ನು ಹೊಂದಿದ್ದ ಬ್ರಿಟೀಷರನ್ನು ಸಶಸ್ತ್ರ ಹೋರಾಟದಿಂದ ಗೆಲ್ಲಲು ಸಾಧ್ಯವಿರಲಿಲ್ಲ. ಆದರೆ, ಗಾಂಧೀಜಿ ಕೈಯಲ್ಲಿ ಒಂದು ಮುಷ್ಟಿ ಉಪ್ಪು ಹಿಡಿದು ಅವರಿಗೆ ಸೆಡ್ಡು ಹೊಡೆದರು. ಗಾಂಧೀಜಿಯ ಅಹಿಂಸಾತ್ಮಕ ಪ್ರತಿಭಟನೆಗೆ ಬ್ರಿಟಿಷರ ಬಳಿ ಉತ್ತರವೇ ಇರಲಿಲ್ಲ. ಅಹಿಂಸಾತ್ಮಕ ಹೋರಾಟ ನಡೆಯದಿರುತ್ತಿದ್ದರೆ ದೇಶವು ಇಂದಿಗೂ ಸ್ವತಂತ್ರವಾಗುತ್ತಿರಲಿಲ್ಲ' ಎಂದು ಅಭಿಪರಾಯಪಟ್ಟರು. ಲೇಖಕಿ ಡಾ.ಎಚ್.ಎಸ್ ಅನುಪಮಾ, ಗಾಂಧೀಜಿ ಅಹಿಂಸಾತ್ಮಕ ಹೋರಾಟಕ್ಕೆ ಬಳಸಿದ ತಂತ್ರಗಳೆಲ್ಲವೂ ಮಹಿಳೆ ತನ್ನ ದೈನಂದಿನ ಬದುಕಿನಲ್ಲಿ ಬಳಸುತ್ತಿದ್ದವುಗಳೇ. ನಾನು ಅರ್ಧ ಹೆಣ್ಣು ಎಂದು ಗಾಂಧೀಜಿಯೇ ಹೇಳಿಕೊಂಡಿದ್ದಾರೆ. ಅವರ ಈ ತಂತ್ರಗಳು ಇಷ್ಟವಾಗಿದ್ದರಿಂದ ಮಹಿಳೆಯರೂ ಸ್ವಾತಂತ್ರ್ಯ ಹೋರಾಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಧುಮುಕಿದ್ದರು' ಎಂದರು.




ಉದಯವಾಹಿನಿ ಚಿತ್ರ

**ರಾಷ್ಟ್ರೀಯ ಕ್ರೈಸ್ತ ಪತ್ರಕರ್ತರ 29ನೇ ಪ್ರಶಸ್ತಿ ಪ್ರದಾನ**

> ಸಾಮಾಜಿಕ ಕಾರ್ಯಕರ್ತ ಸೆಡ್ರಿಕ್ ಪ್ರಕಾಶ್, ಲಡಾಕ್‌ಗೆ ರಾಜ್ಯದ ಸ್ಥಾನಮಾನಕ್ಕೆ ಒತ್ತಾಯಿಸಿ ನವದೆಹಲಿಗೆ ಪಾದಯಾತ್ರೆ ನಡೆಸಿದ ಸೋನಮ್ ವಾಂಗ್‌ಚುಕ್ ಅವರನ್ನು ಬಂಧಿಸಲಾಗಿದೆ. ತಮ್ಮ ಹಕ್ಕಿಗಾಗಿ ಅವರು ಉಪಾವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ಜೈಲಿನಲ್ಲಿದ್ದ ರಾಮ್ ರಹೀಮ್‌ನನ್ನು ಚುನಾವಣಾ ಪ್ರಚಾರದ ಸಲುವಾಗಿ ಪರೋಲ್ ಮೇಲೆ ಬಿಡುಗಡೆ ಮಾಡಲಾಗಿದೆ. ಮಣಿಪುರದ ಹಿಂಸೆಯೂ ಸೇರಿದಂತೆ ಯಾವ ಅನ್ಯಾಯದ ವಿರುದ್ಧವೂ ಧ್ವನಿ ಎತ್ತಲಾಗದ ನಾವು ಬೂಟಾಟಿಕೆಯಿಂದ ಗಾಂಧಿಜಿ ಬಗ್ಗೆ ಚರ್ಚಿಸುತ್ತಿದ್ದೇವೆ' ಎಂದರು.

> ಗಾಂಧೀಜಿ ನಮಗೆ ರಾಷ್ಟ್ರಪಿತ. ಆದರೆ ಅಷ್ಟೇ ಅಪರಿಚಿತ. ಅವರ ಮಹತ್ವವನ್ನು ತಿಳಿಯದೆಯೇ ಅವರ ಮೂರ್ತಿ ಸ್ಥಾಪಿಸುತ್ತಿದ್ದೇವೆ. ಕೆಲವರು ಕುರುಡಾಗಿ ತಿರುಚಿದ ವಿಡಿಯೋಗಳನ್ನು ಸೃಷ್ಟಿಸಿ ಗಾಂಧೀಜಿಯನ್ನು ಅವಹೇಳನವನ್ನೂ ಮಾಡುತ್ತಿದ್ದಾರೆ. ಗಾಂಧೀಜಿಯ ಎಲ್ಲಾ ವಿಚಾರಗಳನ್ನು ಒಪ್ಪಿಕೊಳ್ಳಲೇ ಬೇಕೆಂದಿಲ್ಲ. ಆದರೆ ಅವರು ಪ್ರತಿಪಾದಿಸಿದ ಸದ್ವಿಚಾರಗಳನ್ನು ಅಪ್ಪಿಕೊಳ್ಳಬೇಕಿದೆ' ಎಂದರು.

# ಅಕ್ಷರ ದಾಸೋಹ ಕಾರ್ಮಿಕರ ಸಮಸ್ಯೆಗಳ ಇತ್ಯರ್ಥಕ್ಕೆ ಒತ್ತಾಯಿಸಿ ಮನವಿ



ಉದಯವಾಹಿನಿ ಚಿತ್ರ

• ಉದಯವಾಹಿನಿ ಸಿರುಗುಪ್ಪ

ನಗರದ ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘ ತಾಲ್ಲೂಕು ಸಮಿತಿಯಿಂದ ಬಿಸಿಯೂಟ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ತಾಲ್ಲೂಕು ಪಂಚಾಯಿತಿ ವ್ಯವಸ್ಥಾಪಕಿ ಸುಜಾತ ಅವರ ಮೂಲಕ ಇ.ಓ ಅವರಿಗೆ ಮನವಿ ಸಲ್ಲಿಸಲಾಯಿತು.

ಬಿಸಿಯೂಟ ಕಾರ್ಮಿಕರ ಸಂಘದ ಜಿಲ್ಲಾ ಸಲಹೆಗಾರರಾದ ನಾಗರತ್ನ. ಎಸ್.ಜಿ ಮಾತನಾಡಿ ಕೇಂದ್ರ ರಾಜ್ಯ ಸರ್ಕಾರದ ಪ್ರತಿಷ್ಠಿತ ಮದ್ಯಾಹ್ನ ಬಿಸಿಯೂಟ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಸಿಯೂಟ ತಯಾರಿಸುವವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕಳೆದ ಏಪ್ರಿಲ್ ಮತ್ತು ಮೇ ತಿಂಗಳುಗಳ ಬಾಕಿಯಿರುವ ಗೌರವಧನವನ್ನು ಕೂಡಲೇ ಪಾವತಿಸಬೇಕು. ಮೊಟ್ಟೆ ಸುಲಿದ ಕೂಲಿ ಹಣವನ್ನು ಬಿಸಿಯೂಟ ಕಾರ್ಮಿಕರಿಗೆ ಖಾತ್ರಿ ಮಾಡಬೇಕು. ಬಿಸಿಯೂಟ ತಯಾರಿ, ಬಡಿಸುವುದು ಹೊರತುಪಡಿಸಿ ಹೆಚ್ಚುವರಿ ಕೆಲಸಗಳ ಒತ್ತಡವನ್ನು ಹೇರದಂತೆ ಸಭೆ ಕರೆದು ಶಾಲೆಗಳ ಮುಖ್ಯಸ್ಥರಿಗೆ ಮಾಗದರ್ಶನ ಮಾಡಬೇಕು. ಇಸ್ಕಾನ್ ಅಕ್ಷಯ ಪಾತ್ರೆಯಂತಹ ಕೇಂದ್ರೀಕೃತ ಅಡುಗೆ ವ್ಯವಸ್ಥೆಗೆ ಬಿಸಿಯೂಟದ ವ್ಯವಸ್ಥೆಯನ್ನು ನೀಡದೇ ಆಯಾ ಶಾಲೆಗಳಲ್ಲೇ ತಯಾರಿಕೆಗೆ ಅನುವು ಮಾಡಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವೆಯನ್ನು ಸುಭದ್ರಗೊಳಿಸಬೇಕು. ಮಕ್ಕಳ ಸಂಖ್ಯೆಯ ಕೊರತೆಯ ನೆಪದಿಂದ ಕಾರ್ಯಕರ್ತೆಯರನ್ನು ಮನೆಗೆ ಕಳುಹಿಸದೇ ಬೇರೆ ಶಾಲೆಗೆ ಕೆಲಸಕ್ಕೆ ನಿಯೋಜಿಸಬೇಕು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವೇತನವನ್ನು ನೌಕರರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು. ಅಡುಗೆ ತಯಾರಿಸುವ ಕಾರ್ಮಿಕರಿಗೆ ಸುರಕ್ಷತಾ ಸಾಮಗ್ರಿಗಳನ್ನು ನೀಡಬೇಕೆಂದು ಒತ್ತಾಯಿಸಿದರು. ಇದೇ ವೇಳೆ ತಾಲ್ಲೂಕು ಸಮಿತಿಯ ಅಧ್ಯಕ್ಷ ಸುರೇಶ.ಜಿ, ಉಪಾಧ್ಯಕ್ಷೆಯರಾದ ಲಕ್ಷ್ಮಿ, ರುದ್ರಮ್ಮ, ಕಾರ್ಯದರ್ಶಿ ಗೀತಾ ಸಿರಿಗೇರಿ, ಸದಸ್ಯರಾದ ವಿಜಯಲಕ್ಷ್ಮಿ, ಶೇಖಮ್ಮ, ಶಿವಮ್ಮ, ಸುಮಂಗಲಮ್ಮ, ಶೇಖುನ್‌ಬಿ, ಇನ್ನಿತರರಿದ್ದರು.

# ಮಿನಿ ನ್ಯೂಸ್

## ನವಜೀವನ ಸಮಿತಿ ಸದಸ್ಯರ ಸಮಾವೇಶ


• ಉದಯವಾಹಿನಿ ಬೆಳ್ತಂಗಡಿ

ಮದ್ಯವರ್ಜನ ಶಿಬಿರದಿಂದಾಗಿ ಅನೇಕರ ಬದುಕಿನ ಕತ್ತಲೆ ದೂರವಾಗಿದೆ. ಗಾಂಧೀಜಿಯವರ ತತ್ವಾದರ್ಶದಂತೆ ನಡೆದುಕೊಳ್ಳುತ್ತಿರುವ ಡಿ. ವೀರೇಂದ್ರ ಹೆಗ್ಗಡೆ ಅವರು ಮದ್ಯಮುಕ್ತ ಸಮಾಜದ ಕಲ್ಪನೆಗೆ ಒತ್ತು ಕೊಟ್ಟಿದ್ದಾರೆ' ಎಂದು ಆರಿಕೋಡಿ ಚಾಮುಂಡೇಶ್ವರಿ ಕ್ಷೇತ್ರ ಧರ್ಮದರ್ಶಿ ಹರೀಶ್ ಹೇಳಿದರು. ಬೆಳ್ತಂಗಡಿ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲಾಭವನದಲ್ಲಿ ನಡೆದ ಗಾಂಧಿಸ್ಮೃತಿ ಮತ್ತು ನವಜೀವನ ಸಮಿತಿ ಸದಸ್ಯರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಕೆ.ಎಂ. ಅಬೂಬಕರ್ ಸಿದ್ದಿಕ್ ಮೋಂಟುಗೋಳಿ ಮಾತನಾಡಿದರು. ಬೆಳ್ತಂಗಡಿ ಹೋಲಿ ರಿಡೀಮರ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಫಾ ಕ್ಲಿಫರ್ಡ್ ಪಿಂಟೊ ಸಂದೇಶ ನೀಡಿದರು. ಜನಜಾಗೃತಿ ವೇದಿಕೆ ಟ್ರಸ್ಟ್ ಬೆಳ್ತಂಗಡಿ ತಾಲ್ಲೂಕು ಘಟಲದ ಅಧ್ಯಕ್ಷ ಕಾಸಿಂ ಮಲ್ಲಿಗೆಮನೆ ಅಧ್ಯಕ್ಷತೆ ವಹಿಸಿದ್ದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ದ.ಕ. ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್ ಸ್ವಾಗತಿಸಿದರು.

## ಸಂಭ್ರಮದ ದೇವಿ ಮೆರವಣಿಗೆ

• ಉದಯವಾಹಿನಿ ಇಂಡಿ

ಪಟ್ಟಣದ ಶ್ರೀ ಅಂಬಾಭವಾನಿ ನವ ತರುಣ ಮಂಡಳಿ ಚವಡಿ ಓಣ , ಶ್ರೀ ದುರ್ಗಾ ಪರಮೇಶ್ವರಿ ಮಿತ್ರ ಮಂಡಳಿ ಭೀರಪ್ಪ ನಗರ, ಶ್ರೀ ಭುವನೇಶ್ವರಿ ಯುವಕ ಮಂಡಳಿ ಕುಂಬಾರ ಓಣ ಮತ್ತು ಶ್ರೀ ಅಂಬಾಭವಾನಿ ನವ ತರುಣ ಮಂಡಳಿ ಹೂಗಾರ ಇವರಿಂದ ಸಂಭ್ರಮದ ದೇವಿಯ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಕುಂಬಾರ ಓಣ ಯ ದೇವಿಯ ಮೆರವಣಿಗೆಗೆ ಇಂಡಿಯ ಶಾಸಕ ಯಶವಂತರಾಯಗೌಡ ಪಾಟೀಲರು ಚಾಲನೆ ನೀಡಿದರು. ಡೊಳ್ಳು ಕುಣತ, ಕೋಲಾಟ, ಲೇಜಿಮ್, ಭಜನೆ,ಗೊಂದಳಿ ಭಜನೆ, ಮೆರವಣಿಗೆಯ ಆಕರ್ಷಣೆಯಾಗಿತ್ತು.


ಉದಯವಾಹಿನಿ ಚಿತ್ರ

ಎಲ್ಲೆಡೆ ಅಂಬಾಭವಾನಿ ಉಧೋ ಉಧೋ ಇಂಡಿಯ ತಾಯಿಗೆ ಉಧೋ ಉಧೋ ಜಯಘೋಷ ಮೊಳಗಿದವು. ಭಕ್ತರು ಕೇಸರಿ ಟೋಪಿ ಧರಿಸಿ ಕೊರಳಲ್ಲಿ ಕೇಸರಿ ಶಲ್ಯ ಹಾಕಿಕೊಂಡಿದ್ದರು. ಮೆರವಣಿಗೆ ಉದ್ದಕ್ಕೂ ಭಕ್ತರು ತಮ್ಮ ಮನೆಯ ಮುಂದೆ ದೇವಿಯ ಮೆರವಣಿಗೆ ಬಂದಾಗ ನೀರು ಹಾಕಿ ಪೂಜೆ ಸಲ್ಲಿಸುವದು ಸಾಮಾನ್ಯವಾಗಿತ್ತು. ಮೆರವಣಿಗೆಯಲ್ಲಿ ಯುವಪಡೆ ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಆಕರ್ಷಣೆಯಾಗಿತ್ತು.

## ದೈಹಿಕ ಶಿಕ್ಷಕರ ಕೊರತೆ ನೇಮಕಕ್ಕೆ ಮಸ್ತಾನಪಟೇಲ ಆಗ್ರಹ

• ಉದಯವಾಹಿನಿ,ಚಿಂಚೋಳಿ



ತಾಲ್ಲೂಕಿನಾದ್ಯಂತ ಶಾಲಾ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರು ಇಲ್ಲದೆ ಶಾಲಾ ಮಕ್ಕಳಿಗೆ ಕ್ರೀಡಾ ಕೂಟ, ಮನರಂಜನೆ ಕಾರ್ಯಕ್ರಮ ನಡೆಯದೆ ಮಕ್ಕಳಿಗೆ ತುಂಬಾ ತೊಂದರೆ ಆಗುತ್ತಿದೆ ಎಂದು ಶಿಕ್ಷಣ ಪ್ರೇಮಿ ಮಸ್ತಾನ ಪಟೇಲ ದೇಗಲ ಮಡಿ ಕಳವಳ ವ್ಯಕ್ತಪಡಿಸಿದರು. ತಾಲ್ಲೂಕಿನಲ್ಲಿ ಒಟ್ಟಾರೆ ಸರ್ಕಾರಿ, ಎಡಿಡ್ 90 ಹೈಸ್ಕೂಲ್ ಪ್ರಾಥಮಿಕ ಶಾಲೆಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ 48 ದೈಹಿಕ ಶಿಕ್ಷಕರು ಬೇಕು 06 ಜನ ಇದ್ದಾರೆ, ಹೈಸ್ಕೂಲ್‌ನಲ್ಲಿ 23 ದೈಹಿಕ ಶಿಕ್ಷಕರಿದ್ದು 09 ಜನರ ಕೊರತೆ ಯಿದೆ, ಕಾಲೇಜುಗಳಲ್ಲಿ ಒಟ್ಟಾರೆ ದೈಹಿಕ ಶಿಕ್ಷಕರಿಲ್ಲಾ, ಹೀಗಾದರೆ ಶಾಲಾ ಮಕ್ಕಳು ಕ್ರೀಡಾಕೂಟಗಳಲ್ಲಿ ಬೆಳೆಯಲು ಹೇಗೆ ಸಾಧ್ಯವಾಗುತ್ತದೆ. ಶಾಲಾಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣದ ಜೋತೆ ಕ್ರೀಡೆಯು ಅವಶ್ಯಕವಾಗಿದೆ, ಶಾಲಾ ಮಕ್ಕಳಿಗೆ ವಿಧ್ಯಾಭ್ಯಾಸ ಜೋತೆ ಕ್ರೀಡಾಕೂಟ ಆಟ ಆಡಿಸುತ್ತಿದ್ದರೆ ಮಕ್ಕಳು ರಾಜ್ಯಮಟ್ಟದಲ್ಲಿ ದೇಶದ ಮಟ್ಟದಲ್ಲಿ ಕ್ರೀಡೆಯಲ್ಲಿ ಬೆಳೆಯುತ್ತಾರೆ ಜೋತೆಗೆ ಶಿಕ್ಷಣ ಕೂಡ ಉತ್ತಮವಾಗಿ ಕಲಿಯುತ್ತಾರೆ ಸರ್ಕಾರ ಆದಷ್ಟೂ ಶೀಘ್ರದಲ್ಲೇ ದೈಹಿಕ ಶಿಕ್ಷಕರಿಗೆ ನೇಮಕ ಮಾಡಬೇಕು ಶಾಲಾಮಕ್ಕಳಿಗೆ ಕಾಲೇಜುಗಳಿಗೆ ಸಹ ದೈಹಿಕ ಶಿಕ್ಷಕರಿಗೆ ನೇಮಕ ಮಾಡಬೇಕು ಎಂದು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ನದಿಗೆ ಬಟ್ಟೆ ಒಗೆಯಲು ಹೋದ ಮಹಿಳೆ ನೀರು ಪಾಲು

• ಉದಯವಾಹಿನಿ,ಚಿಂಚೋಳಿ



ತಾಲ್ಲೂಕಿನ ಕರ್ಚಖೇಡ ಗ್ರಾಮದ ಮಹಿಳೆಯೊಬ್ಬಳು ಬಟ್ಟೆ ಒಗೆಯಲು ಹೋದ ಮಹಿಳೆ ಮುಲ್ಲಾಮಾರಿ ನದಿಗೆ ನೀರು ಬಂದಿರುವುದರಿಂದ ಬುಧವಾರ ಮಧ್ಯಾಹ್ನ ಸುಮಾರಿಗೆ ಮಹಿಳೆ ನೀರಿನಲ್ಲಿ ಕೊಚಿಕೊಂಡು ಹೋಗಿದ್ದಾಳೆ ಎಂದು ಕರ್ಚಖೇಡ ಗ್ರಾ.ಪಂ.ಅಧ್ಯಕ್ಷ ಬಾಬುಮಿಯ್ಯ ತಿಳಿಸಿದ್ದಾರೆ. ಕರ್ಚಖೇಡ ಗ್ರಾಮದ ಬುಜ್ಜಮ್ಮ ಝುರಣಪ್ಪ (40) ಎಂಬ ಮಹಿಳೆ ತಿಳಿದುಬಂದಿದೆ. ಕರ್ಚಖೇಡ ಗ್ರಾಮದಲ್ಲಿ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋದ ಮಹಿಳೆಗೆ ಸುಲೇಪೇಟ ಠಾಣೆಯ ಪೋಲಿಸರು,ಆಗ್ನಿಶಾಮಕದವರು,ಎನ್.ಡಿ.ಆರ್.ಎಫ್ ತಂಡದವರು ತೀವ್ರ ಶೋಧ ಕಾರ್ಯಚರಣೆ ನಡೆಸುತ್ತಿದ್ದು ಗುರುವಾರ ಸಾಯಂಕಾಲದವರೆಗೂ ಸಿಕ್ಕಿರಲಿಲ್ಲಾ ಎಂದು ಬಾಬುಮಿಯ್ಯ ತಿಳಿಸಿದ್ದಾರೆ. ಸ್ಥಳಕ್ಕೆ ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ,ಸುಲೇಪೇಟ ಪಿಎಸ್‌ಐ ಅಮರ,ಕೇಶವ ಕುಲಕರ್ಣಿ ಸೇರಿದಂತೆ ಅಗ್ನಿಶಾಮಕದ ಅಧಿಕಾರಿಗಳು ಸಿಬ್ಬಂದಿಗಳು ಹಾಜರಿದ್ದಾರೆ.


## ಕಾಂಗ್ರೆಸ್ ಅಭ್ಯರ್ಥಿ ರಾಜು ಪೂಜಾರಿ ನಾಮಪತ್ರ ಸಲ್ಲಿಕೆ

• ಉದಯವಾಹಿನಿ ಮಂಗಳೂರು

ವಿಧಾನ ಪರಿಷತ್‌ನ ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆ ಕ್ಷೇತ್ರಕ್ಕೆ ಅ.21ರಂದು ನಡೆಯಲಿರುವ ಉಪ ಚುನಾವಣೆಗಯ ಕಾಂಗ್ರೆಸ್‌ಅಭ್ಯರ್ಥಿಯಾಗಿ ರಾಜು ಪೂಜಾರಿ ನಾಮಪತ್ರ ಸಲ್ಲಿಸಿದರು. ವೇಳೆ ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ ಭಂಡಾರಿ, ಐವನ್ ಡಿಸೋಜ, ಕಾಂಗ್ರೆಸ್ ಮುಖಂಡರಾದ ರಮಾನಾಥ ರೈ, ಜಯಪ್ರಕಾಶ್ ಹೆಗ್ಡೆ ಜೊತೆಗಿದ್ದರು. ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ರಾಜು ಪೂಜಾರಿ, 'ಗ್ರಾಮ ಪಂಚಾಯಿತಿ, ತಾಲ್ಲೂಕು ಪಂ. ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಸ್ಥಳೀಯ ಸಂಸ್ಥೆಗಳ ಸಮಸ್ಯೆ ಅರಿವಿದೆ. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಿಗೆ ನನ್ನ ಕಾರ್ಯವೈಖರಿ ಬಗ್ಗೆ, ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ನನಗಿರುವ ಜ್ಞಾನದ ಬಗ್ಗೆ ಗೊತ್ತಿದೆ. ಹೀಗಾಗಿ, ಮತದಾರರು ನನ್ನನ್ನು ಬೆಂಬಲಿಸುವ ವಿಶ್ವಾಸ ಇದೆ' ಎಂದರು. 30 ವರ್ಷಗಳಿಂದ ಕಾಂಗ್ರೆಸ್‌ಪಕ್ಷದಲ್ಲಿ ವಿವಿಧ ಜವಾಬ್ದಾರಿ ನಿರ್ವಹಿಸಿದ್ದೇನೆ. ಪಕ್ಷ ನಿಷ್ಠೆಯನ್ನು ಗುರುತಿಸಿ ಕಾಂಗ್ರೆಸ್, ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ನೀಡಿದೆ' ಎಂದು ಹೇಳಿದರು.

# ನ್ಯಾಯಾಲಯದ ಆವರಣದಲ್ಲಿ ಚಿರತೆ

**ಪೌರಿ ಗರ್ವಾಲ್:** ಉತ್ತರಾಖಂಡದ ಪೌರಿ ಗರ್ವಾಲ್ ಜಿಲ್ಲಾ ನ್ಯಾಯಾಲಯದ ಆವರಣದ ಬಳಿ ಮರಿಯೊಂದಿಗೆ ದೊಡ್ಡ ಚಿರತೆಯೊಂದು ಕಾಣಿಸಿಕೊಂಡಿರುವುದು ಸಂಚಲನ ಮೂಡಿಸಿದೆ. ಆವರಣದಲ್ಲಿ ಚಿರತೆ ಓಡಾಡುತ್ತಿರುವುದನ್ನು ಸ್ಥಳೀಯ ವ್ಯಕ್ತಿಯೊಬ್ಬರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಸದ್ಯ ಸೋಷಿಯಲ್ ಮೀಡಿಯಾಗಳಲ್ಲಿ ವೈರಲ್ ಆಗುತ್ತಿದೆ.



ಕೋರ್ಟ್ ಆವರಣ, ಸರ್ಕ್ಯೂಟ್ ಹೌಸ್ ಹಾಗೂ ಇತರ ವಸತಿ ಬಡಾವಣೆಗಳ ಬಳಿ ನಿರಂತರವಾಗಿ ಚಿರತೆ ಕಾಣಿಸಿಕೊಳ್ಳುತ್ತಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ಅರಣ್ಯ ಇಲಾಖೆಗೆ ಲಿಖಿತ ಹಾಗೂ ಮೌಖಿಕವಾಗಿ ದೂರು ನೀಡಿದರೂ ಯಾವುದೇ ಪ್ರತಿಕ್ರಿಯೆ ಇಲ್ಲ. ಇದರಿಂದಾಗಿ ಜನರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.

ಪೌರಿ ಗರ್ವಾಲ್ ಅರಣ್ಯ ವಿಭಾಗದ ನಾಗದೇವ್ ರೇಂಜ್ ಫಾರೆಸ್ಟ್ ಆಫೀಸರ್ ದಿನೇಶ್ ಚಂದ್ರ ನೌಟಿಯಾಲ್ ಮಾತನಾಡಿ, ಕೋರ್ಟ್ ಆವರಣದಲ್ಲಿ ಚಿರತೆ ಚಲನವಲನದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆದರೆ, ಅರಣ್ಯ ಇಲಾಖೆ ನಿರಂತರವಾಗಿ ಗಸ್ತು ತಿರುಗುತ್ತಿದ್ದು, ಇದನ್ನು ಹೆಚ್ಚಿಸಲಾಗುವುದು. ಅಗತ್ಯವಿದ್ದರೆ, ಚಿರತೆ ಕಾಣಿಸಿಕೊಂಡಿದೆ ಎಂದು ಹೇಳಲಾದ ಸ್ಥಳದಲ್ಲಿ ಬೋನ್‌ಗಳನ್ನು ಸಹ ಇರಿಸಲಾಗುವುದು ಎಂದು ತಿಳಿಸಿದರು.

ಜೊತೆಗೆ ಮಾತನಾಡಿದ ಡಿಎಫ್‌ಒ ಅನಿರುದ್ಧ ಸ್ವಪ್ನಿಲ್, ಚಿರತೆ ಕಾಣಿಸಿಕೊಂಡಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಈ ನಿಟ್ಟಿನಲ್ಲಿ ಗಸ್ತು ಹೆಚ್ಚಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಗತ್ಯವಿದ್ದರೆ, ಆ ಪ್ರದೇಶದಲ್ಲಿ ಬೋನ್ ಇಡಲಾಗುವುದು. ನಾಗದೇವ್ ವ್ಯಾಪ್ತಿ ಈಗಾಗಲೇ ಚಿರತೆ ಪೀಡಿತ ಪ್ರದೇಶವಾಗಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿರತೆಗಳಿವೆ. ಅವುಗಳು ಕೆಲವೊಮ್ಮೆ ವಸತಿ ಪ್ರದೇಶಗಳ ಕಡೆಗೂ ಬರುತ್ತವೆ ಎಂದರು. ಕೆಲವು ದಿನಗಳ ಹಿಂದೆ ಚಾಕಿಸೈನ್ ತಹಸಿಲ್‌ನ ಮಖೋಲಾ ಗ್ರಾಮದಲ್ಲಿ ಹುಲ್ಲು ತರಲೆಂದು ಹೋಗಿದ್ದ ವೃದ್ಧೆಯೊಬ್ಬಳ ಮೇಲೆ ಚಿರತೆ ದಾಳಿ ಮಾಡಿತ್ತು. ದಾಳಿಯಲ್ಲಿ ಮಹಿಳೆಯ ಕೆನ್ನೆ, ಕೈ ಮತ್ತು ಭುಜಕ್ಕೆ ಗಾಯಗಳಾಗಿತ್ತು.

## ಇಸ್ರೇಲ್‌ಗೆ ಪಾಶ್ಚಿಮಾತ್ಯ ದೇಶಗಳ ಮೂಗುದಾರ

# ಇರಾನ್‌ಗೆ 'ಆಂತರಿಕ' ಸಂಕಟ

**ತೆಹರಾನ್:** ಇರಾನ್ ಮೇಲೆ ಯುದ್ಧ ನಡೆಸದಂತೆ ಇಸ್ರೇಲ್‌ಗೆ ಪಾಶ್ಚಿಮಾತ್ಯ ದೇಶಗಳು ತಡೆಯುತ್ತಿವೆ. ಇರಾನ್‌ಗೆ ತನ್ನ ದೇಶದೊಳಗೇ ಇರುವ ಹಲವು ಸಮಸ್ಯೆಗಳು ಪೂರ್ಣ ಪ್ರಮಾಣದ ಯುದ್ಧಕ್ಕೆ ವಾಲದಂತೆ ತಡೆಯುತ್ತಿದೆ.

ಇರಾನ್‌ನಲ್ಲಿ ಈಗಾಗಲೇ ಹಿಜಾಬ್ ವಿರೋಧಿ ಹೋರಾಟದಿಂದಾಗಿ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಇದೆ.

ಜೊತೆಯಲ್ಲೇ ಇರಾನ್‌ನ ಹೊಸ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಸುಧಾರಣಾ ವಾದದ ಪರ ಇದ್ದಾರೆ.

ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮ ಸೇರಿದಂತೆ ಅಂತಾರಾಷ್ಟ್ರೀಯ ಸಮುದಾಯಕ್ಕೆ ಅದರಲ್ಲೂ ಅಮೆರಿಕ ಕೆಂಗಣ್ಣಿಗೆ ಗುರಿಯಾಗಿರುವ ನಡೆಗಳಿಂದ ದೂರ ಸರಿಯಲು ಅವರು ಒಲವು ತೋರಿದ್ದಾರೆ.

ಇಸ್ರೇಲ್ ಮೇಲೆ 180ಕ್ಕೂ ಹೆಚ್ಚು ಖಂಡಾಂತರ ಕ್ಷಿಪಣಿಗಳನ್ನ ಪ್ರಯೋಗ ಮಾಡಿರುವ ಇರಾನ್, ಇದೇ ಮೊದಲ ಬಾರಿಗೆ ತನ್ನೆಲ್ಲಾ ಬೆಂಬಲಿಗ ಉಗ್ರ



ಸಂಘಟನೆಗಳನ್ನೂ ಬದಿಗಿಟ್ಟು ತಾನೇ ಏಕಾ ಏಕಿ ಇಸ್ರೇಲ್ ಮೇಲೆ ದಾಳಿ ನಡೆಸಿದೆ. ಮಧ್ಯ ಪ್ರಾಚ್ಯದಲ್ಲಿ ಯುದ್ಧದ ಭೀತಿ ಶುರುವಾಗಿದೆ. ಇಸ್ರೇಲ್ ಸೇನೆ ಇರಾನ್ ಮೇಲೆ ಪ್ರತೀಕಾರದ ದಾಳಿ ನಡೆಸಬಹುದು ಅನ್ನೋ ಭೀತಿಯ ನಡುವಲ್ಲೇ, ಇರಾನ್‌ನ ಮುಂದಿನ ನಡೆ ಏನು ಅನ್ನೋ ಚರ್ಚೆಗಳೂ ಶುರುವಾಗಿವೆ. ಗಾಜಾ ಪಟ್ಟಿಯ ಹಮಾಸ್ ಉಗ್ರ ಸಂಘಟನೆ, ಲೆಬನಾನ್‌ನ ಹೆಜ್ಬೊಲ್ಲಾ ಉಗ್ರ ಸಂಘಟನೆ ಹಾಗೂ ಯಮನ್ ದೇಶದ ಹೌತಿ ಉಗ್ರ ಸಂಘಟನೆಗಳಿಗೆ ಇರಾನ್ ದೇಶವೇ ಹಣಕಾಸು ಹಾಗೂ ಶಸ್ತ್ರಾಸ್ತ್ರ ನೆರವು ನೀಡುತ್ತಿದೆ ಅನ್ನೋದು ಓಪನ್ ಸೀಕ್ರೆಟ್.. ಆದರೆ 2023ರ ಅಕ್ಟೋಬರ್ 7 ರಂದು ಹಮಾಸ್ ಉಗ್ರರು ಇಸ್ರೇಲ್ ಮೇಲೆ ದಾಳಿ ನಡೆಸಿದ ಬಳಿಕ

### ಇಸ್ರೇಲ್ ಪ್ರತಿ ದಾಳಿ

**ಅದು ಹೊಸದೊಂದು ಯುದ್ಧಕ್ಕೆ ನಾಂದಿ ಹಾಡುತ್ತದೆ. ಜೊತೆಯಲ್ಲೇ ಇರಾನ್‌ನ ಬೆಂಬಲಕ್ಕೆ ರಷ್ಯಾ ಸೇರಿದಂತೆ ಹಲವು ದೇಶಗಳು ನಿಲ್ಲಬಹುದಾದ ಭೀತಿಯೂ ಇದ್ದೇ ಇದೆ. ಅಮೆರಿಕ, ಇಂಗ್ಲೆಂಡ್ ಸೇರಿದಂತೆ ಹಲವು ಪಾಶ್ಚಾತ್ಯ ದೇಶಗಳು ಇಸ್ರೇಲ್‌ಗೆ ಪ್ರತೀಕಾರದ ದಾಳಿ ನಡೆಸದಂತೆ ತಡೆಯುತ್ತಿವೆ ಎನ್ನಲಾಗಿದೆ.**

**ಪ್ಯಾಲಸ್ತೀನ್‌ಗಾಗಿ ಹೋರಾಟ ನಡೆಸುತ್ತಿರುವ ಇರಾನ್ ದೇಶ, ಇಸ್ರೇಲ್ ಮೇಲೆ ಇಷ್ಟು ದಿನ ತನ್ನ ಬೆಂಬಲಿತ ಉಗ್ರ ಸಂಘಟನೆಗಳ ಮೂಲಕ ದಾಳಿ ನಡೆಸುತ್ತಿತ್ತು.**

ಇಸ್ರೇಲ್ ಸೇನೆ ಗಾಜಾ ಪಟ್ಟಿಯನ್ನೇ ಧ್ವಂಸ ಮಾಡಿದೆ. ಹಮಾಸ್ ಉಗ್ರ ಸಂಘಟನೆ ನಾಯಕ ಇಸ್ಮಾಯಿಲ್ ಹನಿಯೆ ಹತ್ಯೆಗೀಡಾಗಿದ್ದರೆ, ಮತ್ತೊಬ್ಬ ನಾಯಕ ಯಾಹ್ಯಾ ಸಿನ್ವರ್ ಸುಳಿವೇ ಇಲ್ಲದಂತಾಗಿದೆ.

# ಮಣಿಪುರದಲ್ಲಿ ಹೈ ಅಲರ್ಟ್

ಎಸ್‌ಪಿಗಳಿಗೆ ಮುನ್ನೆಚ್ಚರಿಕೆ ಕ್ರಮ

ಮಣಿಪುರದಲ್ಲಿ ನಿಲ್ಲದ ಹಿಂಸಾಚಾರ

ವಿವಿಧ ಜಿಲ್ಲೆಗಳಲ್ಲಿ ಉದ್ವಿಗ್ನ ಪರಿಸ್ಥಿತಿ

**ಇಂಫಾಲ್ :** ಮಣಿಪುರದ ಹಲವು ಜಿಲ್ಲೆಗಳಲ್ಲಿ ಉದ್ವಿಗ್ನತೆ ಸೃಷ್ಟಿಯಾಗಿರುವ ಹಿನ್ನಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಜಾಗರೂಕರಾರಲು ಎಲ್ಲಾ 16 ಜಿಲ್ಲಾ ಪೊಲೀಸ್ ವರಿಷ್ಠರಿಗೆ ಗೃಹ ಇಲಾಖೆ ಸೂಚನೆ ನೀಡಿದ್ದು, ಈ ಹಿನ್ನೆಲೆಯಲ್ಲಿ ಹೈಅಲರ್ಟ್ ಘೋಷಿಸಲಾಗಿದೆ. ರಾಜ್ಯದ ಉಖ್ರುಲ್ ಜಿಲ್ಲೆಯಲ್ಲಿ ಬುಧವಾರ ಎರಡು ನಾಗಾ ಗ್ರಾಮಗಳ ನಿವಾಸಿಗಳ ನಡುವೆ ಘರ್ಷಣೆ ನಡೆದಿದೆ. ಎರಡು ಗ್ರಾಮಗಳ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ನಡೆದ ಗುಂಡಿನ ಕಾಳಗದಲ್ಲಿ ಮಣಿಪುರ ರೈಫಲ್ ಸೈನಿಕ ಸೇರಿದಂತೆ ಮೂವರು ಮೃತಪಟ್ಟು, 30 ಮಂದಿ ಗಾಯಗೊಂಡಿದ್ದಾರೆ.

ಈ ಘಟನೆ ವರದಿಯಾದ ಬಳಿಕ ಮಣಿಪುರ ಪೊಲೀಸರು ಎಲ್ಲಾ 16 ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗೆ ಹೈ ಅಲರ್ಟ್ ಘೋಷಣೆ ಮಾಡಿದ್ದಾರೆ. ಕಾನೂನು ಸುವ್ಯವಸ್ಥೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ -ಎಡಿಜಿ ಎಲ್. ಕೈಲುನ್ ಹೊರಡಿಸಿರುವ ತುರ್ತು ಸಂದೇಶದಲ್ಲಿ ಎಲ್ಲಾ 16 ಜಿಲ್ಲಾ ಎಸ್‌ಪಿಗಳಿಗೆ ಚಾಲ್ತಿಯಲ್ಲಿರುವ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಹೆಚ್ಚಿನ ನಿಗಾ ವಹಿಸುವಂತೆ ಸೂಚಿಸಲಾಗಿದೆ. ಮತ್ತು ಮದ್ದುಗುಂಡುಗಳಿಗೆ ಸರಿಯಾದ ಭದ್ರತೆ ಖಚಿತಪಡಿಸಿಕೊಳ್ಳಬೇಕು. ಅಧಿಕಾರಿಗಳು, ಪೊಲೀಸ್ ಠಾಣೆಗಳು, ಔಟ್‌ಪೋಸ್ಟ್‌ಗಳು ಮತ್ತು ನಾಕಾ ಪಾಯಿಂಟ್‌ಗಳಲ್ಲಿ ತೀವ್ರ ಕಟ್ಟೆಚ್ಚರ ವಹಿಸಬೇಕು ಎಂದು ಎಡಿಜಿ ತಮ ತುರ್ತು ಸಂದೇಶದಲ್ಲಿ ತಿಳಿಸಿದ್ದಾರೆ.

ಸಂತ್ರಸ್ತರ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವಂತೆ ಮುಖ್ಯಮಂತ್ರಿ ಅಧಿಕಾರಿಗಳಿಗೆ ಸೂಚನೆ ಕೂಡ ಕೊಟ್ಟಿದ್ದಾರೆ. ಎಲ್ಲಾ ಗಾಯಾಳುಗಳಿಗೆ ಇಂಫಾಲ್ ಮತ್ತು ಉಖ್ರುಲ್‌ನಲ್ಲಿ ಸರಿಯಾದ ವೈದ್ಯಕೀಯ ಚಿಕಿತ್ಸೆ ನೀಡಲು ಸರ್ಕಾರದಿಂದ ಸಹಾಯ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಬುಧವಾರ ರಾತ್ರಿ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮೇಟಿ ಸಮುದಾಯಕ್ಕೆ ಸೇರಿದ ಇಬ್ಬರು ಯುವಕರ ಅಪಹರಣಕ್ಕೆ ಸಂಬಂಧಿಸಿದಂತೆ ಸೆಪ್ಟೆಂಬರ್ 27ರಿಂದ ಕಣಿವೆಯ ಆರು ಜಿಲ್ಲೆಗಳಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಈ ಜಿಲ್ಲೆಗಳಲ್ಲಿ ಪೊಲೀಸರು ಈಗಲೂ ಸಹ ಕಟ್ಟೆಚ್ಚರ ವಹಿಸಿದ್ದಾರೆ. ಏತನ್ಮಧ್ಯೆ, ಮಣಿಪುರದ ಚುರಾಚಂದ್‌ಪುರ ಜಿಲ್ಲೆಯ ಲೀಶಾಂಗ್ ಗ್ರಾಮದ ಬಳಿ ಮಂಗಳವಾರ ಅಪರಿಚಿತ ಬಂದೂಕುಧಾರಿಗಳು ನಿಷೇಧಿತ ಉಗ್ರಗಾಮಿ ಸಂಘಟನೆಯ ಸ್ವಯಂಘೋಷಿತ ಪಟ್ಟಣದ ಕಮಾಂಡರ್‌ನನ್ನು ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಹತ್ಯೆಗೀಡಾದ ಉಗ್ರಗಾಮಿಯನ್ನು ಸೆಖೋಹಾವೊ ಹಾಕಿಪ್ ಎಂದು ಗುರುತಿಸಲಾಗಿದೆ ಎಂದು ವರದಿಯಾಗಿದೆ.

**ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಮೂವರು ನಾಗಾಗಳ ಸಾವಿಗೆ ಸಂತಾಪ ಸೂಚಿಸಿದ್ದಾರೆ ಮತ್ತು ಜನರು ಶಾಂತವಾಗಿರುವಂತೆ ಮನವಿ ಮಾಡಿದ್ದಾರೆ.**

### ಆರು ಜಿಲ್ಲೆಗಳ ಬಂದ್‌ಗೆ ಕರೆ:

**ಯುವಕರ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಮಣಿಪುರದ ಆರು ಕಣಿವೆ ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಅಂಗಡಿಗಳು, ಮಾರುಕಟ್ಟೆಗಳು, ವಾಣಿಜ್ಯ ಸಂಸ್ಥೆಗಳು, ಸರ್ಕಾರಿ ಕಚೇರಿಗಳು ಮತ್ತು ಬ್ಯಾಂಕ್‌ಗಳು ಮುಚ್ಚಲ್ಪಟ್ಟಿವೆ ವಾಹನಗಳು ರಸ್ತೆಯಿಂದ ಹೊರಗುಳಿದಿವೆ.**



### ಘಟನೆಯ ಹಿನ್ನೆಲೆ:

**ತೌಬಲ್ ಜಿಲ್ಲೆಯ ನಿವಾಸಿಗಳಾದ ಮೂವರು ಯುವಕರು ಸೆಪ್ಟೆಂಬರ್ 27 ರಂದು ಇಂಫಾಲ್ ಪಶ್ಚಿಮ ಮತ್ತು ಕಾಂಗ್‌ಪೋಕ್ಪಿ ಜಿಲ್ಲೆಗಳ ನಡುವಿನ ನ್ಯೂ ಕೀಥೆಲ್‌ಮಂಬಿಯಲ್ಲಿ ಸೇನಾ ನೇಮಕಾತಿ ಪರೀಕ್ಷೆಗೆ ಹಾಜರಾಗಲು ತೆರಳುತ್ತಿದ್ದಾಗ ಶಸ್ತ್ರಸಜ್ಜಿತ ಕುಕಿ ಉಗ್ರಗಾಮಿಗಳು ಅವರನ್ನು ಅಪಹರಿಸಿದ್ದರು. ಅಪಹರಣಕ್ಕೊಳಗಾದ ಇಬ್ಬರು ಯುವಕರನ್ನು ಬಿಡುಗಡೆ ಮಾಡುವಂತೆ ಪೊಲೀಸ್ ಮಹಾನಿರ್ದೇಶಕ ರಾಜೀವ್ ಸಿಂಗ್ ಅವರನ್ನು ಕೇಳಿದ್ದೇನೆ ಎಂದು ಮಣಿಪುರ ಮುಖ್ಯಮಂತ್ರಿ ಈ ಹಿಂದೆ ಹೇಳಿದ್ದರು. ಇಬ್ಬರು ಯುವಕರನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಲು ಕೇಂದ್ರ ಮತ್ತು ರಾಜ್ಯ ಭದ್ರತಾ ಪಡೆಗಳು ತಮ ಪ್ರಯತ್ನವನ್ನು ಮುಂದುವರೆಸಿವೆ. ಡಿಜಿಪಿ ಅವರೇ ಸ್ಥಳಕ್ಕೆ ತೆರಳಿ ಅಪಹರಣಕಾರರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ಅವರು ಹೇಳಿದ್ದಾರೆ. ಅಪಹರಣಕ್ಕೊಳಗಾದ ಇಬ್ಬರು ಯುವಕರನ್ನು ಬಿಡುಗಡೆ ಮಾಡುವಂತೆ ಪೊಲೀಸ್ ಸಕರಾತ್ಮಕ ಫಲಿತಾಂಶ ಬರುತ್ತದೆ ಎಂದು ನಾವು ಭಾವಿಸುತ್ತೇವೆ. ಅಪಹರಣಕಾರರು ಕೆಲವು ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ.**

ಭದ್ರತಾ ಪಡೆಗಳು ಪ್ರಯತ್ನ

### ಬಿಡುಗಡೆಗೆ ಒತ್ತಾಯಿಸಿ ಬಂದ್:

**ಇಬ್ಬರು ಯುವಕರ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದ್ದ ಬಂದ್‌ನಿಂದಾಗಿ ಮಣಿಪುರದ ಆರು ಕಣಿವೆ ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಅಂಗಡಿಗಳು, ಮಾರುಕಟ್ಟೆಗಳು, ವಾಣಿಜ್ಯ ಸಂಸ್ಥೆಗಳು, ಸರ್ಕಾರಿ ಕಚೇರಿಗಳು ಮತ್ತು ಬ್ಯಾಂಕ್‌ಗಳು ಮುಚ್ಚಲ್ಪಟ್ಟಿವೆ ಮತ್ತು ಸ್ಥಗಿತದ ದೃಷ್ಟಿಯಿಂದ ಖಾಸಗಿ ವಾಹನಗಳು ರಸ್ತೆಯಿಂದ ಹೊರಗುಳಿದಿವೆ ಎಂದು ಪೊಲೀಸರು ತಿಳಿಸಿದ್ದಾರೆ.**

**ಬಂದ್ ಬಗ್ಗೆ ಮಾತನಾಡಿರುವ ಜೆಎಸಿ ಸಂಚಾಲಕ ಎಲ್.ಸುಬೋಲ್, ಇಬ್ಬರು ಯುವಕರನ್ನು ಬಿಡುಗಡೆ ಮಾಡುವವರೆಗೆ ಹೋರಾಟ ಮುಂದುವರಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ. ಯುವಕರನ್ನು ಬಿಡುಗಡೆ ಮಾಡುವಂತೆ ವಿವಿಧ ನಾಗರಿಕ ಸಂಘಟನೆಗಳು, ರಾಜಕೀಯ ಪಕ್ಷಗಳು ಮತ್ತು ಎನ್‌ಜಿಒಗಳು ರಾಜ್ಯ ಸರ್ಕಾರ ಮತ್ತು ಕುಕಿ ಹೋರಾಟಗಾರರನ್ನು ಒತ್ತಾಯಿಸುತ್ತಿವೆ.**



### ಶಾಂತಿ ಕಾಪಾಡುವಂತೆ ಮನವಿ

**ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಮೂವರು ನಾಗಾಗಳ ಸಾವಿಗೆ ಸಂತಾಪ ಸೂಚಿಸಿದ್ದಾರೆ ಶಾಂತವಾಗಿರುವಂತೆ ಮನವಿ ಮಾಡಿದ್ದಾರೆ. ಸಂತ್ರಸ್ತರ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವಂತೆ ಮುಖ್ಯಮಂತ್ರಿ ಅಧಿಕಾರಿಗಳಿಗೆ ಸೂಚನೆ ಕೂಡಾ ಕೊಟ್ಟಿದ್ದಾರೆ. ಎಲ್ಲಾ ಗಾಯಾಳುಗಳಿಗೆ ಇಂಫಾಲ್ ಮತ್ತು ಉಖ್ರುಲ್‌ನಲ್ಲಿ ಸರಿಯಾದ ವೈದ್ಯಕೀಯ ಚಿಕಿತ್ಸೆ ನೀಡಲು ಸರ್ಕಾರದಿಂದ ಸಹಾಯ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮೇಟಿ ಸಮುದಾಯಕ್ಕೆ ಸೇರಿದ ಇಬ್ಬರು ಯುವಕರ ಅಪಹರಣಕ್ಕೆ ಸಂಬಂಧಿಸಿದಂತೆ ಸೆ. 27 ರಿಂದ ಕಣಿವೆಯ ಆರು ಜಿಲ್ಲೆಗಳಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು.**

# ಸೂಸೈಡ್ ಸ್ಪಾಟ್ ಆಗುತ್ತಿದೆ ಅಟಲ್ ಸೇತು ಸಮುದ್ರ ಸೇತುವೆ

**ಮುಂಬೈ:** ಮುಂಬೈ ಮತ್ತು ನವಿ ಮುಂಬೈ ಸಂಪರ್ಕಿಸುವ ಅಟಲ್ ಸೇತು ಸಮುದ್ರ ಸೇತುವೆಯಿಂದ ಹಾರಿ 52 ವರ್ಷದ ಉದ್ಯಮಿ ಆತಹತ್ಯೆ ಮಾಡಿಕೊಂಡಿದ್ದಾರೆ. ನಿನ್ನೆ ಈ ಘಟನೆ ನಡೆದಿದ್ದು, ಮೂರು ದಿನಗಳಲ್ಲಿ ಅಟಲ್ ಸೇತುವಿಗೆ ಹಾರಿ ಆತಹತ್ಯೆ ಮಾಡಿಕೊಂಡಿರುವ ಎರಡನೇ ಪ್ರಕರಣ ಇದಾದೆ. ಉದ್ಯಮಿ ಫಿಲಿಪ್ ಷಾ ಅಟಲ್ ಸೇತು ಮೇಲಿಂದ ಹಾರಿ ತಮ ಜೀವನವನ್ನು ಅಂತ್ಯಗೊಳಿಸಿದರು, ಮಧ್ಯ ಮುಂಬೈನ ಮಾಟುಂಗಾ ನಿವಾಸಿ ಷಾ ಅವರು ತಮ ಸೆಡಾನ್ ಕಾರನ್ನು ಅಟಲ್ ಸೇತು ಮೇಲೆ ಓಡಿಸಿದರು ಮತ್ತು ಅದನ್ನು ಕೆಲವು ಹಂತದಲ್ಲಿ ನಿಲ್ಲಿಸಿ ಸಮುದ್ರಕ್ಕೆ ಹಾರಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಸೇತುವೆಯ ಮೇಲೆ ಕಾರು ನಿಂತಿರುವುದನ್ನು ಸೇತುವೆಯ ಸಿಸಿಟಿವಿ ನಿಯಂತ್ರಣ ಕೊಠಡಿಯ ಸಿಬ್ಬಂದಿ ಗಮನಿಸಿದರು, ನಂತರ ರಕ್ಷಣಾ ತಂಡಕ್ಕೆ ಎಚ್ಚರಿಕೆ ನೀಡಲಾಯಿತು. ಅದರ ಸಿಬ್ಬಂದಿ ಷಾ ಸಮುದ್ರಕ್ಕೆ ಹಾರಿದ ಸ್ಥಳಕ್ಕೆ ಧಾವಿಸಿದರು. ಶೋಧ ಕಾರ್ಯಾಚರಣೆಯ ನಂತರ ಅವರನ್ನು ರಕ್ಷಿಸಿ ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅಷ್ಟರಲ್ಲಿ ಅವರು ಮತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.



ಕಾರಿನಲ್ಲಿ ಪತ್ತೆಯಾದ ಆಧಾರ್ ಕಾರ್ಡ್‌ನ ಆಧಾರದ ಮೇಲೆ ಮತ ವ್ಯಕ್ತಿಯ ಗುರುತನ್ನು ಪತ್ತೆ ಹಚ್ಚಲಾಗಿದೆ ಎಂದು ಅವರು ಹೇಳಿದರು.

ಆಧಾರ್ ಕಾರ್ಡ್‌ನ ಆಧಾರದ ಮೇಲೆ ಮತ ವ್ಯಕ್ತಿಯ ಗುರುತನ್ನು ಪತ್ತೆ

ಸಂತ್ರಸ್ತರು ಸಾಯುವ ಹಿಂದಿನ ಕೆಲವು ದಿನಗಳಲ್ಲಿ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು ಎಂದು ಅವರು ಹೇಳಿದರು. ನವಿ ಮುಂಬೈನ ನ್ಹಾವಾ ಶೇವಾ ಪೊಲೀಸ್ ಠಾಣೆಯಲ್ಲಿ ಆಕಸಿಕ ಸಾವಿನ ಪ್ರಕರಣ ದಾಖಲಾಗಿದೆ ಎಂದು ಅವರು ಹೇಳಿದರು. ಮುಂಬೈ ಟ್ರಾನ್-ಹಾರ್ಬರ್ ಲಿಂಕ್ ಎಂದೂ ಕರೆಯಲ್ಪಡುವ ಅಟಲ್ ಬಿಹಾರಿ ವಾಜಪೇಯಿ ಸೇವ್ರಿ-ನವ ಶೇವಾ ಅಟಲ್ ಸೇತು ದಕ್ಷಿಣ ಮುಂಬೈ ಅನ್ನು ಉಪಗ್ರಹ ನಗರವಾದ ನವಿ ಮುಂಬೈನೊಂದಿಗೆ ಸಂಪರ್ಕಿಸುತ್ತದೆ, ಈ ವರ್ಷದ ಜನವರಿಯಲ್ಲಿ ಉದ್ಘಾಟನೆಯಾಯಿತು. ಆರು ಪಥಗಳ ಸೇತುವೆಯು 21.8 ಕಿಮೀ ಉದ್ದವಿದ್ದು, ದೇಶದಲ್ಲೇ ಅತಿ ಉದ್ದದ ಸಮುದ್ರ ಸೇತುವೆ

ಶೋಧ ಕಾರ್ಯಾಚರಣೆಯ ನಂತರ ರಕ್ಷಿಸಿ

## ಪಟಾಕಿ ಫ್ಯಾಕ್ಟರಿಯಲ್ಲಿ ಸ್ಫೋಟ, ಐವರ ಸಾವು

**ಬರೇಲಿ:** ಹಳ್ಳಿಯೊಂದರ ಪಟಾಕಿ ತಯಾರಿಕಾ ಘಟಕದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಒಟ್ಟು ಐವರು ಮೃತಪಟ್ಟಿದ್ದಾರೆ. ಸಿರೌಲಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಈ ಸ್ಫೋಟದಲ್ಲಿ ಘಟಕದ ಸುತ್ತಲಿನ ಕೆಲವು ಕಟ್ಟಡಗಳಿಗೆ ಹಾನಿಯಾಗಿದೆ. ಕಾರ್ಖಾನೆಯ ಮಾಲೀಕ ನಾಸಿರ್ ಅವರು ಬೇರೆ ಸ್ಥಳಕ್ಕೆ ಪರವಾನಗಿ ಹೊಂದಿದ್ದರು ಆದರೆ ಘಟನೆ ಸಂಭವಿಸಿದ ಘಟಕ ಅವರ ಅತ್ತೆಯವರಿಗೆ ಸೇರಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಸ್ಫೋಟದ ಹಿನ್ನೆಲೆಯಲ್ಲಿ, ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಅನುರಾಗ್ ಆರ್ಯ ಅವರು ನಾಲ್ವರು ಪೊಲೀಸರನ್ನು ಅಮಾನತುಗೊಳಿಸಿದ್ದಾರೆ, ಸ್ಥಳೀಯ ಸ್ಟೇಷನ್ ಠಾಣೆಯ ಅಧಿಕಾರಿಯನ್ನು ವರ್ಗಾವಣೆ ಮಾಡಿದ್ದಾರೆ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ವಿರುದ್ಧ ತನಿಖೆಗೆ ಆದೇಶಿಸಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದು, ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ನಾವು ಸ್ಥಳದಿಂದ ಪಟಾಕಿಗಳ ಅವಶೇಷಗಳನ್ನು ವಶಪಡಿಸಿಕೊಂಡಿದ್ದೇವೆ. ಪ್ರಾಥಮಿಕವಾಗಿ ತನಿಖೆಯಲ್ಲಿ ಇಲ್ಲೆ ಸ್ಫೋಟ ಸಂಭವಿಸಿದೆ ಎಂದು ತೋರುತ್ತದೆ. ಉದ್ದೇಶಪೂರ್ವಕ ಕೃತ್ಯವನ್ನು ತಳ್ಳಿಹಾಕಿದ್ದಾರೆ.

## ಗಾಂಧಿ ಅಹಿಂಸಾ ತತ್ವ ಸ್ಮರಿಸಿದ ವಿಶ್ವಸಂಸ್ಥೆ ಮುಖ್ಯಸ್ಥ

**ವಿಶ್ವಸಂಸ್ಥೆ:** ಉಕ್ರೇನ್‌ನಿಂದ ಮಧ್ಯ ಪ್ರಾಚ್ಯದವರೆಗೆ ಉಲ್ಬಣಗೊಳ್ಳುತ್ತಿರುವ ಹಿಂಸಾಚಾರ ಮತ್ತು ಸಂಘರ್ಷದ ಸಮಯದಲ್ಲಿ ಮಹಾತ ಗಾಂಧಿಯವರ ಅಹಿಂಸೆ, ಶಾಂತಿ ಮತ್ತು ಸಮಾನತೆ ಸಂದೇಶವನ್ನು ಎಲ್ಲರೂ ಅಳವಡಿಸಿಕೊಳ್ಳಬಹುದಾಗಿದೆ ಎಂದು ವಿಶ್ವಸಂಸ್ಥೆ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಅಭಿಪ್ರಾಯಪಟ್ಟಿದ್ದಾರೆ. ಅಂತರರಾಷ್ಟ್ರೀಯ ಅಹಿಂಸಾ ದಿನದಂದು, ನಾವು ಮಹಾತ ಗಾಂಧಿಯವರ ಜನದಿನವನ್ನು ಸರಿಸುತ್ತೇವೆ ಮತ್ತು ಅವರು ತಮ ಜೀವನವನ್ನು ಮುಡಿಪಾಗಿಟ್ಟ ಮೌಲ್ಯಗಳಾದ ಸಮಾನತೆ, ಗೌರವ, ಶಾಂತಿ ಮತ್ತು ನ್ಯಾಯವನ್ನು ಪುನರುಚ್ಚರಿಸುತ್ತೇವೆ ಎಂದು ಗುಟೆರಸ್ ಅವರು ತಮ ದಿನದ ಸಂದೇಶದಲ್ಲಿ ಗಾಂಧಿಯವರ ಜನದಿನವನ್ನು ಸರಿಸುತ್ತಾ ಹೇಳಿದರು. ಜಗತ್ತು ಹಿಂಸಾಚಾರದಿಂದ ಕಂಗೆಟ್ಟಿದೆ ಎಂದು ಕಳವಳ ವ್ಯಕ್ತಪಡಿಸಿದ ಗುಟೆರಸ್, ಜಗತ್ತಿನಾದ್ಯಂತ ಸಂಘರ್ಷಗಳು ಉಲ್ಬಣಗೊಳ್ಳುತ್ತಿವೆ. ಉಕ್ರೇನ್‌ನಿಂದ ಸುಡಾನ್, ಮಧ್ಯಪ್ರಾಚ್ಯ ಮತ್ತು ದೂರದವರೆಗೆ, ಯುದ್ಧವು ವಿನಾಶ, ನಿರ್ಗತಿಕ ಮತ್ತು ಭಯದ ನರಕದಶ್ಯವನ್ನು ಸಷ್ಟಿಸುತ್ತಿದೆ. ಅಸಮಾನತೆ ಮತ್ತು ಹವಾಮಾನ ಅವ್ಯವಸ್ಥೆಗಳು ಶಾಂತಿಯ



ಅಡಿಪಾಯವನ್ನು ಹಾಳುಮಾಡುತ್ತಿವೆ. ಮತ್ತು ಆನ್‌ಲೈನ್‌ನಲ್ಲಿ ಹರಡಿದ ದ್ವೇ?ಷವು ಬೀದಿಗಳಲ್ಲಿ ಹರಡುತ್ತಿದೆ, ಎಂದು ಅವರು ಹೇಳಿದರು.

ಯಾವುದೇ ಅಸ್ತ್ರಕ್ಕಿಂತ ಅಹಿಂಸೆಯು ಮಾನವೀಯತೆಗೆ ಲಭ್ಯವಿರುವ ಶ್ರೇಷ್ಠ ಶಕ್ತಿ ಎಂದು ಗಾಂಧಿ ನಂಬಿದ್ದರು ಎಂದು ಯುಎನ್ ಮುಖ್ಯಸ್ಥರು ಒತ್ತಿ ಹೇಳಿದರು. ಆ ಉದಾತ್ತ ದಷ್ಟಿಯನ್ನು ಬೆಂಬಲಿಸಲು ಸಂಸ್ಥೆಗಳನ್ನು ನಿರ್ಮಿಸಲು ಅವರು ಅಂತರರಾಷ್ಟ್ರೀಯ ಸಮುದಾಯಕ್ಕೆ ಕರೆ ನೀಡಿದರು.

ವಿಶ್ವಸಂಸ್ಥೆಯ ಪ್ರಧಾನ ಕಛೇರಿಯಲ್ಲಿ ಗಾಂಧಿಯನ್ ಮೌಲ್ಯಗಳು ಮತ್ತು ಯುಎನ್ ಚಾರ್ಟರ್ ಎಂಬ ಶೀರ್ಷಿಕೆಯಡಿಯಲ್ಲಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿತ್ತು.

# ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹದಗೆಡುತ್ತಿದೆ

**ವಾಷಿಂಗ್ಟನ್:** ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹದಗೆಡುತ್ತಿದೆ ಎಂದು ಆರೋಪಿಸಿರುವ ಯುಎಸ್ ಫೆಡರಲ್ ಆಯೋಗವು ಆ ದೇಶವನ್ನು ನಿರ್ದಿಷ್ಟ ಕಾಳಜಿಯ ದೇಶ ಎಂದು ಹೆಸರಿಸಲು ಕರೆ ನೀಡಿದೆ.

ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಅವರ ಪೂಜಾ ಸ್ಥಳಗಳ ವಿರುದ್ಧ ಹಿಂಸಾತಕ ದಾಳಿಗಳನ್ನು ಪ್ರಚೋದಿಸಲು ಸರ್ಕಾರಿ ಅಧಿಕಾರಿಗಳ ದ್ವೇಷದ ಭಾಷಣ ಸೇರಿದಂತೆ ತಪ್ಪು ಮಾಹಿತಿ ಮತ್ತು ತಪ್ಪು ಮಾಹಿತಿಯ ಬಳಕೆಯನ್ನು ವಿವರಿಸುತ್ತದೆ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಅಮೆರಿಕ ಆಯೋಗ ಹೇಳಿಕೆಯಲ್ಲಿ ತಿಳಿಸಿದೆ.

ಯುಎಸ್‌ಸಿಐಆರ್‌ಎಫ್ ತನ್ನ ವಾರ್ಷಿಕ ವರದಿಯಲ್ಲಿ, ಧಾರ್ಮಿಕ ಸ್ವಾತಂತ್ರ್ಯದ ವ್ಯವಸ್ಥಿತ, ನಡೆಯುತ್ತಿರುವ ಮತ್ತು ಅತಿರೇಕದ ಉಲ್ಲಂಘನೆಯಲ್ಲಿ ತೊಡಗಿದ್ದಕ್ಕಾಗಿ ಭಾರತವನ್ನು ನಿರ್ದಿಷ್ಟ ಕಾಳಜಿಯ ದೇಶ ಎಂದು ಹೆಸರಿಸಲು ಅಮೆರಿಕ ರಾಜ್ಯ ಇಲಾಖೆಯು ಶಿಫಾರಸು ಮಾಡಿದೆ.

ಈ ವರದಿಯು 2024 ರ ಉದ್ದಕ್ಕೂ, ಜಾಗತ ಗುಂಪುಗಳಿಂದ ಹೇಗೆ ಕೊಲ್ಲಲ್ಪಟ್ಟಿದೆ, ಥಳಿಸಲ್ಪಟ್ಟಿದೆ



ಮತ್ತು ಹತ್ಯೆಯಾಗಿದೆ, ಧಾರ್ಮಿಕ ಮುಖಂಡರನ್ನು ನಿರಂಕುಶವಾಗಿ ಬಂಧಿಸಲಾಗಿದೆ ಮತ್ತು ಮನೆಗಳು ಮತ್ತು ಪೂಜಾ ಸ್ಥಳಗಳನ್ನು ಕೆಡವಲಾಗಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ಘಟನೆಗಳು ಧಾರ್ಮಿಕ ಸ್ವಾತಂತ್ರ್ಯದ ತೀವ್ರ ಉಲ್ಲಂಘನೆಯಾಗಿದೆ ಎಂದು ಆಯೋಗ ಹೇಳಿದೆ. ಹಿಂದಿನ ಮನಮೋಹನ್ ಸಿಂಗ್ ನೇತತ್ವದ ಸರ್ಕಾರದಿಂದ ಆರಂಭಗೊಂಡು, ಭಾರತವು ತನ್ನ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪವನ್ನು ಉಲ್ಲೇಖಿಸಿ ಆಯೋಗದ ಸದಸ್ಯರಿಗೆ ಭಾರತಕ್ಕೆ ಭೇಟಿ ನೀಡಲು ಸತತವಾಗಿ ವೀಸಾಗಳನ್ನು ನಿರಾಕರಿಸಿದೆ ಎಂದು ಅದು ಹೇಳಿದೆ. ಪೌರತ್ವ ತಿದ್ದುಪಡಿ ಕಾಯಿದೆ, ಏಕರೂಪದ ನಾಗರಿಕ ಸಂಹಿತೆ ಮತ್ತು ಹಲವಾರು ರಾಜ್ಯ ಮಟ್ಟದ ಮತಾಂತರ ವಿರೋಧಿ ಮತ್ತು ಗೋಹತ್ಯೆ ಕಾನೂನುಗಳು ಸೇರಿದಂತೆ ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿಯಾಗಿಸಲು ಮತ್ತು ಹಕ್ಕು ನಿರಾಕರಣೆ ಮಾಡಲು ಭಾರತದ ಕಾನೂನು ಚೌಕಟ್ಟಿನ ಬದಲಾವಣೆಗಳನ್ನು ಮತ್ತು ಜಾರಿಗೊಳಿಸುವಿಕೆಗೆ ಮುಂದಾಗಿದೆ ಎಂದು ಆಯೋಗ ಆರೋಪಿಸಿದೆ. ಯುಎಸ್‌ಸಿಐಆರ್‌ಎಫ್ ತನ್ನ ವಾರ್ಷಿಕ ವರದಿಯಲ್ಲಿ,ಧಾರ್ಮಿಕ ಸ್ವಾತಂತ್ರ್ಯದ ವ್ಯವಸ್ಥಿತ ಮತ್ತು ಅತಿರೇಕದ ಉಲ್ಲಂಘನೆಗಳಲ್ಲಿ ತೊಡಗಿರುವುದಕ್ಕಾಗಿ ಭಾರತವನ್ನು ವಿಶೇಷ ಕಾಳಜಿಯ ದೇಶ ಎಂದು ಹೆಸರಿಸುವಂತೆ ಅಮೆರಿಕದ ವಿದೇಶಾಂಗ ಇಲಾಖೆಗೆ ಶಿಫಾರಸನ್ನೂ ಮಾಡಿದೆ. ಇಲಾಖೆಯು ಈವರೆಗೆ ಶಿಫಾರಸುಗಳನ್ನು ಅಂಗೀಕರಿಸಿಲ್ಲ. ವರದಿಯು 2024ರಲ್ಲಿ ಸ್ವಘೋಷಿತ ಗೋರಕ್ಷಕ ಗುಂಪುಗಳಿಂದ ವ್ಯಕ್ತಿಗಳ ಮೇಲೆ ದಾಳಿ ಮತ್ತು ಥಳಿಸಿ ಹತ್ಯೆ, ಧಾರ್ಮಿಕ ನಾಯಕರ ನಿರಂಕುಶ ಬಂಧನಗಳು ಹಾಗೂ ಮನೆಗಳು ಮತ್ತು ಆರಾಧನಾ ಸ್ಥಳಗಳ ಧ್ವಂಸ ಇವುಗಳನ್ನು ಎತ್ತಿ ತೋರಿಸಿದೆ.

## ಮಿನಿ ನ್ಯೂಸ್

### ಕ್ಷಮೆ ಕೋರಿದ ಸಚಿವೆ ಸುರೇಖಾ

**ಹೈದರಾಬಾದಾ:** ಕಷ್ಟು ವಿವಾದಕ್ಕೆ ಕಾರಣವಾಗಿದ್ದ ನಟಿ ಸಮಂತಾ-ನಾಗ ಚೈತನ್ಯ ವಿಚ್ಛೇದನದ ಕುರಿತು ನೀಡಿದ ಹೇಳಿಕೆಗೆ ತೆಲಂಗಾಣ ಸಚಿವೆ ಕೊಂಡ ಸುರೇಖಾ ಕ್ಷಮೆ ಯಾಚಿಸಿದ್ದಾರೆ. ತಮ್ಮ ಹೇಳಿಕೆಯನ್ನು ಬೇಷರತ್ತಾಗಿ ಹಿಂಪಡೆಯುವುದಾಗಿಯೂ ಸಚಿವೆ ಸುರೇಖಾ ಹೇಳಿದ್ದಾರೆ.

ತೆಲಂಗಾಣ ರಾಜ್ಯ ಸಚಿವೆ ಕೊಂಡಾ ಸುರೇಖಾ ಅವರು ರಾಜಕೀಯ ಹಸ್ತಕ್ಷೇಪದಿಂದಲೇ ತೆರೆಕಂಡ ಸಮಂತಾ ಮತ್ತು ನಾಗ ಚೈತನ್ಯ ವಿಚ್ಛೇದನಕ್ಕೆ ಕಾರಣ ಎಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಇದೀಗ ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದಂತೆ ಸಚಿವರು ತಮ್ಮ ಹೇಳಿಕೆಯನ್ನು ಹಿಂಪಡೆದಿದ್ದಾರೆ. ಅವರ ಈ ಹೇಳಿಕೆ ಕುರಿತಂತೆ ಕಾನೂನು ಕ್ರಮಕ್ಕೆ ಹಲವರು ಮುಂದಾಗಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ನನ್ನ ರಾಜಕೀಯ ಪಯಣದಲ್ಲಿ ರಾಜಕೀಯ ಲಾಭಕ್ಕಾಗಿ ಯಾರ ಕೌಟುಂಬಿಕ ಸಮಸ್ಯೆ ಅಥವಾ ವೈಯಕ್ತಿಕ ಜೀವನದ ಬಗ್ಗೆ ಚರ್ಚೆ ನಡೆಸಿಲ್ಲ.ನಾನು ಸಮಂತಾ ಮತ್ತು ಅವರ ಕುಟುಂಬವನ್ನು ಅವಹೇಳನ ಮಾಡುತ್ತಿಲ್ಲ. ನಾನು ಎಂದಿಗೂ ಆಧಾರರಹಿತ ಆರೋಪ ಮಾಡುವುದಿಲ್ಲ. ನನ್ನ ಮಾತು ಮತ್ತು ಅಭಿಪ್ರಾಯ ನಿಮಗೆ ನೋವಾಗಿದ್ದರೆ ಅದಕ್ಕಾಗಿ ಕ್ಷಮೆಯಾಚಿಸುತ್ತೇನೆ ಎಂದು ಬರೆದಿದ್ದಾರೆ.

### ಕೇಂದ್ರ, ಹರಿಯಾಣ ಮತ್ತು ಪಂಜಾಬ್‌ಗೆ ಸುಪ್ರೀಂ ತರಾಟೆ

**ದೆಹಲಿ :** ರೈತರು ಕೃಷಿ ತ್ಯಾಜ್ಯ ಸುಡುವುದರಿಂದ ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಕಳಪೆ ಆಗಲು ಕಾರಣವಾಗಿರುವುದಕ್ಕೆ ಕೇವಲ ನಾಮಮಾತ್ರದ ಪರಿಹಾರವನ್ನು ಸಂಗ್ರಹಿಸಿದ್ದಕ್ಕಾಗಿ ಪಂಜಾಬ್ ಮತ್ತು ಹರಿಯಾಣ ರಾಜ್ಯ ಸರ್ಕಾರಗಳನ್ನು ಸುಪ್ರೀಂಕೋರ್ಟ್ ಗುರುವಾರ ತರಾಟೆಗೆ ತೆಗೆದುಕೊಂಡಿದೆ ಎಂದು ಸುದ್ದಿ ಸಂಸ್ಥೆ ಪಿಟಿಐ ವರದಿ ಮಾಡಿದೆ. ರಾಷ್ಟ್ರ ರಾಜಧಾನಿಯ ಸುತ್ತಲೂ ಕೃಷಿ ತ್ಯಾಜ್ಯ ಸುಡುವಿಕೆ ನಿಯಂತ್ರಿಸುವಲ್ಲಿ ವಿಫಲವಾದ ಏರ್ ಕ್ವಾಲಿಟಿ ಮ್ಯಾನೇಜ್‌ಮೆಂಟ್‌ಯನ್ನು ಸುಪ್ರೀಂಕೋರ್ಟ್ ಟೀಕಿಸಿದ್ದು ಅಂತಹ ಘಟನೆಗಳನ್ನು ತಡೆಯಲು ಅದರ ನಿರ್ದೇಶನವನ್ನು ಕಾರ್ಯಗತಗೊಳಿಸಲು ಈ ಸಂಸ್ಥೆ ಯಾವುದೇ ಪ್ರಯತ್ನ ಮಾಡಲಿಲ್ಲ ಎಂದು ಹೇಳಿದರು.

ದೆಹಲಿಯಲ್ಲಿ ವಾಯು ಮಾಲಿನ್ಯದ ಕುರಿತು ಚರ್ಚಿಸಲು ಆಗಸ್ಟ್ 29 ರಂದು ಕರೆದಿದ್ದ ಮಂಡಳಿಯ ಸಭೆಗೆ ಹನ್ನೊಂದು ಸದಸ್ಯರಲ್ಲಿ 5 ಸದಸ್ಯರು ಮಾತ್ರ ಹಾಜರಾಗಿದ್ದರು.

ಅದರಲ್ಲಿ ಸುಪ್ರೀಂಕೋರ್ಟ್‌ನ ನಿರ್ದೇಶನಗಳನ್ನು ''ಚರ್ಚೆ ಕೂಡ ಮಾಡಲಾಗಿಲ್ಲ'' ಎಂದು ನ್ಯಾಯಾಲಯ ಗಮನಿಸಿದೆ. ಜಸ್ಟಿಸ್ ಅಭಯ್ ಎಸ್ ಓಕಾ ಮತ್ತು ನ್ಯಾಯಮೂರ್ತಿ ಆಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠವು ಕೃಷಿ ತ್ಯಾಜ್ಯ ಸುಡುವ ಪ್ರಕರಣಗಳ ವಿರುದ್ಧ ಒಂದೇ ಒಂದು ಪ್ರಾಸಿಕ್ಯೂಷನ್ ಅನ್ನು ಪ್ರಾರಂಭಿಸಿಲ್ಲ ಎಂದು ಗಮನಿಸಿದೆ. ಸಲ್ಲಿಸಿದ ಅನುಸರಣೆ ವರದಿಯನ್ನು ಪೀಠವು ಪರಿಶೀಲಿಸುತ್ತಿರುವಾಗ ಈ ಹೇಳಿಕೆಗಳು ಬಂದವು.

### 67 ಭಾರತೀಯರು ಸ್ವದೇಶಕ್ಕೆ ವಾಪಸ್

**ಕಾಂಬೋಡಿಯಾ:** ಕಾಂಬೋಡಿಯಾದಲ್ಲಿನ ಭಾರತೀಯ ರಾಯಭಾರ ಕಚೇರಿಯು ಕಾಂಬೋಡಿಯಾದ ಆಂತರಿಕ ಸಚಿವಾಲಯದ ಸಹಯೋಗದೊಂದಿಗೆ ಮೋಸದ ಉದ್ಯೋಗ ಹಗರಣಗಳಲ್ಲಿ ಸಿಕ್ಕಿಬಿದ್ದ ಭಾರತೀಯ 67 ಪ್ರಜೆಗಳನ್ನು ಯಶಸ್ವಿಯಾಗಿ ರಕ್ಷಿಸಿ ಸ್ವದೇಶಕ್ಕೆ ಕಳುಹಿಸಿದೆ.

ಉದ್ಯೋಗಾಕಾಂಕ್ಷಿಗಳಿಗೆ ನಕಲಿ ಏಜೆಂಟ್‌ರಗಳ ಬಗ್ಗೆ ಎಚ್ಚರವಿರುವಂತೆ ರಾಯಭಾರಿ ಕಚೇರಿ ಎಚ್ಚರಿಕೆ ನೀಡಿದೆ. ಇತ್ತೀಚಿನ ಪ್ರಕರಣದಲ್ಲಿ, ಕಾಂಬೋಡಿಯಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಪೊಲೀಸರ ಸಹಾಯದಿಂದ 67 ಭಾರತೀಯರನ್ನು ರಕ್ಷಿಸಿದೆ. ಇಲ್ಲಿಯವರೆಗೆ, 15 ನಾಗರಿಕರು ಸೆಪ್ಟೆಂಬರ್ 30 ರಂದು ಭಾರತಕ್ಕೆ ಮರಳಿದ್ದಾರೆ ಮತ್ತು 24 ಜನರು ಅಕ್ಟೋಬರ್ 1 ರಂದು ಮರಳಿದ್ದಾರೆ.

ಉಳಿದ 28 ಮಂದಿ ಮುಂದಿನ ದಿನಗಳಲ್ಲಿ ಮರಳುವ ನಿರೀಕ್ಷೆಯಿದೆ. ರಾಯಭಾರ ಕಚೇರಿಯು ಈ ಭಾರತೀಯ ನಾಗರಿಕರನ್ನು ಕಾಂಬೋಡಿಯಾ ಪೊಲೀಸರ ಸಹಾಯದಿಂದ ಪ್ರತ್ಯೇಕ ಬ್ಯಾಚ್‌ಗಳಲ್ಲಿ ಭಾರತಕ್ಕೆ ಕಳುಹಿಸುತ್ತಿದೆ. ಉದ್ಯೋಗ ಮತ್ತು ಉತ್ತಮ ಸಂಬಳದ ಹೆಸರಿನಲ್ಲಿ ಕೆಲವು ಭಾರತೀಯ ಯುವಕರು ವಂಚನೆಗೆ ಬಲಿಯಾಗಿದ್ದಾರೆ ಎಂಬ ಮಾಹಿತಿ ರಾಯಭಾರ ಕಚೇರಿಗೆ ಸಿಕ್ಕಿದೆ.

ಏಜೆಂಟ್‌ಗಳು ಮತ್ತು ಸಾಮಾಜಿಕ ಮಾಧ್ಯಮ ಜಾಹೀರಾತುಗಳ ಮೂಲಕ ಕಾಂಬೋಡಿಯಾ ಮತ್ತು ಇತರ ಆಗ್ನೇಯ ಏಷ್ಯಾದ ದೇಶಗಳಲ್ಲಿ ಉದ್ಯೋಗಗಳನ್ನು ಹುಡುಕುತ್ತಿರುವಾಗ ಭಾರತೀಯ ನಾಗರಿಕರು ತೀವ್ರ ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ ಎಂದು ಕಾಂಬೋಡಿಯಾದಲ್ಲಿರುವ ಭಾರತೀಯ ರಾಯಭಾರ ಕಚೇರಿ ಹೇಳಿದೆ. ಜನವರಿ 2022 ರಿಂದ, ಕಾಂಬೋಡಿಯನ್ ಅಧಿಕಾರಿಗಳ ಸಹಕಾರದೊಂದಿಗೆ ರಾಯಭಾರ ಕಚೇರಿಯು 2024 ರ ಮೊದಲ ಒಂಬತ್ತು ತಿಂಗಳುಗಳಲ್ಲಿ ಸುಮಾರು 770 ಸೇರಿದಂತೆ 1,000 ಕ್ಕೂ ಹೆಚ್ಚು ಭಾರತೀಯ ಪ್ರಜೆಗಳಿಗೆ ಮರಳಲು ಅನುಕೂಲ ಮಾಡಿಕೊಟ್ಟಿದೆ.

### ಹಿಜ್ಬುಲ್ಲಾ ವಿರುದ್ಧದ ಯುದ್ಧದಲ್ಲಿ 8 ಇಸ್ರೇಲಿ ಸೈನಿಕರು ಸಾವು

**ಹಿಜ್ಬುಲ್ಲಾ ಉಗ್ರಗಾಮಿಗಳೊಂದಿಗೆ ಭೀಕರ ಯುದ್ಧ**

**ಲೆಬನಾನ್ :** ದಕ್ಷಿಣ ಲೆಬನಾನ್‌ನಲ್ಲಿ ನಡೆದ ಯುದ್ಧದಲ್ಲಿ ಎಂಟು ಇಸ್ರೇಲಿ ಸೈನಿಕರು ಸಾವಿಗೀಡಾಗಿದ್ದಾರೆ ಎಂದು ಇಸ್ರೇಲಿ ಮಿಲಿಟರಿ ಬುಧವಾರ ಹೇಳಿದೆ. ''ಕ್ಯಾಪ್ಟನ್ ಈಟಾನ್ ಇಟ್ಜಾಕ್ ಓಸ್ಟರ್, ಕ್ಯಾಪ್ಟನ್ ಹರೆಲ್ ಎಟಿಂಗರ್, ಕ್ಯಾಪ್ಟನ್ ಇಟಾಯ್ ಏರಿಯಲ್ ಗಿಯಾಟ್, ಸಾರ್ಜೆಂಟ್ ಪ್ರಥಮ ದರ್ಜೆ ನೋಮ್ ಬಾರ್ಜಿಲೇ, ಸಾರ್ಜೆಂಟ್ ಫಸ್ಟ್ ಕ್ಲಾಸ್ ಅಥವಾ ಮಂಟ್ಜುರ್, ಸಾರ್ಜೆಂಟ್ ಫಸ್ಟ್ ಕ್ಲಾಸ್ ನಝೂರ್ ಇಟ್ಕಿನ್, ಸ್ಟಾಫ್ ಸಾರ್ಜೆಂಟ್ ಅಲ್ಮ್ಕಿನ್ ಟೆರೆಫ್ ಮತ್ತು ಸ್ಟಾಫ್ ಸಾರ್ಜೆಂಟ್ ಇಡೊ ಬ್ರೋಯರ್ ಅವರು ಹಿಜ್ಬುಲ್ಲಾ ಭಯೋತ್ಪಾದಕರ ವಿರುದ್ಧದ ಹೋರಾಟದಲ್ಲಿ ಸಾವಿಗೀಡಾಗಿದ್ದಾರೆ . ಇಸ್ರೇಲ್ ದಕ್ಷಿಣ ಲೆಬನಾನ್‌ಗೆ ನೆಲದ ಆಕ್ರಮಣವನ್ನು ಪ್ರಾರಂಭಿಸಿದ ಕೇವಲ ಒಂದು ದಿನದ ನಂತರ ಸಾವುನೋವುಗಳು ವರದಿಯಾಗಿವೆ. ಇಸ್ರೇಲಿ ಪಡೆಗಳು ಲೆಬನಾನಿನ ಪ್ರದೇಶದೊಳಗೆ ಹಿಜ್ಬುಲ್ಲಾ ಉಗ್ರಗಾಮಿಗಳೊಂದಿಗೆ ಭೀಕರ ಯುದ್ಧಗಳಲ್ಲಿ ತೊಡಗಿವೆ, ಏಕೆಂದರೆ ಎರಡೂ ಕಡೆಯವರು ಪ್ರತ್ಯೇಕ ಹೇಳಿಕೆಗಳಲ್ಲಿ ನಡೆಯುತ್ತಿರುವ ಹೋರಾಟವನ್ನು ದೃಢಪಡಿಸಿದರು.ಮೂರು ಇಸ್ರೇಲಿ ಮರ್ಕವಾ ಟ್ಯಾಂಕ್‌ಗಳನ್ನು ನಾಶಪಡಿಸಲಾಗಿದೆ ಎಂದು ಹಿಜ್ಬುಲ್ಲಾ ಹೇಳಿಕೊಂಡಿದೆ. ಈ ಪ್ರದೇಶದಲ್ಲಿನ ಅತ್ಯಂತ ಶಕ್ತಿಶಾಲಿ ನಾನ್-ಸ್ಟೇಟ್ ಮಿಲಿಟರಿ ಗುಂಪುಗಳಲ್ಲಿ ಒಂದೆಂದು ವ್ಯಾಪಕವಾಗಿ ಪರಿಗಣಿಸಲ್ಪಟ್ಟಿರುವ ಹಿಜ್ಬುಲ್ಲಾ, ಬುಧವಾರದ ಯುದ್ಧದಲ್ಲಿ ಮೂರು ಇಸ್ರೇಲಿ ಮರ್ಕವಾ ಟ್ಯಾಂಕ್‌ಗಳನ್ನು ನಾಶಪಡಿಸಲಾಗಿದೆ ಎಂದು ಹೇಳಿಕೊಂಡಿದೆ.

